# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 27 ಬುಧವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 162 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4
























## ಮೈಸೂರು ರೇಸ್ ಕ್ಲಬ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ : ಪಿ.ಬಿ.ನಂ.11, ರೇಸ್ ಕೋರ್ಸ್ ರಸ್ತೆ, ಮೈಸೂರು–570010
CIN:U85110KA1968PLC001720; Tel.No.2521675;
Email: secretary@mysoreraceclub.com; Website: mysoreraceclub.com

### ಪ್ರಕಟಣೆ


### ವಾರ್ಷಿಕ ಮಹಾಸಭೆ ಮುಂದೂಡಿಕೆ

ಸದಸ್ಯರಿಗೆ ತಿಳಿಸುವುದೇನೆಂದರೆ, ಅನಿರೀಕ್ಷಿತ ಹಾಗೂ ಅನಿವಾರ್ಯ ಕಾರಣಗಳಿಂದ ಉದ್ದೇಶಿತ ಕರ್ನಾಟಕ ರಾಜ್ಯ ಬಂದ್ ಹಿನ್ನೆಲೆಯಲ್ಲಿ **29ನೇ ಸೆಪ್ಟೆಂಬರ್ 2023ರ ಶುಕ್ರವಾರದಂದು** ನಿಗದಿಪಡಿಸಿದ್ದ ಕ್ಲಬ್‌ನ (ಕಂಪನಿ) **55ನೇ ವಾರ್ಷಿಕ ಮಹಾಸಭೆಯನ್ನು** ನಡೆಸುವುದು ಸಾಧ್ಯವಾಗುತ್ತಿಲ್ಲ. ಹಾಗಾಗಿ ಕಂಪನಿಯ ನಿರ್ದೇಶಕ ಮಂಡಳಿಯು, ವಾರ್ಷಿಕ ಮಹಾಸಭೆಯನ್ನು ಮುಂದೂಡಿ, **8ನೇ ಅಕ್ಟೋಬರ್, ಭಾನುವಾರ 2023ರಂದು ಬೆಳಿಗ್ಗೆ 11 ಗಂಟೆಗೆ** ಕ್ಲಬ್ (ಕಂಪನಿ)ನ ಪ್ರಧಾನ ಕಚೇರಿಯಲ್ಲಿ ಈಗಾಗಲೇ ಪ್ರಕಟಣಾ ಫಲಕದಲ್ಲಿ **4ನೇ ಸೆಪ್ಟೆಂಬರ್ 2023ರಲ್ಲಿ** ನಮೂದಿಸಿರುವ ಕಾರ್ಯಕ್ರಮ ಪಟ್ಟಿಯಂತೆ ನಡೆಯಲಿದೆ. ಇದಕ್ಕೆ ಸಂಬಂಧಿಸಿದಂತೆ ಮೂಲ ದಿನಾಂಕ **29ನೇ ಸೆಪ್ಟೆಂಬರ್ 2023ರಂತೆ** ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಸದಸ್ಯರುಗಳಿಗೆ ಕಳುಹಿಸಲಾಗಿದೆ.

ಆಡಳಿತ ಸಮಿತಿಯ ಆದೇಶಾನುಸಾರ
ಮೈಸೂರು ರೇಸ್ ಕ್ಲಬ್ ಲಿಮಿಟೆಡ್

ದಿನಾಂಕ: 26–09–2023 ಕಾರ್ಯದರ್ಶಿ ಹಾಗೂ ಸಿಇಒ

ಸೂಚನೆ : ಒಂದು ವೇಳೆ ಸದಸ್ಯರ ವಿಳಾಸ ಬದಲಾಗಿದ್ದಲ್ಲಿ ಕೂಡಲೇ ತಿಳಿಸುವುದು.






## ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಸೆ.29ರಂದು ಬೆಳದಿಂಗಳ ಸಂಗೀತ





ಎಸ್.ಅರವಿಂದ ಮತ್ತೂರು ಶ್ರೀನಿಧಿ ಬಿ.ಎಸ್.ಪ್ರಶಾಂತ್

ಮೈಸೂರು ಸೆ.26–ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಸೆ.29ರ ಶುಕ್ರವಾರ ಸಂಜೆ 6 ಗಂಟೆಗೆ ಜಗದ್ಗುರು ಶ್ರೀ ಶಿವ ರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–259ರ ಅಂಗವಾಗಿ ವಿದ್ವಾನ್ ಕಲ್ಯಾಣಪುರದ ಎಸ್.ಅರವಿಂದ ಅವರಿಂದ ಗಾಯನ ವನ್ನು ಏರ್ಪಡಿಸಲಾಗಿದೆ.

ಯುವ ಕಲಾಭಾರತಿ ವಿದ್ವಾನ್ ಕಲ್ಯಾಣ ಪುರ ಎಸ್.ಅರವಿಂದ್ ಇಂದು ಅತ್ಯಂತ ಬೇಡಿಕೆಯಲ್ಲಿರುವ ಕರ್ನಾಟಕ ಸಂಗೀತ ಗಾಯಕರು. ಉತ್ತಮ ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಂಪರೆಯ ಕುಟುಂಬದಲ್ಲಿ ಜನಿಸಿದವರು. ಇವರ ಚಿಕ್ಕಪ್ಪಂದಿರು ಖ್ಯಾತ ಹರಿಕಥಾ ವಿದ್ವಾಂಸರಾದ ಕಲ್ಯಾಣಪುರದ ಕೆ.ಆರ್.ಅರಾಮುದಾಚಾರಿಯರ್ ಮತ್ತು ಕೆ.ಆರ್.ವೀರರಾಘವಾಚಾರಿಯರ್. ಖ್ಯಾತ ಸಂಗೀತ ದಿಗ್ಗಜ ಟಿ.ಎನ್.ಶೇಷ ಗೋಪಾಲನ್ ಧರ್ಮಪತ್ನಿ ಶ್ರೀಮತಿ ಸುಧಾ ಅವರ ಬಳಿ 4ನೆಯ ವರ್ಷದಿಂದಲೇ ಸಂಗೀತದ ಪ್ರಾರಂಭಿಕ ಮಾರ್ಗದರ್ಶನ. ಅನಂತರ ಶೇಷಗೋಪಾಲನ್‌ರವರ ಹಿರಿಯ ಶಿಷ್ಯ ಎಸ್.ಕಸ್ತೂರಿರಂಗನ್‌ರವರ ಬಳಿ ಸಂಗೀತ ಅಧ್ಯಯನ.

ಮದರಾಸ್ ಮ್ಯೂಸಿಕ್ ಅಕಾಡೆಮಿಯಲ್ಲಿ 2015, 2016 ಮತ್ತು 2017ರಲ್ಲಿ ಉತ್ತಮ ಸಂಗೀತಗಾರ ಪ್ರಶಸ್ತಿ ಮತ್ತು ಷಣ್ಮುಖ ಸಂಗೀತ ಶಿರೋಮಣಿ ಪ್ರಶಸ್ತಿ; ಮುಂಬಯಿಯ ಷಣ್ಮುಖಾನಂದ ಸಂಗೀತ ಸಭೆಯಿಂದ ಭಾರತರತ್ನ ಎಂ.ಎಸ್.ಸುಬ್ಬಲಕ್ಷ್ಮಿ ಫೆಲೋಷಿಪ್, ಎ.ಕೆ.ಪಡಗೋಪನ್ ಯುವ ಕಲಾಕಾರ್ ಪುರಸ್ಕಾರ; ನಾದ ಇನ್ಬಾ ಮತ್ತು ಭಾರತ ಕಲಾಂಜಲಿ ಸಂಸ್ಥೆಯಿಂದ ಶಿವ ಸರೋಜ ಕಲ್ಚರಲ್ ವಿದ್ಯಾರ್ಥಿ ವೇತನ; ಚೆನ್ನೈನ ಭಾರತ ಕಲಾ ಚಾರ್ ಪ್ರಶಸ್ತಿ ಮುಂತಾದ ಪ್ರತಿಷ್ಠಿತ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ವಿದ್ವಾನ್ ಮತ್ತೂರು ಶ್ರೀನಿಧಿಯವರು ವಿದ್ವಾನ್ ಆರ್.ಆರ್.ಕೇಶವಮೂರ್ತಿ ಅವರಲ್ಲಿ ವಯೋಲಿನ್ ವಾದನವನ್ನು ಮತ್ತು ವಿದ್ವಾನ್ ಆರ್.ಎಸ್.ತ್ಯಾಗರಾಜನ್ ಅವರಲ್ಲಿ ಶಾಸ್ತ್ರೀಯ ಸಂಗೀತವನ್ನು ಅಭ್ಯಸಿಸಿದ್ದಾರೆ. ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಎಂ. ಮ್ಯೂಸಿಕ್ ಪದವೀಧರರು. ಅನನ್ಯ ಪ್ರತಿಭಾ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನದ 'ಎ' ಶ್ರೇಣಿ ಕಲಾವಿದರು. ಯುರೋಪ್ ಹಾಗೂ ಮಧ್ಯ ಪ್ರಾಚ್ಯ ದೇಶಗಳಲ್ಲಿ ಸಂಚರಿಸಿ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ವಿದ್ವಾನ್ ಬಿ.ಎಸ್.ಪ್ರಶಾಂತ್ ಪ್ರಾರಂಭಿಕ ಶಿಕ್ಷಣವನ್ನು ಕೆ.ಎಸ್.ಕೃಷ್ಣಮೂರ್ತಿ ಮತ್ತು ಸಿ.ಪಿ.ವ್ಯಾಸವಿಠ್ಠಲ ಅವರ ಬಳಿ ಪಡೆದಿರುವರು. ಪ್ರಸ್ತುತ ಖ್ಯಾತ ಮೃದಂಗ ಕಲಾವಿದರಾದ ಡಾ.ಪತ್ರಿ ಸತೀಶ್ ಕುಮಾರ್ ಅವರ ಬಳಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ದೇಶವಿದೇಶಗಳ ಹಲವಾರು ವೇದಿಕೆಗಳಲ್ಲಿ ಖ್ಯಾತ ವಿದ್ವಾಂಸರುಗಳಿಗೆ ಪಕ್ಕವಾದ್ಯ ಸಹಕಾರ ನೀಡಿದ್ದಾರೆ. ಮದ್ರಾಸ್ ಮ್ಯೂಸಿಕ್ ಅಕಾಡೆಮಿಯಿಂದ 4 ಬಾರಿ 'ಅತ್ಯುತ್ತಮ ಮೃದಂಗ ವಾದಕ' ಪ್ರಶಸ್ತಿ ಪಡೆದ ಹಿರಿಮೆ ಇವರದು. ಮುಂಬಯಿಯ ಷಣ್ಮುಖಾನಂದ ಫೈನ್ ಆರ್ಟ್ ಸಂಸ್ಥೆಯ 'ಅತ್ಯುತ್ತಮ ಪಕ್ಕವಾದನಕಾರ' ಪ್ರಶಸ್ತಿ, 'ನಂದಿ ವಿದ್ಯಾವಿಶಾರದ' ಮತ್ತು 'ಸುನಾದ ವಿದ್ಯಾನಿಧಿ', ಬೆಂಗಳೂರಿನ ಪರ್ಕಸಿವ್ ಆರ್ಟ್ ಸೆಂಟರ್‌ನ ಸಿಎಂಎ ಎನ್‌ಎ ಎಂಡೋಮೆಂಟ್ ಅವಾರ್ಡ್ ಪ್ರಶಸ್ತಿಗಳು ಇವರಿಗೆ ಲಭಿಸಿವೆ.

# ಈ ಬಾರಿ ಸಂಭ್ರಮದ ಮನೆ ಮನೆ ದಸರಾ; ಪಾಲಿಕೆಯಿಂದ ವಾರ್ಡ್‌ಗೆ 3 ಲಕ್ಷ ಮಂಜೂರು



ಮೈಸೂರು, ಸೆ.26(ಜಿಎ)–ದಸರಾ ಮಹೋತ್ಸವಕ್ಕೆ ಮೈಸೂರು ಮಹಾನಗರ ಪಾಲಿಕೆಯೂ ಸಜ್ಜಾಗುತ್ತಿದ್ದು, ಮನೆ–ಮನೆ ದಸರಾ ಮಾಡಲು ಪ್ರತಿ ವಾರ್ಡ್‌ಗೆ ತಲಾ 3 ಲಕ್ಷ ರೂ. ನೀಡಲು ಚಿಂತಿಸಲಾಗಿದೆ.

ನಾಡಹಬ್ಬ ದಸರಾ ಮಹೋತ್ಸವದ ಮೆರುಗನ್ನು ಮೈಸೂರು ನಗರದಾದ್ಯಂತ ಹೆಚ್ಚಿಸಲು ಕಳೆದ 4 ವರ್ಷಗಳಿಂದ ಪಾಲಿಕೆ ವತಿಯಿಂದ ಪ್ರತಿ ವಾರ್ಡ್‌ನಲ್ಲಿಯೂ ಮನೆ–ಮನೆ ದಸರಾ ಆಯೋಜಿಸುತ್ತಿದ್ದು, ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಆದರೆ, ಅನುದಾನ ಹೆಚ್ಚಿಸಬೇಕೆಂಬ ಕೂಗು ಮಾತ್ರ ಪ್ರತಿ ಬಾರಿಯೂ ಕೇಳಿ ಬರುತ್ತಿದ್ದು, ಅದರಂತೆ ಅನುದಾನವನ್ನು ಹೆಚ್ಚಿಸಲು ಪಾಲಿಕೆ ಚಿಂತಿಸಿದೆ.

ಕಳೆದ ವರ್ಷದ ದಸರಾ ಸಂಬಂಧ ವಿಶೇಷ ಕೌನ್ಸಿಲ್ ಸಭೆಯಲ್ಲಿ ದಸರಾ ಮಹೋತ್ಸವ ಕೇವಲ ನಗರದ ಹೃದಯ ಭಾಗಕ್ಕೆ ಮಾತ್ರ ಸೀಮಿತವಾಗಿದೆ. ನಮ್ಮ ವಾರ್ಡ್‌ಗಳಲ್ಲಿಯೂ ದಸರಾ ಆಚರಣೆ ಮಾಡಬೇಕು ಎಂದು ಪಟ್ಟು ಹಿಡಿದ ಪಾಲಿಕೆ ಸದಸ್ಯರು, ಐದು ಲಕ್ಷ ರೂ. ಅನುದಾನ ನೀಡಬೇಕು ಎಂದು ಒತ್ತಾಯಿಸಿದ್ದರು. ಎಲ್ಲಾ ಸದಸ್ಯರ ಒತ್ತಾಯಕ್ಕೆ ಮಣಿದ ಮೇಯರ್ ಶಿವಕುಮಾರ್ ಪ್ರತಿ ವಾರ್ಡ್‌ಗೆ 2 ಲಕ್ಷ ರೂ. ಅನುದಾನ ನೀಡುವುದಾಗಿ ಘೋಷಿಸಿದ್ದರು. ಈ ಹಿಂದೆ ಎಸ್.ಎ.ರಾಮದಾಸ್ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವೇಳೆ ಮನೆ ಮನೆ ದಸರಾಗೆ ಚಾಲನೆ ನೀಡಿದ್ದರು. ಆಗ ಮನೆ ಮನೆ ದಸರಾ ಎಲ್ಲರನ್ನೂ ಒಳಗೊಂಡಂತೆ ಆಯೋಜನೆಗೊಂಡು ಸಂಭ್ರಮಕ್ಕೂ ಕಾರಣವಾಗಿತ್ತು. 2019ರಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿ.ಸೋಮಣ್ಣ ಕೂಡ ಪ್ರತಿ ವಾರ್ಡ್‌ಗೆ ಲಕ್ಷ ರೂ. ಅನುದಾನ ನೀಡಿದ್ದರು. ಕಳೆದ ವರ್ಷ ವಿಶೇಷ ಕೌನ್ಸಿಲ್ ಸಭೆಯಲ್ಲಿ ಸದಸ್ಯರ ಒತ್ತಾಯದ ಮೇರೆಗೆ ಪ್ರತಿ ವಾರ್ಡ್‌ಗೆ 2 ಲಕ್ಷ ರೂ. ನಂತೆ 1.3 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿತ್ತು. ವಲಯ ಆಯುಕ್ತರ ಮೂಲಕ ಪಾಲಿಕೆ ಸದಸ್ಯರು ಅನುದಾನ ಬಳಕೆ ಮಾಡಲು ಅವಕಾಶ ನೀಡಲಾಗಿತ್ತು.

ಕೆಲ ಸದಸ್ಯರು ಪಾಲಿಕೆ ನೀಡಿದ ಅನುದಾನದೊಂದಿಗೆ ಹೆಚ್ಚುವರಿಯಾಗಿ ಸ್ವಂತ ಖರ್ಚಿನಲ್ಲಿ ವಾರ್ಡಿನಲ್ಲಿ ದಸರಾ ಮಹೋತ್ಸವ ಆಚರಣೆ ಮಾಡಿದ್ದರು. ಕೆಲವರು ಸಿದ್ಧತೆ ನಡೆಸಿ ಕೊನೆ ಕ್ಷಣದಲ್ಲಿ ಸುಮ್ಮನಾದರು. ಇನ್ನೂ ಸಾಕಷ್ಟು ವಾರ್ಡ್‌ಗಳಲ್ಲಿ ಪಾಲಿಕೆ ಸದಸ್ಯರು ಆಚರಿಸಲು ಮುಂದಾಗಲಿಲ್ಲ. ಕಳೆದ ಬಾರಿ ಕೊನೆ ಕ್ಷಣದಲ್ಲಿ ಅನುದಾನ ನೀಡಿದ್ದರಿಂದ ಕಾರ್ಯಕ್ರಮ ರೂಪಿಸಲು ಆಗಲಿಲ್ಲ ಎಂದು ಕೆಲ ಸದಸ್ಯರು ತಿಳಿಸಿದರು. ತಮ್ಮ ವಾರ್ಡಿನ ಅಭಿವೃದ್ಧಿ ಮೊದಲು, ಸಂಭ್ರಮ ಆಚರಣೆ ಅನಂತರ ಎಂದು ಭಾವಿಸಿದ ಅನೇಕರು 2 ಲಕ್ಷ ರೂ. ಅನುದಾನವನ್ನು ಅನ್ಯ ಬಳಕೆಗೆ ನೀಡುವಂತೆ ಕೋರಿದ್ದರು. ಅದರಂತೆ ಮೇಯರ್ ಹಾಗೂ ಪಾಲಿಕೆ ಆಯುಕ್ತರು ಇದಕ್ಕೆ ವಿನಾಯಿತಿ ನೀಡಿದ ಹಿನ್ನೆಲೆಯಲ್ಲಿ ಕೆಲ ಸದಸ್ಯರು ಉದ್ಯಾನವನ ಅಭಿವೃದ್ಧಿ, ರಸ್ತೆ ಅಭಿವೃದ್ಧಿ ಸೇರಿ ನಾನಾ ಉದ್ದೇಶಕ್ಕೆ ಅನುದಾನ ಬಳಸಿಕೊಂಡರು.

ಈ ಬಾರಿ ಸಮರ್ಪಕ ಮಳೆ ಇಲ್ಲದೆ ರಾಜ್ಯ ಬರದ ಛಾಯೆಯಲ್ಲಿ ಮುಳುಗಿರುವ ಹಿನ್ನೆಲೆಯಲ್ಲಿ ಅದ್ಧೂರಿ ದಸರಾ ಬದಲು ಸಾಂಪ್ರದಾಯಿಕ ದಸರಾ ಮಾಡಲು ನಿರ್ಧರಿಸಿದ್ದಾರೆ. ಇದರ ನಡುವೆ ಮೇಯರ್ ಮನೆ ಮನೆ ದಸರಾ ನಡೆಸಲು ನಿರ್ಧರಿಸಿದ್ದು, ಅದರಂತೆ ಅನುದಾನವನ್ನು ಹೆಚ್ಚಿಸಲು ಮುಂದಾಗಿದ್ದಾರೆ. ಪ್ರತಿ ವಾರ್ಡ್‌ಗೂ ಈ ಬಾರಿ ತಲಾ 3 ಲಕ್ಷ ರೂ. ಗಳನ್ನು ಮನೆ ಮನೆ ದಸರಾಗೆ ನೀಡಲಾಗುತ್ತಿದೆ.

### ಮನೆ–ಮನೆ ದಸರಾ ಕಲ್ಪನೆ

ಪ್ರತಿ ವಾರ್ಡಿನಲ್ಲೂ ಅಲ್ಲಿನ ನಿವಾಸಿಗಳಿಗೆ ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆ ಜತೆಗೆ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸ್ಥಳೀಯರನ್ನು ಒಳಗೊಂಡಂತೆ ಕಾರ್ಯಕ್ರಮ ಆಯೋಜಿಸುವುದು ಮನೆ ಮನೆ ದಸರಾ ಪರಿಕಲ್ಪನೆಯಾಗಿದೆ.

> **ಪಾಲಿಕೆ ವತಿಯಿಂದ ಈ ಬಾರಿ ಮನೆ ಮನೆ ದಸರಾ ಮಾಡಲಾಗುತ್ತಿದ್ದು, ಪಾಲಿಕೆ ಸದಸ್ಯರು 5 ಲಕ್ಷ ರೂ. ಅನುದಾನ ನೀಡುವಂತೆ ಮನವಿ ಮಾಡಿದ್ದಾರೆ. ಆದರೆ, 3 ಲಕ್ಷ ರೂ. ಅನುದಾನ ನೀಡಲಾಗುತ್ತಿದೆ.**
> –ಶಿವಕುಮಾರ್, ಮೇಯರ್

## ಸಂಕಷ್ಟ ಸೂತ್ರಕ್ಕೆ ಆಗ್ರಹಿಸಿ ಇಂದು ಪ್ರಜಾ ಪಾರ್ಟಿಯಿಂದ ಅಂಚೆ ಪತ್ರ ಚಳವಳಿ

ಮೈಸೂರು, ಸೆ.26(ಬಿಎಲ್‌ಯು)– ಕಾವೇರಿ ನೀರು ಹಂಚಿಕೆ ಸಂಬಂಧ ಸಂಕಷ್ಟ ಸೂತ್ರ ರೂಪಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಧ್ಯ ಪ್ರವೇಶ ಮಾಡುವಂತೆ ಆಗ್ರಹಿಸಿ ಕರ್ನಾಟಕ ಪ್ರಜಾ ಪಾರ್ಟಿ(ರೈತ ಪರ್ವ) ಮೈಸೂರಿನಲ್ಲಿ ನಾಳೆ ಅಂಚೆ ಪತ್ರ ಚಳವಳಿ ನಡೆಸಲಿದೆ. ನಾಳೆ ಮಧ್ಯಾಹ್ನ 12 ಗಂಟೆಗೆ ಮೈಸೂರಿನ ನ್ಯಾಯಾಲಯದ ಮುಂದೆ ಅಂಚೆ ಪತ್ರ ಚಳವಳಿ ನಡೆಸಲಾಗುವುದು ಎಂದು ಪಾರ್ಟಿಯ ನಗರಾಧ್ಯಕ್ಷ ಶ್ರೀನಿವಾಸ್ ಆರ್ ತಿಳಿಸಿದ್ದಾರೆ.

ಕಾವೇರಿ ನೀರು ಬಿಡುವಂತೆ ನ್ಯಾಯಾಲಯ ಆದೇಶ ನೀಡಿದೆ. ಆದರೆ ನಮ್ಮ ಜಲಾಶಯಗಳಲ್ಲಿ ನೀರು ಬರಿದಾಗುತ್ತಿರುವ ಕಾರಣ ನೀರು ಬಿಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿರುವ, ಶ್ರೀನಿವಾಸ್, ಪ್ರಧಾನಿ ನರೇಂದ್ರ ಮೋದಿ ಮಧ್ಯ ಪ್ರವೇಶಿಸಿ ಸಂಕಷ್ಟ ಸೂತ್ರ ರೂಪಿಸಿ, ಸಮಸ್ಯೆ ಬಗೆಹರಿಸಬೇಕೆಂದು ಒತ್ತಾಯಿಸಿದ್ದಾರೆ. ಈ ಹಿನ್ನೆಲೆ ಪ್ರಧಾನಮಂತ್ರಿಗಳಿಗೆ ಅಂಚೆ ಪತ್ರ ಬರೆಯುವ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

## ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನ

ಮೈಸೂರು,ಸೆ.26–ಜವಹಾರ ನವೋದಯ ವಿದ್ಯಾಲಯದ 2024–25ನೇ ಸಾಲಿನ 9 ಮತ್ತು 11ನೇ ತರಗತಿ ಶೈಕ್ಷಣಿಕ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಿದ್ದು, www.navodaya.gov.in ಮೂಲಕ ಅರ್ಜಿ ಸಲ್ಲಿಸಲು ಅ.31 ಕೊನೇ ದಿನ. 2024ರ ಫೆಬ್ರವರಿ 10ರಂದು ಪರೀಕ್ಷೆ ನಡೆಯಲಿದ್ದು, ಮಾಹಿತಿಗಾಗಿ www.navodaya.gov.in ಅಥವಾ ದೂ.ಸಂ: 0821–2970040 ಅನ್ನು ಸಂಪರ್ಕಿಸಬಹುದು.

## ಅ.3ರಿಂದ ಸುದರ್ಶನ ಕ್ರಿಯೆ ಶಿಬಿರ

ಮೈಸೂರು,ಸೆ.26–ಶ್ರೀ ರವಿಶಂಕರ್ ಗುರುದೇವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಅ.3ರಿಂದ 7ರವರೆಗೆ ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30ರವರೆಗೆ ನಡೆಯಲಿದೆ. ಮಾಹಿತಿಗೆ 9480476825 ಸಂಪರ್ಕಿಸಬಹುದು.



ಶಿಕ್ಷಣ ಇಲಾಖೆ ಮೈಸೂರು ಉತ್ತರ ವಲಯದ ವಿನಾಯಕನಗರ ಕ್ಲಸ್ಟರ್ ವತಿಯಿಂದ ಆಯೋಜಿಸಿದ್ದ ಕಲೋತ್ಸವ ಸ್ಪರ್ಧೆಯಲ್ಲಿ ಮೈಸೂರಿನ ಯಾದವಗಿರಿಯ ಲಲಿತಾ ಪ್ರೌಢ ಶಾಲೆಯ ಕುಮಾರಿ ಡಯಾನಾ ಟ್ರೇಜಾ ರೊಜೊರಿಂಯೊ ಪ್ರಥಮ ಬಹುಮಾನ ಪಡೆದರು.

## ಮುಂಗಾರು ಹಂಗಾಮಿನ ರೈತರ ಬೆಳೆ ಸಮೀಕ್ಷೆ ಆ್ಯಪ್



ಮೈಸೂರು,ಸೆ.26–2023–24ನೇ ಸಾಲಿನ ಬೆಳೆ ಸಮೀಕ್ಷೆ ಕಾರ್ಯಕ್ರಮದ ಭಾಗವಾಗಿ ಸರ್ಕಾರದ ಕೃಷಿ ಇಲಾಖೆ ಪ್ರಸಕ್ತ ಸಾಲಿನ ತಡ ಮುಂಗಾರು ಹಂಗಾಮಿನ ರೈತರ ಬೆಳೆ ಸಮಿಕ್ಷೆ ಆ್ಯಪ್ ಅನ್ನು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಬಿಡುಗಡೆ ಮಾಡಿರುತ್ತದೆ. ಸದರಿ ಆ್ಯಪ್ ಅನ್ನು ಬಳಸಿಕೊಂಡು ಸ್ವತಃ ರೈತರೇ ತಮ್ಮ ಜಮೀನುಗಳಲ್ಲಿ ಬೆಳೆದಿರುವ ಬೆಳೆಗಳ ಸಮೀಕ್ಷೆಯನ್ನು ಮಾಡಿ ವಿವರಗಳನ್ನು ಅಪ್‌ಲೋಡ್ ಮಾಡಬಹುದಾಗಿದೆ.

**ಆ್ಯಪ್‌ನ ವೈಶಿಷ್ಟ್ಯತೆಗಳು:** ರೈತರ ಜಮೀನಿನಲ್ಲಿ ಬೆಳೆದಿರುವ ಬೆಳೆಗಳ ಮಾಹಿತಿಯನ್ನು ರೈತರೇ ನಿಖರವಾಗಿ ದಾಖಲಿಸಬಹುದು. ಸದರಿ ಬೆಳೆ ಸಮೀಕ್ಷೆ ಮಾಹಿತಿಯನ್ನು ಬೆಳೆ ವಿಮೆ, ಬೆಳೆ ನಷ್ಟ ಪರಿಹಾರ, ಬೆಂಬಲ ಬೆಲೆ, ಕೃಷಿ ಸಾಲ ಸೌಲಭ್ಯ ಮತ್ತು ಸರ್ಕಾರದ ವಿವಿಧ ಯೋಜನೆಗಳಡಿ ಸವಲತ್ತುಗಳನ್ನು ರೈತರಿಗೆ ಒದಗಿಸಲು ಮತ್ತು RTCಯಲ್ಲಿ ಬೆಳೆ ಮಾಹಿತಿ ಅಳವಡಿಸಲು ಬಳಸಲಾಗುತ್ತದೆ. ರೈತರ ತಡ ಮುಂಗಾರು ಬೆಳೆ ಸಮೀಕ್ಷೆ 2023–24 ಆ್ಯಪ್ ಅನ್ನು ಸಾರ್ವಜನಿಕರು ಗೂಗಲ್ ಪ್ಲೇ ಸ್ಟೋರ್‌ನಲ್ಲಿ "ಮುಂಗಾರು ರೈತರ ಬೆಳೆ ಸಮೀಕ್ಷೆ 2023" ಎಂದು ಟೈಪ್ ಮಾಡಿ ಅಥವಾ https://play.google.com/store/apps/details?id=com.csk.farmer23_24.cropsurvey ಲಿಂಕ್ ಅನ್ನು ಬಳಸಿ ಡೌನ್‌ಲೋಡ್ ಮಾಡಿಕೊಳ್ಳಬೇಕು. ನಂತರ ತಮ್ಮ ಆಧಾರ್ ಕಾರ್ಡ್‌ನ ಮೂಲಕ ಇ–KYC ಪ್ರಕ್ರಿಯೆ ಪೂರ್ಣಗೊಳಿಸಿ ನೋಂದಾಯಿಸಿಕೊಂಡು ತಮ್ಮ ಜಮೀನಿನ ವಿವರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ಆನಂತರ ತಮ್ಮ ಜಮೀನುಗಳಿಗೆ ತೆರಳಿ ಸಂಬಂಧಪಟ್ಟ ಸರ್ವೆ ನಂಬರ್‌ನಲ್ಲಿ ಬೆಳೆದಿರುವ ಬೆಳೆಗಳ ಛಾಯಾಚಿತ್ರಗಳನ್ನು ತೆಗೆದು ಅಪ್‌ಲೋಡ್ ಮಾಡಬೇಕು. ಮಾಹಿತಿಗಾಗಿ ರೈತರು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರ, ತೋಟಗಾರಿಕೆ, ರೇಷ್ಮೆ, ಕಂದಾಯ ಇಲಾಖೆ ಕಚೇರಿಗಳನ್ನು ಅಥವಾ ಆಯಾ ಗ್ರಾಮಗಳಿಗೆ ನಿಯೋಜಿಸಲಾಗಿರುವ ಖಾಸಗಿ ನಿವಾಸಿಗಳನ್ನು ಅಥವಾ ಬೆಳೆ ಸಮೀಕ್ಷೆ ಸಹಾಯವಾಣಿ ಸಂಖ್ಯೆ: 8448447715 ಸಂಪರ್ಕಿಸಬಹುದು.

## ಅ.2ರಂದು ಕೆ' ಸ್ಕೂಲ್ ಉದ್ಘಾಟನಾ ಸಮಾರಂಭ

ಮೈಸೂರು, ಸೆ.26 –ಮೈಸೂರಿನ ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದಲ್ಲಿ (2ನೇ ಪೊಲೀಸ್ ಬಡಾವಣೆ) ಕೆ' ಸ್ಕೂಲ್–ದಿ ಕೃಷ್ಣಮೂರ್ತಿ ವರ್ಲ್ಡ್ ಸ್ಕೂಲ್‌ನ ಉದ್ಘಾಟನಾ ಸಮಾರಂಭವನ್ನು ಅಕ್ಟೋಬರ್ 2ರಂದು ಬೆಳಗ್ಗೆ 11.30ಕ್ಕೆ ಏರ್ಪಡಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ವ್ಯಾಲಿ ಸ್ಕೂಲ್‌ನಲ್ಲಿರುವ ದಿ ಕೃಷ್ಣಮೂರ್ತಿ ಸ್ಟಡಿ ಸೆಂಟರ್‌ನ ಗುರುವಿಂದರ್ ಸಿಂಗ್ ಭಾಗವಹಿಸುವರು. ವರುಣ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಗೌರಮ್ಮ ಪಾಪಣ್ಣ ಅವರು ಸ್ಕೂಲ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ವಿವೇಕಾನಂದ ಮತ್ತು ದಿ ಕೃಷ್ಣಮೂರ್ತಿ ಸ್ಟಡಿ ಸೆಂಟರ್‌ನ ಎನ್.ಎಸ್.ಮುರಳಿ ಭಾಗವಹಿಸುವರು. ಗೌರವ ಅತಿಥಿಗಳಾಗಿ ಬೆಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಉಪಕುಲಪತಿ ಪ್ರೊ. ಜಗದೀಶ್ ಪ್ರಕಾಶ್ ಭಾಗವಹಿಸುವರು.

## ನೀರಿನ ಮಟ್ಟ

| ಕೆಆರ್‌ಎಸ್ ಅಣೆಕಟ್ಟು | ಕಬಿನಿ ಅಣೆಕಟ್ಟು | ಹಾರಂಗಿ ಅಣೆಕಟ್ಟು |
|---|---|---|
| ಗರಿಷ್ಠ ಮಟ್ಟ 124.80 ಅಡಿ | ಗರಿಷ್ಠ ಮಟ್ಟ 2,284.00 ಅಡಿ | ಗರಿಷ್ಠ ಮಟ್ಟ 2,859.00 ಅಡಿ |
| ಇಂದಿನ ಮಟ್ಟ 96.80 ಅಡಿ | ಇಂದಿನ ಮಟ್ಟ 2,273.82 ಅಡಿ | ಇಂದಿನ ಮಟ್ಟ 2,854.91 ಅಡಿ |
| ಹಿಂದಿನ ವರ್ಷದ ಮಟ್ಟ 124.00 ಅಡಿ | ಹಿಂದಿನ ವರ್ಷದ ಮಟ್ಟ 2,282.91 ಅಡಿ | ಹಿಂದಿನ ವರ್ಷದ ಮಟ್ಟ 2,857.30 ಅಡಿ |
| ನಿನ್ನೆಯ ಮಟ್ಟ 96.70 ಅಡಿ | ನಿನ್ನೆಯ ಮಟ್ಟ 2,274.24 ಅಡಿ | ನಿನ್ನೆಯ ಮಟ್ಟ 2,855.42 ಅಡಿ |
| ಇಂದಿನ ಒಳಹರಿವು 7,134 ಕ್ಯುಸೆಕ್ | ಇಂದಿನ ಒಳಹರಿವು 2,384 ಕ್ಯುಸೆಕ್ | ಇಂದಿನ ಒಳಹರಿವು 835 ಕ್ಯುಸೆಕ್ |
| ಇಂದಿನ ಹೊರಹರಿವು 6,201 ಕ್ಯುಸೆಕ್ | ಇಂದಿನ ಹೊರಹರಿವು 4,890 ಕ್ಯುಸೆಕ್ | ಇಂದಿನ ಹೊರಹರಿವು 2,800 ಕ್ಯುಸೆಕ್ |



## ವಿಜ್ಞಾನ ವಸ್ತುಪ್ರದರ್ಶನ: ರಾಜ್ಯಮಟ್ಟಕ್ಕೆ ಆಯ್ಕೆ



ಸುತ್ತೂರು, ಸೆ.26–ಮೈಸೂರಿನ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)ಯಲ್ಲಿ ಇತ್ತೀಚೆಗೆ ಆಯೋಜಿಸಿದ್ದ 2023–24ನೇ ಸಾಲಿನ ಜಿಲ್ಲಾ ಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆಯಲ್ಲಿ ವಿವಿಧ ತಾಲೂಕುಗಳಿಂದ 22 ಶಿಕ್ಷಕರು ವಿವಿಧ ರೀತಿಯ ವಿಜ್ಞಾನ, ತಂತ್ರಜ್ಞಾನ, ಭೌತಶಾಸ್ತ್ರ, ರಸಾಯನಶಾಸ್ತ್ರ, ಇಂಜಿನಿಯರಿಂಗ್ ತಂತ್ರಜ್ಞಾನ ಹೀಗೆ ಹಲವು ವಿಭಾಗಗಳಿಂದ ಮಾದರಿಗಳನ್ನು ಪ್ರಸ್ತುತಪಡಿಸಿದರು. ಸ್ಪರ್ಧೆಯಲ್ಲಿ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆ ಭೌತ ವಿಜ್ಞಾನ ಶಿಕ್ಷಕ ವಿ.ವಿನೋದ್‌ಕುಮಾರ್, ಭೌತಶಾಸ್ತ್ರ ವಿಭಾಗದಿಂದ "ಆ್ಯಂಟಿ ಸ್ಲೀಪ್ ಅಲರಾಂ ಫಾರ್ ಡ್ರೈವರ್" (Anti sleep Alarm for Driver) ಮಾದರಿಯನ್ನು ಪ್ರಸ್ತುತಪಡಿಸಿ ಪ್ರಥಮ ಬಹುಮಾನ ಪಡೆಯುವುದರೊಂದಿಗೆ ಸತತ 2ನೇ ಬಾರಿಗೆ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಗಳ ವೈಯಕ್ತಿಕ ವಿಭಾಗದಲ್ಲಿ 10ನೇ ತರಗತಿಯ ಹರಿಕೃಷ್ಣ ವಿದ್ಯಾರ್ಥಿಯು 'ಸ್ಮಾರ್ಟ್ ಟ್ಯಾಪ್' (Smart Tap) ಮಾದರಿಯನ್ನು ಪ್ರಸ್ತುತಪಡಿಸಿ ತೃತೀಯ ಸ್ಥಾನ ಪಡೆದಿದ್ದಾರೆ.

## ಡಾ.ಆರ್.ಇಂದಿರಾ ಅವರಿಗೆ ರೋಟರಿ ಮೈಸೂರು ಮಿಡ್‌ಟೌನ್–ಅಮರವಾಣಿ ಪ್ರಶಸ್ತಿ ಪ್ರದಾನ ಇಂದು



ಡಾ.ಆರ್.ಇಂದಿರಾ

ಮೈಸೂರು, ಸೆ.26– ರೋಟರಿ ಕ್ಲಬ್ ಮೈಸೂರು ಮಿಡ್‌ಟೌನ್ ವತಿಯಿಂದ ಸಮಾಜ ಶಾಸ್ತ್ರಜ್ಞೆ ಮತ್ತು ಸ್ತ್ರೀವಾದಿ ಚಿಂತಕರು, ಬೆಂಗಳೂರು ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸಮಾಜ ವಿಜ್ಞಾನಗಳ ಸಂಸ್ಥೆ ಪ್ರಾಧ್ಯಾಪಕರು ಹಾಗೂ 'ಮೈಸೂರು ಮಿತ್ರ' ಅಂಕಣಕಾರರಾದ ಡಾ.ಆರ್.ಇಂದಿರಾ ಮತ್ತು ಮೈಸೂರು ವಿಶ್ವವಿದ್ಯಾನಿಲಯ ವಿಶ್ರಾಂತ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಎಂ.ಉಮಾಪತಿ ಅವರಿಗೆ ಪ್ರೊ.ಎಂ.ಜಿ.ನಂಜುಂಡಾರಾಧ್ಯ ಸ್ಮಾರಕ ರೋಟರಿ ಮೈಸೂರು ಮಿಡ್‌ಟೌನ್–ಅಮರವಾಣಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಾಳೆ(ಸೆ.27) ಸಂಜೆ 6.30ಕ್ಕೆ ರೋಟರಿ ಕೇಂದ್ರ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

## ಜ್ಞಾನೋದಯ ಪಿಯು ಕಾಲೇಜಿನ ಕಿರೀಟಕ್ಕೆ ಬ್ರೈನ್ ಬೈಟ್ಸ್–2023 ಕ್ವಿಝ್ ಗೆಲುವಿನ ಗರಿ



ಮೈಸೂರು,ಸೆ.26–ನಗರದ ಜ್ಞಾನೋದಯ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ಸಮರ್ಥ್ ಬಿ. ಹಾಗೂ ಪ್ರಥಮ್ ಆದಿತ್ಯ ಮೋಹನ್ ಅಮೃತ ವಿಶ್ವ ವಿದ್ಯಾಪೀಠಂನಲ್ಲಿ ಆಯೋಜಿಸಲಾಗಿದ್ದ 'ಬ್ರೈನ್ ಬೈಟ್ಸ್–2023' ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಬಹುಮಾನದೊಂದಿಗೆ ಆಕರ್ಷಕ ಟ್ರೋಫಿ ಹಾಗೂ ನಗದು ಬಹುಮಾನ ಪಡೆದರು. ಅಮೃತ ವಿದ್ಯಾಪೀಠಂನ ಸಂಚಾಲಕ ಬ್ರಹ್ಮಚಾರಿ ಮುಕ್ತದಾಮೃತ ಚೈತನ್ಯ ಹಾಗೂ ಶೈಕ್ಷಣಿಕ ಸಂಯೋಜಕಿ ಡಾ.ರೇಖಾ ಭಟ್ ಬಹುಮಾನ ವಿತರಿಸಿದರು. ಈ ಸ್ಪರ್ಧೆಯಲ್ಲಿ ಜಿಲ್ಲೆಯ ಸುಮಾರು 220ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದು, ಸತತವಾಗಿ 3ನೇ ಬಾರಿ (ಹ್ಯಾಟ್ರಿಕ್) ಈ ಸ್ಪರ್ಧೆಯಲ್ಲಿ ಸಾಧನೆಗೈದು ಜ್ಞಾನೋದಯ ಪಿಯು ಕಾಲೇಜು ಪ್ರಥಮ ಬಹುಮಾನ ಪಡೆಯಿತು.

ಇದೇ ವಿದ್ಯಾರ್ಥಿಗಳು ಭಾರತೀಯ ನೌಕಾಪಡೆ ಆಯೋಜಿಸಿರುವ 'ಜಿ20 ಥಿಂಕ್' ರಾಷ್ಟ್ರಮಟ್ಟದ ರಸಪ್ರಶ್ನೆಯಲ್ಲಿ ಪಾಲ್ಗೊಂಡು 2ನೇ ಸುತ್ತಿಗೆ ಆಯ್ಕೆಯಾಗಿದ್ದಾರೆ.

## ದಸರಾ ಚಲನಚಿತ್ರೋತ್ಸವ ಅಂಗವಾಗಿ ಕಿರುಚಿತ್ರ ಸ್ಪರ್ಧೆ

ಮೈಸೂರು,ಸೆ.26–ದಸರಾ ಚಲನಚಿತ್ರೋತ್ಸವ ಉಪಸಮಿತಿಯಿಂದ ಕಿರುಚಿತ್ರ ಸ್ಪರ್ಧೆ ಏರ್ಪಡಿಸಿದ್ದು, ಕಿರುಚಿತ್ರವು 10 ನಿಮಿಷಗಳ ಅವಧಿ ಮೀರಿರಬಾರದು. 5 ನಗದು ಬಹುಮಾನಗಳು, ಎಲ್ಲಾ ಸ್ಪರ್ಧಿಗಳಿಗೂ ಪ್ರಮಾಣಪತ್ರ ವಿತರಿಸಲಾಗುವುದು. ಕಿರುಚಿತ್ರವನ್ನು ಗೂಗಲ್ ಡ್ರೈವ್ ಅಥವಾ ಯೂಟ್ಯೂಬ್‌ಗೆ ಅಪ್ಲೋಡ್ ಮಾಡಿ ಅದರ ಲಿಂಕ್ ಅನ್ನು ಅರ್ಜಿಯಲ್ಲಿ ನಮೂದಿಸಬೇಕು. ನೋಂದಣಿಗೆ ಸೆ.30 ಕೊನೇ ದಿನ. ನೋಂದಣಿ ಶುಲ್ಕ 100 ರೂ. ಪಾವತಿಸಬೇಕು. ವಿವರಗಳಿಗೆ myDFF2023 ಫೇಸ್‌ಬುಕ್ ಹಾಗೂ ಇನ್ಸ್ಟಾಗ್ರಾಮ್ ಪೇಜ್ ಫಾಲೋ ಮಾಡುವುದು. ಮೊ:7411564510 ಸಂಪರ್ಕಿಸಿ.

## ನಿಧನ


### ಮಝರ್ ಪಾಷ



ಮೈಸೂರು,ಸೆ.26–ಮಂಡ್ಯ ಜಿಲ್ಲಾ ವಕ್ಫ್ ಬೋರ್ಡ್ ಸಲಹಾ ಸಮಿತಿ ಮಾಜಿ ಅಧ್ಯಕ್ಷ ಹಾಗೂ ಶ್ರೀರಂಗಪಟ್ಟಣ ನಿವಾಸಿ ಮಝರ್ ಪಾಷ (71) ಸೋಮವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು–ಹಿರಿಯ ಮಗ ಇರ್ಫಾನ್ ಅಹಮದ್, ವಕ್ಫ್ ಆಫೀಸರ್, ಟಿಪ್ಪು ಸುಲ್ತಾನ್ ವಕ್ಫ್ ಎಸ್ಟೇಟ್, ಟಿಪ್ಪು ಗೋರಿ, ಶ್ರೀರಂಗಪಟ್ಟಣ, ಕಿರಿಯ ಮಗ ರಿಜ್ವಾನ್ ಪಾಷ, ಮ್ಯಾನೇಜರ್, ಕೆಎಸ್‌ಟಿಡಿಸಿ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.

ಸೆ.25 ಸೋಮವಾರ ಸಂಜೆ ಇಶಾ ಪ್ರಾರ್ಥನೆ ನಂತರ ಅರಬ್ ಸಾಹೆಬ್ ಚೋಟಿ ಮಸೀದಿ, ಗಂಜಾಂ, ಶ್ರೀರಂಗಪಟ್ಟಣದಲ್ಲಿ ನಮಾಝ್ ಜನಾಝ ನಡೆಯಿತು. ಆನಂತರ ಶ್ರೀರಂಗಪಟ್ಟಣ, ಗಂಜಾಂ, ಟಿಪ್ಪು ಗೋರಿ ರಸ್ತೆಯಲ್ಲಿರುವ ಮುಸ್ಲಿಮರ ರುದ್ರಭೂಮಿಯಲ್ಲಿ ಮೃತರ ಅಂತ್ಯಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**27.9.2023 ಬುಧವಾರ, ಮಳೆ ನಕ್ಷತ್ರ: ಉತ್ತರಾ 14.09.2023ರಿಂದ 27.09.2023**
**ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ,**
**ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ**

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ–ಡಿ.ಶ್ರೀಹರಿ, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಕೆ.ಎಲ್.ಪ್ರಸನ್ನಾಕ್ಷಿ, 7.15 ಭಾವಗೀತೆಗಳು–ಬಿ.ಕೆ. ಸುಮಿತ್ರ, ಹೆಚ್.ಕೆ.ನಾರಾಯಣ, ಎಂ.ಎಸ್.ಶೀಲಾ, 9.00 ವಿಶ್ವ ಟೆಲಿಕಾಂ ದಿನದ ಅಂಗವಾಗಿ ರೂಪಕ, ಪ್ರಸ್ತುತಿ–ಜಿ.ಶಾಂತಕುಮಾರ್, 10.00 ಹಿಂದೂಸ್ಥಾನಿ ಸಂಗೀತ–ಪಂಡಿತ್ ರಾಜನ್ ಮಿಶ್ರ ಮತ್ತು ಸಾಜನ್ ಮಿಶ್ರ–ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆಗಳು–ಕೆ.ಆರ್.ಹರ್ಷದೀಪ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಲಯಸಂಭ್ರಮ–ತಾಳ, ಲಯ ರಸಾಸ್ವಾದ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ, ಪ್ರಸ್ತುತಿ–ಅಬ್ದುಲ್ ರಶೀದ್, 4.45 ಹಿಂದಿ ಪಾಠ–ಕಿಶೋರ್ ಎಂ. ಕಾಕಡೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಜೈವಿಕ ಶಿಲೀಂಧ್ರ ನಾಶಕ ಹಾಗೂ ಜಂತು ನಾಶಕಗಳ ಮಹತ್ವ ಹಾಗೂ ಬಳಕೆ ಕುರಿತು ಸಂವಾದದಲ್ಲಿ ಭಾಗವಹಿ ಸುವವರು ಡಾ.ವಿ.ಬಿ.ಸನತ್‌ಕುಮಾರ್ ಹಾಗೂ ಡಾ.ಪುಷ್ಪಾ, 9.30 ಹಿಂದೂಸ್ಥಾನಿ ಸಂಗೀತ–ಉಸ್ತಾದ್ ಬಿಸ್ಮಿಲ್ಲಾಖಾನ್–ಷಹನಾಯ್ ವಾದನ, 10.30 ಸವಿನೆನಪು

■ **ಅರ್ಕಧಾಮ:** ಅರ್ಕಮಹಾಗಣಪತಿ ಪ್ರತಿಷ್ಠಾಪನಾ ಕಾರ್ಯಕ್ರಮ, ಯೋಗಿ ಶ್ರೀನಿವಾಸ ಅರ್ಕ ಅವರ ಉತ್ತರ ಅಮೆರಿಕಾ ಮತ್ತು ಐರೋಗ್ಯ ದೇಶಗಳ ಪ್ರವಾಸದ ಸಂಭ್ರಮ ಮತ್ತು ಹುಟ್ಟುಹಬ್ಬ ಆಚರಣೆ, ಬೆಳಗ್ಗೆ 8ರಿಂದ ಶ್ರೀ ಅರ್ಕಮಹಾಗಣಪತಿ ದೇವಸ್ಥಾನದಲ್ಲಿ ವೈದಿಕ ಕಾರ್ಯಗಳು, ಬೆಳಗ್ಗೆ 10ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ 11.30ರಿಂದ ದೀಪ ಪ್ರಜ್ವಲನ ಬಳಿಕ ವೇದಸ್ವಸ್ತಿ, ಯೋಗಿ ಅರ್ಕ ಅವರಿಂದ ಪ್ರವಚನ, ಪ್ರಸಾದ ವಿನಿಯೋಗ, ಸ್ಥಳ: ಅರ್ಕಧಾಮ, ಕಣಿಯನಹುಂಡಿ ದ್ವಾರ, ಬೋಗಾದಿ–ಗದ್ದಿಗೆ ರಸ್ತೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶಾಲಾ ಶಿಕ್ಷಣ ಇಲಾಖೆ:** ಜಿಲ್ಲಾ ಹಂತದ ಹಿಂದಿ ಭಾಷಾ ಶಿಕ್ಷಕರಿಗೆ ಒಂದು ದಿನದ ಭಾಷಾ ಮಾಸಾಚರಣೆ ಕಾರ್ಯಕ್ರಮ, ಕಾರ್ಯಾಗಾರ, ಅಧ್ಯಕ್ಷತೆ: ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಉಪನಿರ್ದೇಶಕ ನಾಗರಾಜಯ್ಯ, ಮುಖ್ಯ ಅತಿಥಿಗಳು: ಮೈಸೂರು ವಿಭಾಗ ಸಹ ನಿರ್ದೇಶಕರಾದ ಶ್ರೀಮತಿ ಭಾರತಿ, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ ಪ್ರಾಚಾರ್ಯರಾದ ಗೀತಾಂಬ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಚ್.ಕೆ.ಪಾಂಡು, ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ. ಪ್ರತಿಭಾ ಮೊದಲಿಯಾರ್, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಸ್ಥಳ: ಡಯಟ್ ಆವರಣ, ವಸಂತ ಮಹಲ್, ಬೆಳಗ್ಗೆ 10ರಿಂದ.

■ **ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್, ಜಿಲ್ಲಾಡಳಿತ, ಕರ್ನಾಟಕ ಪ್ರವಾಸೋದ್ಯಮ ಇಲಾಖೆ:** ವಿಶ್ವ ಪ್ರವಾಸೋದ್ಯಮ ದಿನಾಚರಣೆ, ಮುಖ್ಯ ಅತಿಥಿಗಳು: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸ್ಥಳ: ಮೈಸೂರು ಅರಮನೆಯ ದಕ್ಷಿಣ ದ್ವಾರ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು, ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 108ನೇ ಜಯಂತಿ ಮಹೋತ್ಸವ, ಅಧ್ಯಕ್ಷತೆ : ನಿವೃತ್ತ ಕಾರ್ಯಪಾಲಕ ಅಭಿಯಂತರ ಎಂ.ಶಿವಯ್ಯ, ನುಡಿನಮನ : ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ನೀಲಗಿರಿ ಎಂ.ತಳವಾರ, ಮುಖ್ಯ ಅತಿಥಿಗಳು: ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾಧ್ಯಾಪಕ ಡಾ.ಬಿ.ಪಿ.ಇಂದಿರ, ಸ್ಥಳ: ನವಜ್ಯೋತಿ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ

■ **ಅಭಿವೃದ್ಧಿ ಆಯುಕ್ತರು (ಕೈಮಗ್ಗ), ಜವಳಿ ಮಂತ್ರಾಲಯ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ವಿಶೇಷ ಕೈಮಗ್ಗ ಮೇಳ, ಸಂಸ್ಕೃತಿ–ಹತ್‌ಕರ್ಗ–2023, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ರಿಂಗ್ ರೋಡ್, ಬೆಳಗ್ಗೆ 10 ರಿಂದ.

■ **ಸುಯೋಗ್ ಆಸ್ಪತ್ರೆ:** ಮೂತ್ರಪಿಂಡ ರೋಗ ತಪಾಸಣಾ ಶಿಬಿರ, ಮೂತ್ರಪಿಂಡ ತಜ್ಞ ಡಾ. ಅರುಣ್ ಕೆ.ಜಿ. ಅವರ ನೇತೃತ್ವ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆಯಿಂದ.

■ **ಕಸ್ತೂರಿ ಸಿರಿಗನ್ನಡ ವೇದಿಕೆ ಸಾಂಸ್ಕೃತಿಕ ಘಟಕ:** ಪದಗ್ರಹಣ ಮತ್ತು ಅಭಿನಂದನಾ ಸಮಾರಂಭ, ಶಾಲಾ ಮಕ್ಕಳಿಗೆ 'ಅಪ್ಪ' (ತಂದೆ) ಕುರಿತು ಪ್ರಬಂಧ ಸ್ಪರ್ಧೆ, ಸಾನ್ನಿಧ್ಯ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ: ಸುಪ್ರೀಮ್ ಕಾನ್ವೆಂಟ್ ಅಧ್ಯಕ್ಷೆ ಕೆ.ಪಿ.ಮಂಜುಳ ರವೀಂದ್ರಸ್ವಾಮಿ, ಉದ್ಘಾಟನೆ: ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಪ್ರಸ್ತಾವನೆ: ವೇದಿಕೆ ರಾಜ್ಯಾಧ್ಯಕ್ಷ ಮೋತೀರ ಮಹದೇವು, ಬಹುಮಾನ ವಿತರಣೆ: ಸಾಹಿತಿ ರತ್ನ ಚಂದ್ರಶೇಖರ್, ಸ್ಥಳ: ಸುಪ್ರೀಮ್ ಕಾನ್ವೆಂಟ್, ಬಸವೇಶ್ವರ ನಗರ, ಬೆಳಗ್ಗೆ 10.30ಕ್ಕೆ

■ **ಮಹಾರಾಣಿ ಮಹಿಳಾ ಕಲಾ ಕಾಲೇಜು:** ಪ್ರಥಮ ಬಿ.ಎ., ಬಿಸಿಎ ವಿದ್ಯಾರ್ಥಿನಿಯರಿಗೆ ಅಭಿವಿನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ವಸಂತಕುಮಾರ್, ಉಪಸ್ಥಿತರು: ಡಾ. ಪ್ರಕಾಶ್, ನಂಜುಂಡಯ್ಯ, ಅಶ್ವಿನಿ, ನಾಗರತ್ನಮ್ಮ, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಮಹಿಳಾ ಪದವಿಪೂರ್ವ ಕಾಲೇಜು:** ಪ್ರತಿಭಾನ್ವೇಷಣೆ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಆಕಾಶವಾಣಿ ಹಿರಿಯ ಉದ್ಘೋಷಕ: ಡಾ.ಮೈಸೂರು ಉಮೇಶ್, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಶಿವರಾಜಪ್ಪ, ಉಪಸ್ಥಿತರು: ಕಾಲೇಜು ಪ್ರಿನ್ಸಿಪಾಲ್ ಸುನಿತಾರಾಣಿ, ರಾಧ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 108ನೇ ಜಯಂತಿ, ನುಡಿನಮನ : ಸಾಹಿತಿ ಡಾ. ಪ್ರದೀಪ್‌ಕುಮಾರ್ ಹೆಬ್ರಿ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಉಪಸ್ಥಿತರು : ಕಾಲೇಜು ಪ್ರಾಂಶುಪಾಲರಾದ ಡಾ. ಎಸ್. ಪ್ರತಿಭಾ, ಎಸ್. ಸೋಮಶೇಖರ, ಸ್ಥಳ: ಸುವರ್ಣ ಮಹೋತ್ಸವ ಭವನ, ಬೆಳಗ್ಗೆ 11ಕ್ಕೆ.

■ **ಮೈಸೂರು ಮಕ್ಕಳ ಕೂಟ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ** : ಬೆಳಗ್ಗೆ 9.30ಕ್ಕೆ ಶ್ರೀಮತಿ ಲಕ್ಷ್ಮೀನಾಗರಾಜು ದತ್ತಿ ಸ್ಮಾರಕ ಅಂತರ ಕಾಲೇಜು ಕರ್ನಾಟಕ ಶಾಸ್ತ್ರೀಯ ಸಂಗೀತ ಸ್ಪರ್ಧೆ, ಉದ್ಘಾಟನೆ : ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಉಪಕುಲಪತಿ ಪ್ರೊ. ನಾಗೇಶ್ ವಿ.ಬೆಟ್ಟಕೋಟೆ, ಮುಖ್ಯ ಅತಿಥಿಗಳು : ಆಕಾಶವಾಣಿ ವೀಣಾವಾದಕರಾದ ವಿದುಷಿ ಮೈಸೂರು ಎಸ್.ರಾಜಲಕ್ಷ್ಮಿ, ಅಧ್ಯಕ್ಷತೆ : ಪದವಿ ಕಾಲೇಜು ಪ್ರಾಂಶುಪಾಲ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು, ಉಪಸ್ಥಿತರು : ಶ್ರೀಮತಿ ನಳಿನಿ ಶ್ರೀಕಂಠ, ನಯನಕುಮಾರಿ, ಸಂಜೆ 4ಕ್ಕೆ ಬಹುಮಾನ ವಿತರಣಾ ಸಮಾರಂಭ, ಸ್ಥಳ: ಮಹಾವಿದ್ಯಾಲಯ ಆವರಣ, ಕೃಷ್ಣಮೂರ್ತಿಪುರಂ.

■ **ಶ್ರೀ ಶ್ರೀವಿಶ್ವಪ್ರಸನ್ನತೀರ್ಥ ಶ್ರೀಪಾದರ ಚಾತುರ್ಮಾಸ್ಯ ಸಮಿತಿ, ಕನ್ನಡ ಸಾಹಿತ್ಯ ಕಲಾಕೂಟ:** ಕಮಲಾ ರಾಜೇಶ್ ಅವರ ಮುಕ್ತಕ ಗೀತಾಂಜಲಿ, ಮಾಲತಿ ಮೇಲುಕೋಟೆ ಅವರ ಚಾರ್‌ಧಾಮ್ ಕೃತಿಗಳ ಬಿಡುಗಡೆ ಸಮಾರಂಭ, ಕೃತಿಗಳ ಬಿಡುಗಡೆ: ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳು, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು: ಮುಕ್ತಕ ಕವಿ ಎಂ. ಮುತ್ತುಸ್ವಾಮಿ, ವಿಶ್ವ ಹಿಂದೂ ಪರಿಷದ್ ಜಿಲ್ಲಾ ಉಪಾಧ್ಯಕ್ಷ ಜಗದೀಶ್ ಹೆಬ್ಬಾರ್ ಕಾರಿಜ, ಸ್ಥಳ: ಶ್ರೀಕೃಷ್ಣಧಾಮ, ಸಂಜೆ 4ಕ್ಕೆ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಕಲಾದೇವಿ ಬೊಂಬೆ ಸಂಗ್ರಹಾಲಯ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಉದ್ಘಾಟನೆ: ರಾಜಮಾತೆ ಪ್ರಮೋದಾದೇವಿ ಒಡೆಯರ್, ಸ್ಥಳ: ರಾಮ್‌ಸನ್ಸ್, 1160, ಮೃಗಾಲಯದ ಎದುರು, ಸಂಜೆ 5.30ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** 62ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30ರಿಂದ ರಾಮಾಯಣ ದರ್ಶನಂ, ವಾಚನ: ವಿದ್ವಾನ್ ಶುಭಾ ರಾಘವೇಂದ್ರ, ವ್ಯಾಖ್ಯಾನ: ಡಾ. ಜ್ಯೋತಿಶಂಕರ, ಸಂಜೆ 6.45ಕ್ಕೆ ಕೆರೆಮನೆ ಶಿವಾನಂದ ಹೆಗ್ಗಡೆ ಮತ್ತು ತಂಡದವರಿಂದ ಯಕ್ಷಗಾನ, ಸ್ಥಳ: 8ನೇ ಕ್ರಾಸ್, ವಿವಿ.ಮೊಹಲ್ಲಾ.

■ **ರೋಟರಿ ಕ್ಲಬ್ ಮೈಸೂರು ಮಿಡ್‌ಟೌನ್:** ಪ್ರೊ.ನಂಜುಂಡಾರಾಧ್ಯ ಸ್ಮಾರಕ ರೋಟರಿ ಮೈಸೂರು ಮಿಡ್‌ಟೌನ್–ಅಮರವಾಣಿ ಗೌರವ ಸಮಾರಂಭ, ಪ್ರಶಸ್ತಿ ಪುರಸ್ಕೃತರು: ಸ್ತ್ರೀವಾದಿ ಚಿಂತಕಿ ಡಾ. ಆರ್. ಇಂದಿರಾ, ವಿಶ್ರಾಂತ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಎಂ. ಉಮಾಪತಿ, ಸ್ಥಳ: ರೋಟರಿ ಕೇಂದ್ರ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 27 ಬುಧವಾರ 2023

ಸಂಪುಟ: 44 | ಸಂಚಿಕೆ: 162 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



## ಮತ್ತೆ 18 ದಿನ ತಮಿಳುನಾಡಿಗೆ ನಿತ್ಯವೂ
# 3000 ಕ್ಯುಸೆಕ್ ನೀರು ಬಿಡಿ

● ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶ ● ತಮಿಳುನಾಡು 12500 ಕ್ಯುಸೆಕ್‌ಗೆ ಪಟ್ಟು
● ರಾಜ್ಯದಲ್ಲಿ ಹೋರಾಟವನ್ನು ಲೆಕ್ಕಿಸದ ಸಮಿತಿ ಅ.15ರವರೆಗೆ ನೀರು ಹರಿಸಲು ಸೂಚನೆ




ಬೆಂಗಳೂರು, ಸೆ.26(ಕೆಎಂಶಿ)– **ತಮಿಳುನಾಡಿಗೆ ಮತ್ತೆ 18 ದಿನಗಳ ಕಾಲ ಪ್ರತಿನಿತ್ಯ ಮೂರು ಸಾವಿರ ಕ್ಯುಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣಾ ಸಮಿತಿ ಕರ್ನಾಟಕಕ್ಕೆ ಆದೇಶ ಮಾಡಿದೆ.**

ನೀರು ಹರಿಸುವುದನ್ನು ವಿರೋಧಿಸಿ ರಾಜ್ಯಾದ್ಯಂತ ರೈತರು ಮತ್ತು ವಿವಿಧ ಸಂಘಟನೆಗಳು ಪ್ರತಿಭಟನೆ, ಧರಣಿ, ಬಂದ್ ನಡೆಸುತ್ತಿದ್ದರೂ ಅದನ್ನು ಲೆಕ್ಕಿಸದ ನಿಯಂತ್ರಣಾ ಸಮಿತಿ, ಇಂದಿನ ಸಭೆಯಲ್ಲಿ ಈ ಆದೇಶ ಮಾಡಿದೆ. ನಿಯಂತ್ರಣ ಸಮಿತಿ ಮಾಡಿರುವ ಆದೇಶ ಇದೇ 28ರ ಬೆಳಗ್ಗೆ 8 ಗಂಟೆಯಿಂದ ಆರಂಭವಾಗಿ ಅಕ್ಟೋಬರ್ 15ರವರೆಗೂ ಪ್ರತಿನಿತ್ಯ ಈ ಪ್ರಮಾಣದ ನೀರನ್ನು ಬಿಳುಗುಂಡ್ಲು ಮಾಪನದಲ್ಲಿ ದಾಖಲಾಗುವಂತೆ ಹರಿಸಬೇಕಾಗಿದೆ.

ಮುಂಗಾರು ಮಳೆ ಕೊರತೆಯಿಂದ ಕಾವೇರಿ ಕೊಳ್ಳದ ನಾಲ್ಕು ಜಲಾಶಯಗಳಿಗೆ ಒಳಹರಿವಿನ ಕೊರತೆ ಶೇ.53.04ರಷ್ಟಿದೆ. ನಮಗೆ ಅಗತ್ಯ ಪ್ರಮಾಣದ ನೀರಿಲ್ಲ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ತೊಂದರೆಯಾಗಲಿದೆ. ಇನ್ನು ಮುಂದೆ ಯಾವುದೇ ಕಾರಣಕ್ಕೂ ನೀರು ಹರಿಸಲು ಸಾಧ್ಯವಿಲ್ಲ ಎಂದು ನಮ್ಮ ಅಧಿಕಾರಿಗಳು ವಾಸ್ತವಾಂಶ ಬಿಚ್ಚಿಟ್ಟರು, ಕಳೆದ ಆದೇಶದಲ್ಲಿ 2 ಸಾವಿರ ಕ್ಯುಸೆಕ್ ಕಡಿಮೆ ಮಾಡಿ ಮತ್ತೊಂದು ಆದೇಶ ಹೊರಡಿಸಿದ್ದಾರೆ. ಮಳೆ ಕೊರತೆಯಿಂದ 161 ತಾಲೂಕುಗಳು ತೀವ್ರ ಬರಕ್ಕೆ ಸಿಲುಕಿದ್ದು, 34 ತಾಲೂಕುಗಳು ಮಧ್ಯಮ ಬರಪೀಡಿತವಾಗಿವೆ. ಇದರಲ್ಲಿ 32 ತೀವ್ರ ಬರ ಪೀಡಿತ ಮತ್ತು 15 ಸಾಮಾನ್ಯ ಬರಪೀಡಿತ ತಾಲೂಕುಗಳು ಕಾವೇರಿ ಜಲಾನಯನ ಪ್ರದೇಶದಲ್ಲಿವೆ. ನಮಗೆ ನೀರಿನ ಕೊರತೆ ಇರುವಾಗ ತಮಿಳುನಾಡಿಗೆ ನೀರು ಹರಿಸುವ ಸ್ಥಿತಿಯಲ್ಲಿಲ್ಲ. ನಮ್ಮ ಜಲಾಶಯಗಳಿಂದ ಯಾವುದೇ ಹರಿವನ್ನು ಅಂತರರಾಜ್ಯ ಗಡಿಯಾದ ಬಿಳುಗುಂಡ್ಲುವಿನಲ್ಲಿ ನಿರ್ವಹಿಸಬೇಕಾದ ಹರಿವುಗಳಿಗೆ ಕೊಡುಗೆ ● 9ನೇ ಪುಟಕ್ಕೆ

> “ಕಾವೇರಿ ನೀರು ನಿಯಂತ್ರಣಾ ಸಮಿತಿ ಇನ್ನೂ 18 ದಿನದವರೆಗೆ ತಮಿಳುನಾಡಿಗೆ 3000 ಕ್ಯುಸೆಕ್ ನೀರು ಹರಿಸುವಂತೆ ಆದೇಶಿಸಿದೆ. ಈ ಬಗ್ಗೆ ನಮ್ಮ ಕಾನೂನು ತಂಡದ ತಜ್ಞರೊಂದಿಗೆ ಕಾನೂನಾತ್ಮಕವಾಗಿ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಿದ ಬಳಿಕ ಮಾತನಾಡುತ್ತೇನೆ.
> –ಮುಖ್ಯಮಂತ್ರಿ ಸಿದ್ದರಾಮಯ್ಯ

## ಸರ್ಕಾರದ ಕ್ರಮ ನೋಡಿ ಪ್ರತಿಕ್ರಿಯೆ



ಹಾಸನ: ನಿತ್ಯ 3 ಸಾವಿರ ಕ್ಯುಸೆಕ್ ನೀರು ನೀಡುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಶಿಫಾರಸು ಮಾಡಿದೆ. ನೀರು ಒದಗಿಸಲು ನಮ್ಮಿಂದ ಆಗುವುದಿಲ್ಲ. ಇನ್ನೂ ಸರ್ಕಾರದ ನಿಲುವು ಸ್ಪಷ್ಟವಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನನ್ನ ಅಭಿಪ್ರಾಯ ಕೊಡುವುದು ಸೂಕ್ತವಲ್ಲ ಎಂದು ಮಾಜಿ ಪ್ರಧಾನಿಗಳೂ ಆದ ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ ಹೇಳಿದರು. ಮಂಗಳವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸರ್ಕಾರದ ನಿಲುವು ಬಂದ ಮೇಲೆ ನನ್ನ ಅಭಿಪ್ರಾಯ ಹೇಳುತ್ತೇನೆ. ಸರ್ಕಾರದ ತೀರ್ಮಾನಕ್ಕೆ ನಾನು ಮತ್ತು ಎಚ್.ಡಿ. ಕುಮಾರಸ್ವಾಮಿ ಸಹಕರಿಸ ಬೇಕಾಗುತ್ತದೆ ಎಂದರು. ಕುಮಾರಸ್ವಾಮಿ ಜಲಾಶಯಕ್ಕೆ ಭೇಟಿ ನೀಡಿ, ಅಲ್ಲಿ ನೀರು ಎಷ್ಟಿದೆ ಎಂಬ ವಿವರ ಪಡೆದು ಬಂದ ನಂತರ, ಅದನ್ನು ಆಧರಿಸಿ ನಾಲ್ಕು ದಿನಗಳ ಹಿಂದೆಯೇ ವಿವರವಾಗಿ ಪ್ರಧಾನಿಗೆ ಪತ್ರ ಬರೆದಿದ್ದೇನೆ. ನಿಷ್ಪಕ್ಷಪಾತವಾಗಿ ಎರಡೂ ರಾಜ್ಯಗಳ ಸ್ಥಿತಿಯನ್ನು ಪ್ರಾಧಿಕಾರ ● 9ನೇ ಪುಟಕ್ಕೆ

## 12500 ಕ್ಯುಸೆಕ್ ಬದಲು 3000 ಕ್ಯುಸೆಕ್ ನೀರು ಬಿಡಲು ಹೇಳಿದ್ದಕ್ಕೆ ಧನ್ಯವಾದ...!



ಬೆಂಗಳೂರು, ಸೆ.26(ಕೆಎಂಶಿ)– ಪ್ರತಿನಿತ್ಯ 12,500 ಕ್ಯುಸೆಕ್ ನೀರು ಬಿಡುಗಡೆಗೆ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು ಕಾವೇರಿ ನೀರು ನಿಯಂತ್ರಣ ಸಮಿತಿಯು (CWRC) ತಿರಸ್ಕಾರ ಮಾಡಿರುವುದು ಸಂತಸ ತಂದಿದೆ. ನಮ್ಮ ರಾಜ್ಯದ ಅಧಿಕಾರಿಗಳು ಸಮರ್ಥವಾಗಿ ವಾದ ಮಂಡಿಸಿದ್ದಾರೆ ಎಂದು ಜಲ ಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ನಿತ್ಯ 3000 ಕ್ಯುಸೆಕ್ಸ್ ನೀರು ಬಿಡುಗಡೆಗೆ ಕಾವೇರಿ ನೀರು ನಿಯಂತ್ರಣ ಸಮಿತಿಯು ಶಿಫಾರಸ್ಸು ಮಾಡಿದ ಬಳಿಕ ಈ ಪ್ರತಿಕ್ರಿಯೆ ನೀಡಿದರು. 12,500 ಕ್ಯುಸೆಕ್ ನೀರಿಗೆ ತಮಿಳುನಾಡು ಬೇಡಿಕೆ ಇಟ್ಟಿತ್ತು. 3 ಸಾವಿರ ಕ್ಯುಸೆಕ್ ನೀರು ಹರಿಸುವಂತೆ ಸಮಿತಿ ಶಿಫಾರಸ್ಸು ಮಾಡಿದೆ. ನಮ್ಮ ರಾಜ್ಯದ ಅಧಿಕಾರಿಗಳು ಸಮಿತಿಗೆ ರಾಜ್ಯದ ಬರ ● 10ನೇ ಪುಟಕ್ಕೆ

## ‘ಬೆಂಗಳೂರು ಬಂದ್’
# ಶಾಂತಿಯುತ ಯಶಸ್ವಿ









ಬೆಂಗಳೂರು, ಸೆ.26(ಕೆಎಂಶಿ)–ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ವಿರೋಧಿಸಿ ರೈತರು ಮತ್ತು ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ರಾಜಧಾನಿ ಬೆಂಗಳೂರು ಬಂದ್ ಶಾಂತಿಯುತ ಯಶಸ್ವಿಯಾಗಿದೆ.

ಸಂಘಟನೆಗಳ ಕರೆಗೆ ಬಿಜೆಪಿ ಮತ್ತು ಜೆಡಿಎಸ್ ಬೆಂಬಲ ನೀಡಿದ್ದವು. ಆದರೆ, ರಾಜ್ಯ ಸರ್ಕಾರವು ಇದನ್ನು ವಿರೋಧಿಸಿ ಕಡು ಎಚ್ಚರಿಕೆ ನೀಡಿದ್ದರೂ ಅದನ್ನು ಲೆಕ್ಕಿಸದೇ ವಿವಿಧ ಧರ್ಮ ಮತ್ತು ಭಾಷಿಕರು ಸ್ವಯಂ ಪ್ರೇರಿತವಾಗಿ ಬಂದ್‌ಗೆ ಬೆಂಬಲಿಸಿ ಕರ್ನಾಟಕದ ಪರ ನಿಂತರು. ಬಂದ್ ಯಶಸ್ವಿಯಾಗುವುದನ್ನು ತಡೆಯಲು ರಾಜ್ಯ ಸರ್ಕಾರ ಬೆಂಗಳೂರು ನಗರದಲ್ಲಿ 144ರಡಿ ನಿಷೇಧಾಜ್ಞೆ ಜಾರಿಗೊಳಿಸಿ, ಬಂದ್ ಬೆಂಬಲಿಸಿ ಪ್ರತಿಭಟನೆ ಹಾಗೂ ರ್‍ಯಾಲಿ ಮಾಡಿದರೆ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿತ್ತು.

ನಗರ ಮತ್ತು ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು ಮತ್ತು ಮೆಟ್ರೋ ರೈಲುಗಳು ಎಂದಿನಂತೆ ಸಂಚರಿಸಲು ಅವಕಾಶ ಮಾಡಿಕೊಟ್ಟಿದ್ದರೂ ಪ್ರಯಾಣಿಕರ ಸಂಖ್ಯೆ ಮಾತ್ರ ವಿರಳವಾಗಿತ್ತು.

ಮುನ್ನೆಚ್ಚರಿಕೆ ಕ್ರಮವಾಗಿ ಶಾಲಾ–ಕಾಲೇಜುಗಳಿಗೆ ರಜೆ ನೀಡಿದ್ದ ಸರ್ಕಾರ, ಉಳಿದಂತೆ ಸರ್ಕಾರಿ ಸೇವೆಯು ಎಂದಿನಂತೆ ನಡೆಯುವಂತೆ ನೋಡಿಕೊಳ್ಳುವಲ್ಲಿ ಮಾತ್ರ ಯಶಸ್ವಿಯಾಯಿತು. ಆದರೆ, ಕಚೇರಿಗಳಲ್ಲಿ ನೌಕರರ ಹಾಜರಾತಿ ಕಡಿಮೆ ಇತ್ತು. ಸಂಘಟನೆಗಳು ನೀಡಿದ್ದ ಬಂದ್ ಕರೆ ಹಿನ್ನೆಲೆಯಲ್ಲಿ ಸಿನಿಮಾ, ಮಾಲ್ ಸೇರಿದಂತೆ ವಾಣಿಜ್ಯ ವಹಿವಾಟು ಸಂಪೂರ್ಣ ಸ್ಥಗಿತಗೊಂಡಿತ್ತು.

ಆಟೋ ಮತ್ತು ಕ್ಯಾಬ್‌ಗಳು ವಿರಳವಾಗಿದ್ದವು. ಸದಾ ವಾಹನ ದಟ್ಟಣೆ ಎದುರಿಸುತ್ತಿದ್ದ ಪ್ರಮುಖ ರಸ್ತೆಗಳಲ್ಲಿ ಸಂಚಾರ ವಿರಳವಾಗಿ ಬಿಕೋ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿತ್ತು. ವಿಧಾನಸೌಧ ಸರಹದ್ದಿನಲ್ಲಿ ಕನ್ನಡಪರ ಹಾಗೂ ರೈತ ಮುಖಂಡರು ಮತ್ತು ವಿವಿಧೆಡೆ ಸಂಘಟನೆಗಳು ಪ್ರತಿಭಟನೆ ನಡೆಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿ, ತಕ್ಷಣವೇ ತಮಿಳುನಾಡಿಗೆ ಹರಿಸುತ್ತಿರುವ ನೀರು ನಿಲ್ಲಿಸುವಂತೆ ಆಗ್ರಹಿಸಿದವು.

ವಿಧಾನಸೌಧ ಮತ್ತು ರಾಜಭವನಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಚಳುವಳಿಗಾರರನ್ನು ಮಧ್ಯೆಯೇ ● 9ನೇ ಪುಟಕ್ಕೆ

## ವಹೀದಾ ರೆಹಮಾನ್‌ಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ



**ದೆಹಲಿ:** ಬಾಲಿವುಡ್‌ನ ಹಿರಿಯ ನಟಿ ವಹೀದಾ ರೆಹಮಾನ್ ಅವರಿಗೆ ‘ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಸಂದಿದೆ. ಅವರಿಗೆ ಈ ಬಾರಿಯ ಭಾರತೀಯ ಚಿತ್ರರಂಗದ ಅತ್ಯುನ್ನತ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ಮಂಗಳವಾರ ತಿಳಿಸಿದ್ದಾರೆ. ದೇಶದ ಅತ್ಯುತ್ತಮ ನಟಿಯರಲ್ಲಿ ಒಬ್ಬರಾದ ರೆಹಮಾನ್ ಅವರು ‘ಪ್ಯಾಸಾ’, ‘ಸಿಐಡಿ’, ‘ಗೈಡ್’, ‘ಕಾಗಜ್ ಕೆ ಫೂಲ್’, ‘ಖಾಮೋಶಿ’ ಮತ್ತು ‘ತ್ರಿಶೂಲ್’ ಸೇರಿದಂತೆ ಹಲವು ಚಲನಚಿತ್ರಗಳಲ್ಲಿ ತಮ್ಮ ಅಮೋಘ ಅಭಿನಯದಿಂದ ಜನಪ್ರಿಯರಾಗಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಈ ವಿಷಯ ಹಂಚಿಕೊಂಡಿರುವ ಠಾಕೂರ್, ‘ಭಾರತೀಯ ● 9ನೇ ಪುಟಕ್ಕೆ

## ಇಂದು ಚಾ.ನಗರಕ್ಕೆ ಸಿಎಂ ಸಿದ್ದರಾಮಯ್ಯ

ಚಾಮರಾಜನಗರ, ಸೆ26(ಎಸ್‌ಎಸ್)– ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ಬಳಿಕ ಸಿದ್ದರಾಮಯ್ಯ ಚಾಮರಾಜನಗರಕ್ಕೆ ನಾಳೆ (ಸೆ.27) ಮೊದಲ ಬಾರಿಗೆ ಭೇಟಿ ನೀಡಲಿದ್ದಾರೆ.

ಜಿಲ್ಲೆಯ ಪ್ರಸಿದ್ಧ ಯಾತ್ರಾ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಿಂದ ರಸ್ತೆ ಮೂಲಕ ಮಧ್ಯಾಹ್ನ 2.30ಕ್ಕೆ ಮುಖ್ಯಮಂತ್ರಿಗಳು ಚಾಮರಾಜನಗರಕ್ಕೆ ಆಗಮಿಸುವರು. ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ಕನಕ ವಾಣಿಜ್ಯ ಸಂಕೀರ್ಣದ ಮೊದಲ ಹಂತದ ಕಟ್ಟಡದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಿದ್ದಾರೆ. ನಂತರ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜಿಪಂ ಸಭಾಂಗಣದಲ್ಲಿ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಬಳಿಕ ಸಂಜೆ 6 ಗಂಟೆಗೆ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

## ವಾಸ್ತವ ಸ್ಥಿತಿ ಅಧ್ಯಯನಕ್ಕೆ ಕರ್ನಾಟಕ, ತಮಿಳುನಾಡಿಗೆ ತಜ್ಞರ ತಂಡ ಕಳುಹಿಸಲು
# ಕೇಂದ್ರ ಜಲಶಕ್ತಿ ಸಚಿವರ ಸಮ್ಮತಿ

### ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾಹಿತಿ



ಮೈಸೂರು, ಸೆ.26(ಜಿಎ)–ಕೇಂದ್ರದ ಜಲಸಂಪನ್ಮೂಲ ಸಚಿವರು ಕರ್ನಾಟಕ ಹಾಗೂ ತಮಿಳುನಾಡಿಗೆ ತಜ್ಞರ ತಂಡ ಕಳುಹಿಸಿ ಅಧ್ಯಯನ ನಡೆಸುವ ಭರವಸೆ ನೀಡಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ವಿವಿಧ ಕಾರ್ಯಕ್ರಮ ನಿಮಿತ್ತ ಮಂಗಳವಾರ ಮೈಸೂರಿಗೆ ಆಗಮಿಸಿದ ಅವರು ಮಾಧ್ಯಮಗಳೊಂದಿಗೆ ಮಾತನಾಡಿ, ಮೈಸೂರು, ಬೆಂಗಳೂರು, ಮಂಡ್ಯ ಜನರಿಗೆ ಕಾವೇರಿ ಜೀವನದಿಯಾಗಿದೆ. ಈ ನದಿ ವಿಚಾರದಲ್ಲಿ ನಮಗೆ ನಿರಂತರ ಅನ್ಯಾಯವಾಗುತ್ತಿದೆ. ಬೇಸಾಯ ಹಾಗೂ ಕುಡಿಯುವ ನೀರಿಗೆ ಎಷ್ಟು ನೀರು ಬೇಕೆಂದು ನಿರ್ಧಾರ ಆಗಬೇಕಿದೆ. ಆದರೆ ಹಳೆಯ ಮಾಪನ ಈಗಲೂ ಮುಂದುವರೆದಿದ್ದು, ಕುಡಿಯಲು ಪ್ರತಿವರ್ಷ 35 ಟಿಎಂಸಿ ನೀರು ಬೇಕು. ನಮಗೆ ಕನ್ನಂಬಾಡಿ ಹಾಗೂ ಕಬಿನಿಯಿಂದ 50 ಟಿಎಂಸಿ ನೀರು ಮಾತ್ರ ಲಭ್ಯವಿದೆ ಎಂದರು. ಈಗಿರುವ ನೀರಿನಲ್ಲಿ ಬೇಸಾಯ ಹಾಗೂ ಕುಡಿಯುವ ನೀರಿಗೆ ಹಂಚಿಕೆ ಆಗಬೇಕು. ಆದರೆ, ಜನಸಂಖ್ಯೆ ಹೆಚ್ಚಾದರೂ ಹಳೆಯ ಮಾಪನವೇ ಈಗಲೂ ಬಳಕೆಯಾಗುತ್ತಿದೆ. ಇದರ ಜೊತೆಗೆ ಕರ್ನಾಟಕ ಮೊನ್ನೆ ಕಾವೇರಿ ● 9ನೇ ಪುಟಕ್ಕೆ

## ಮೈಸೂರಿನ ಗ್ರಾಮ ಪಂಚಾಯಿತಿಗಳಿಗೆ ಡಿಜಿಟಲೀಕರಣದ ಸ್ಪರ್ಶ
# ಇನ್ನು ಮುಂದೆ ಆನ್‌ಲೈನ್‌ನಲ್ಲಿ ತೆರಿಗೆ ಪಾವತಿ

● ಕಳ್ಳ ಲೆಕ್ಕಕ್ಕೆ ಬಿತ್ತು ಕಡಿವಾಣ ● ಕೈ ಬರಹದ ರಸೀದಿ ವ್ಯವಸ್ಥೆ ಸ್ಥಗಿತ ● ಬಿಲ್ ಕಲೆಕ್ಟರ್‌ಗಳಿಗೆ ಪಿಒಎಸ್ ಯಂತ್ರ ● ಮೈಸೂರಿನ 256 ಗ್ರಾ.ಪಂ.ಗಳಿಗೆ ಪಿಒಎಸ್ ಯಂತ್ರ ವಿತರಣೆ ● ಆಸ್ತಿ ತೆರಿಗೆ ಪಾವತಿಸಿದ ಸ್ಥಳದಲ್ಲೇ ಪ್ರಿಟೆಂಡ್ ಬಿಲ್ ● ಭ್ರಷ್ಟಾಚಾರಕ್ಕೆ ಕಡಿವಾಣ, ಪಾರದರ್ಶಕ ಆಡಳಿತ



ಮೈಸೂರು, ಸೆ.26(ಬಿಎಲ್‌ಯು)– ಆಸ್ತಿ ತೆರಿಗೆ ಪಾವತಿಯ ಡಿಜಿಟಲ್ ವ್ಯವಸ್ಥೆ ಈಗ ಗ್ರಾಮ ಪಂಚಾಯಿತಿ ವ್ಯಾಪ್ತಿಗೂ ವಿಸ್ತರಣೆಗೊಂಡಿದೆ. ಆನ್‌ಲೈನ್ ಮೂಲಕ ಆಸ್ತಿ ತೆರಿಗೆ ಪಾವತಿಸಲು ಸರ್ಕಾರ ಗ್ರಾಮ ಪಂಚಾಯಿತಿಗಳಿಗೆ ಪಿಒಎಸ್ (Point of Sale) ಯಂತ್ರಗಳನ್ನು ನೀಡಿದೆ. ಮೈಸೂರು, ಮಂಡ್ಯ, ಚಾಮರಾಜನಗರ ಸೇರಿದಂತೆ ಹಲವು ಕಡೆ ಈಗಾಗಲೇ ಪಿಒಎಸ್ ಯಂತ್ರಗಳ ಮೂಲಕ ಆಸ್ತಿ ತೆರಿಗೆ ಪಾವತಿ ಆರಂಭಿಸಲಾಗಿದೆ. ಈ ಮೊದಲು ಬಿಲ್ ಪುಸ್ತಕಗಳಲ್ಲಿ ಕೈ ಬರಹದ ರಸೀದಿಗಳನ್ನು ನೀಡಿ ಆಸ್ತಿ ತೆರಿಗೆ ಪಾವತಿಸಿಕೊಳ್ಳಲಾಗುತ್ತಿತ್ತು. ಇದರಲ್ಲಿ ಬಹಳಷ್ಟು ಭ್ರಷ್ಟಾಚಾರ ನಡೆದು ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗಿತ್ತು.

ಆಸ್ತಿ ತೆರಿಗೆ ಪಾವತಿ ಮಾಡಿರುವ ರಸೀದಿ ಪುಸ್ತಕವೇ ಕಳೆದು ಹೋಗಿದೆ ಎಂದು ಅಧಿಕಾರಿಗಳು ಹಣ ಗುಳುಂ ಮಾಡಿರುವ ಬಹಷ್ಟು ನಿದರ್ಶನಗಳಿದ್ದವು. ಉದಾಹರಣೆಗೆ ಕೆಲವು ಕಡೆ ಬಿಲ್ ಕಲೆಕ್ಟರ್‌ಗೆ ಲಂಚ ಕೊಟ್ಟು 5 ಸಾವಿರ ರೂಪಾಯಿ ಆಸ್ತಿ ತೆರಿಗೆ ಪಾವತಿಸುವಲ್ಲಿ ಕೇವಲ 2 ಸಾವಿರ ರೂಪಾಯಿ ಪಾವತಿ ಸುತ್ತಿದ್ದರು. ಇದರಿಂದ ಸರ್ಕಾರಕ್ಕೂ ನಷ್ಟ ವಾಗುತ್ತಿತ್ತು. ಇದಕ್ಕೆ ಕಡಿವಾಣ ಹಾಕಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಗ್ರಾಮ ಪಂಚಾಯಿತಿಗಳಲ್ಲಿ ಆಸ್ತಿ ತೆರಿಗೆ ಪಾವತಿ ವ್ಯವಸ್ಥೆಯನ್ನು ಡಿಜಿಟಲೀಕರಣಗೊಳಿಸಿದೆ. ಜೊತೆಗೆ ಆಸ್ತಿ ತೆರಿಗೆ ಪಾವತಿಯನ್ನು ಮತ್ತಷ್ಟು ಸುಲಭಗೊಳಿಸಲು ಬಿಲ್ ಕಲೆಕ್ಟರ್‌ಗಳಿಗೆ ಪಿಒಎಸ್ ಯಂತ್ರಗಳನ್ನು ನೀಡಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮನೆಗಳ ಆಸ್ತಿ ವಿವರವನ್ನು ಕಂಪ್ಯೂಟರ್‌ಗೆ ಅಪ್ ಲೋಡ್ ಮಾಡಲಾಗಿದ್ದು, ಇದನ್ನು ಪಂಚತಂತ್ರ–2ಗೆ ಲಿಂಕ್ ಮಾಡಲಾಗಿದೆ. ಪಂಚತಂತ್ರ–2ಗೆ ಪಿಒಎಸ್ ಯಂತ್ರಗಳಿಗೆ ಲಿಂಕ್ ಮಾಡಲಾಗಿದೆ. ಈಗ ಬಿಲ್ ಕಲೆಕ್ಟರ್‌ಗಳಿಗೆ ಆಸ್ತಿ ತೆರಿಗೆ ಪಾವತಿಸಿಕೊಳ್ಳಲು ಇದೇ ಪಿಒಎಸ್ ಯಂತ್ರಗಳನ್ನು ನೀಡಲಾಗಿದೆ. ಯಾವುದೇ ಆಸ್ತಿಯ ನೋಂದಣಿ ಸಂಖ್ಯೆಯನ್ನು ನಮೂದಿಸಿದರೆ ಆಸ್ತಿಯ ಸಮಗ್ರ ವಿವರ ಸೇರಿದಂತೆ ತೆರಿಗೆ ಮೊತ್ತ ಮತ್ತು ಬಾಕಿ ಮೊತ್ತದ ವಿವರ ದೊರಕುವ ಸಾಫ್ಟ್‌ವೇರ್ ಸಿದ್ಧಪಡಿಸಲಾಗಿದೆ. ಈ ಮೊದಲು ಆಸ್ತಿ ವಿವರಗಳು ಪುಸ್ತಕಗಳಲ್ಲಿ ಇದ್ದ ಕಾರಣ ಅದನ್ನು ತಿದ್ದಲಾಗುತ್ತಿತ್ತು ಆಸ್ತಿ ತೆರಿಗೆ ಪಾವತಿಯ ವಿವರಗಳಲ್ಲಿ ಕಳ್ಳಾಟಗಳು ನಡೆಯುತ್ತಿತ್ತು. ಆದರೆ ಈಗ ಆಸ್ತಿಯ ಪ್ರತಿಯೊಂದು ವಿವರವೂ ಕಂಪ್ಯೂಟರ್‌ನಲ್ಲಿ ದಾಖಲಾಗಿರುತ್ತದೆ. ಯಾವುದನ್ನು ತಿದ್ದಲು ಸಾಧ್ಯವಿಲ್ಲ. ಒಂದು ವೇಳೆ ತಿದ್ದುಪಡಿಗಳಿದ್ದರೆ ಅದಕ್ಕೆ ಮೇಲಾಧಿಕಾರಿಗೆ ಅರ್ಜಿ ನೀಡಬೇಕು. ಪಂಚಾಯಿತಿ ● 9ನೇ ಪುಟಕ್ಕೆ

# ಕರ್ನಾಟಕಕ್ಕೆ ಕುಡಿಯಲೂ ನೀರಿಲ್ಲ; ತಮಿಳುನಾಡಿನ ಬೆಳೆಗೆ ನೀರು ಬೇಕಂತೆ...

**ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ**

● 4 ಜಲಾಶಯದಲ್ಲಿ ಒಟ್ಟು 50 ಟಿಎಂಸಿ ಮಾತ್ರ ನೀರಿದೆ ● ಕಾವೇರಿ ವಿವಾದದಿಂದ ಎರಡು ರಾಜ್ಯದ ನಡುವೆ ಘರ್ಷಣೆ
● ನೈಜ ಸ್ಥಿತಿ ತಮಿಳುನಾಡಿಗೆ ಅರ್ಥ ಆಗ್ತಾ ಇಲ್ಲ ● ಬಿಜೆಪಿ, ಜೆಡಿಎಸ್ ಸರ್ಕಾರದಲ್ಲಿದ್ದ ವಕೀಲರೇ ಈಗಲೂ ಇದ್ದಾರೆ




ಮೈಸೂರು, ಸೆ.26(ಬಿಎಲ್‌ಯು)– ಕರ್ನಾಟಕಕ್ಕೆ ಕುಡಿಯುವ ನೀರಿಗೇ ಕೊರತೆ ಆಗಿದ್ದರೆ, ತಮಿಳುನಾಡಿನ ಜನರು ಬೆಳೆಗೆ ನೀರು ಕೇಳುತ್ತಿದ್ದಾರೆ. ಈ ವಿವಾದದಿಂದ ಕರ್ನಾಟಕ ಹಾಗೂ ತಮಿಳುನಾಡಿನ ನಡುವೆ ಘರ್ಷಣೆ ಏರ್ಪಟ್ಟಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮೈಸೂರಿನ ಉತ್ತನಹಳ್ಳಿಯಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಆಯೋಜಿಸಿದ್ದ ಪಶು ಸಖಿಯರಿಗೆ A-HELP ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದುರದೃಷ್ಟವಶಾತ್ ಈ ವರ್ಷ ಬರಗಾಲ ಬೇರೆ ಬಂದಿದೆ. 123 ವರ್ಷದಲ್ಲಿ ಇದೇ ಮೊದಲ ಬಾರಿಗೆ ಕಡಿಮೆ ಪ್ರಮಾಣದ ಮಳೆಯಾಗಿದೆ. ಇದರಿಂದ ತಮಿಳುನಾಡಿಗೆ ಕಾವೇರಿ ನೀರು ಬಿಡಲು ಸಾಧ್ಯವಾಗುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ತಮಿಳುನಾಡಿಗೆ ಒಟ್ಟಾರೆ 177.25 ಟಿಎಂಸಿ ನೀರು ಕೊಡಬೇಕು. ಕರ್ನಾಟಕಕ್ಕೆ ಕುಡಿಯುವ ನೀರಿಗೆ 30 ಟಿಎಂಸಿ, ಬೆಳೆಗೆ 70 ಟಿಎಂಸಿ, ಕೈಗಾರಿಕೆಗಳಿಗೆ 3 ಟಿಎಂಸಿ ನೀರಿನ ಅವಶ್ಯಕತೆ ಇದೆ. ಆದರೆ ಕಾವೇರಿ ಜಲಾಯನ ● 9ನೇ ಪುಟಕ್ಕೆ

## ವರುಣ ಕ್ಷೇತ್ರಕ್ಕೆ ಯತೀಂದ್ರನೇ ನಿಜವಾದ ಎಂಎಲ್‌ಎ...!

### ಪಶು ಸಖಿಯರು ಗಗನಸಖಿಯರ ಹಾಗೆ!

ಮೈಸೂರು, ಸೆ.26(ಬಿಎಲ್‌ಯು)– ನಾನು ಪ್ರತಿನಿಧಿಸುತ್ತಿರುವ ಮೈಸೂರಿನ ವರುಣಾ ಕ್ಷೇತ್ರಕ್ಕೆ ಯತೀಂದ್ರನೇ ವಾಸ್ತವವಾಗಿ ಎಂಎಲ್‌ಎ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸಭಾ ಚುನಾವಣೆ ವೇಳೆ ಪ್ರಚಾರದ ಉಸ್ತುವಾರಿಯನ್ನು ಯತೀಂದ್ರನೇ ವಹಿಸಿದ್ದರು. ಅಂದು ಉತ್ತನಹಳ್ಳಿ ಗ್ರಾಮಕ್ಕೆ ನಾನು ಪ್ರಚಾರಕ್ಕೆ ಬರಲೇ ಇಲ್ಲ. ನನ್ನ ಪರವಾಗಿ ಯತೀಂದ್ರನೆ ಪ್ರಚಾರ ಮಾಡಿದ್ರು. ಹೇಳಬೇಕೆಂದರೆ ವಾಸ್ತವವಾಗಿ ಯತೀಂದ್ರನೇ ಇಲ್ಲಿಯ ಶಾಸಕ ಎಂದು ತಿಳಿಸಿದರು.

ನಾನು ಈ ತನಕ 14 ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದೇನೆ. 5 ಚುನಾವಣೆಯಲ್ಲಿ ಸೋತು, 9 ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದೇನೆ. ನನಗೆ ಗೆಲುವಿನ ಅನುಭವವೂ ಗೊತ್ತು ಸೋಲಿನ ಅನುಭವವೂ ಗೊತ್ತು ಎಂದು ಸಿದ್ದರಾಮಯ್ಯ ಹೇಳಿದರು. ಈಗ ಪಶುಪಾಲನಾ ಇಲಾಖೆಯಿಂದ ಪಶು ಸಖಿಯರಿಗೆ ತರಬೇತಿ ನೀಡುತ್ತಿದ್ದೀರಾ. ಪಶು ಸಖಿಯರು ಗಗನ ಸಖಿಯರು ಇದ್ದ ಹಾಗೆ. ಈ ಹಿಂದೆ ರಾಣಿ ಪಾತ್ರ ಮಾಡುವಾಗ ಜೊತೆಯಲ್ಲಿ ಸಖಿ ಇರುತ್ತಿದ್ದಳು ಎಂದು ಸಿದ್ದರಾಮಯ್ಯ ಪೌರಾಣಿಕ ವಿಚಾರಗಳ ಮೆಲುಕು ಹಾಕಿದರು.

ನೀನೇನಾದ್ರೂ ನಾಟಕದಲ್ಲಿ ಸಖಿ ಪಾತ್ರ ಮಾಡಿದ್ದೀಯೇನಯ್ಯ ಎಂದು ವೇದಿಕೆಯಲ್ಲಿದ್ದ ಸಚಿವ ಡಾ.ಮಹದೇವಪ್ಪ ಅವರನ್ನು ಸಿದ್ದರಾಮಯ್ಯ ಪ್ರಶ್ನಿಸಿ, ಹಾಸ್ಯ ಚಟಾಕಿ ಹಾರಿಸಿದರು.

## ನಕ್ಕರೆ ಅದೇ ಸ್ವರ್ಗ

ಹೆಂಡತಿ : "ಏನ್ರೀ. ವಕ್ಕರಿಸಿದ ನೆಂಟರು ಎರಡು ದಿನಾ ಆದ್ರೂ ಹೋಗ್ತಾನೆ ಇಲ್ಲ"

ಗಂಡ : "ಅದಕ್ಯಾಕೆ ಚಿಂತೆ? ಇವತ್ತು ಪಲ್ಯಕ್ಕೆ ಉಪ್ಪು ಜಾಸ್ತಿ ಹಾಕು. ಸಾರನ್ನು ತುಂಬಾ ಖಾರ ಮಾಡು, ಮಜ್ಜಿಗೆ ತುಂಬಾ ಹುಳಿ ಇರಲಿ. ಅನ್ನ ಅರೆಬರೆ ಬೇಯಿಸು. ಸಂಜೆ ಆಗುವಷ್ಟರಲ್ಲಿ ರಿಸಲ್ಟ್ ತಿಳಿಯುತ್ತೆ!"

**ಮೈಸೂರು ಮಿತ್ರ**

ಬುಧವಾರ, 27 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.


**ಅಮೃತವಾಹಿನಿ..........**

ಏನನ್ನೇ ಆದರೂ ಸ್ಪಷ್ಟವಾಗಿ ಅಭಿವ್ಯಕ್ತಿಗೊಳಿಸಿದರೆ
ಅದು ಚೆನ್ನಾಗಿ ಬರೆದಂತೆಯೇ –ಮಾಂಟೆಗೋ

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಗುಡ್ಡಕ್ಕೆ ಕಲ್ಲು ಹೊತ್ತಂತೆ, ಸಮುದ್ರಕ್ಕೆ ನೀರು ಹೊತ್ತಂತೆ

## ನಿಮ್ಮ ಪತ್ರಗಳು

### ರಾಜಾಜಿನಗರ ಆಶ್ರಯ ಬಡಾವಣೆಯ ಒಳಚರಂಡಿ ವ್ಯವಸ್ಥೆ ಸರಿಪಡಿಸಿ



ಮಾನ್ಯರೆ,

ಮೈಸೂರಿನ ಬೋಗಾದಿ 2ನೇ ಹಂತದ ಹೊರವರ್ತುಲ ರಸ್ತೆಯ ಸಮೀಪವಿರುವ ರಾಜಾಜಿನಗರ ಆಶ್ರಯ ಬಡಾವಣೆಯ ಒಳಚರಂಡಿ ವ್ಯವಸ್ಥೆ ಸರಿಯಿಲ್ಲದೆ ಇಲ್ಲಿನ ಕೆಲವು ಮನೆಗಳಿಗೆ ಒಳಚರಂಡಿ ನೀರು ನುಗ್ಗಿ ಮನೆ ಮಂದಿಗೆಲ್ಲಾ ಬಹಳ ತೊಂದರೆಯಾಗುತ್ತಿದೆ. ಮಕ್ಕಳಾದಿಯಾಗಿ ಹಲವಾರು ಜನ ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಜೊತೆಗೆ, ಕೊಳಚೆ ನೀರು ಉಕ್ಕಿ ಹರಿದು ರಸ್ತೆಗೆಲ್ಲಾ ಬರುತ್ತಿರುವುದರಿಂದ ಇಲ್ಲಿನ ವಾತಾವರಣವೇ ಗಬ್ಬು ನಾರುತ್ತಿದ್ದು, ಸಾರ್ವಜನಿಕರು ಮೂಗು, ಬಾಯಿ ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಹೀಗಾಗಿ ಸಂಬಂಧಪಟ್ಟವರು ಇನ್ನಾದರೂ ಎಚ್ಚೆತ್ತು ತ್ವರಿತವಾಗಿ ಒಳಚರಂಡಿ ದುರಸ್ತಿಪಡಿಸಿ ಇಲ್ಲಿನ ನಿವಾಸಿಗಳಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕಿದೆ.

– ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

### ಸಂಸದ–ಶಾಸಕರ ನಡುವಿನ ಜಟಾಪಟಿ ಖಂಡನೀಯ!

ಮಾನ್ಯರೆ,

ಕೋಲಾರ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಅಲ್ಲಿಯ ಸಂಸದ ಮತ್ತು ಶಾಸಕರೊಬ್ಬರ ನಡುವೆ ನಡೆದ ವಾಗ್ವಾದ ಹಾಗೂ ಜಟಾಪಟಿಯ ವರ್ತನೆ ನಾಚಿಕೆಗೇಡಿತನ ಸಂಗತಿಯಾಗಿದೆ. ನೂರಾರು ಜನರಿದ್ದ ಕಾರ್ಯಕ್ರಮದ ವೇದಿಕೆ ಮೇಲೆಯೇ ಜನಪ್ರತಿನಿಧಿಗಳಿಬ್ಬರೂ ಏಕವಚನದಲ್ಲೇ ಪರಸ್ಪರ ನಿಂದಿಸಿ, ದೂಷಿಸಿಕೊಂಡು ಕೆಲಕಾಲ ಸಭಿಕರ ನಡುವೆ ಅಲ್ಲೋಲ ಕಲ್ಲೋಲ ಸೃಷ್ಟಿ ಮಾಡಿದ್ದು ಖಂಡನೀಯವಾಗಿದೆ.

ಜನರಿಗಾಗಿ ನಡೆಯುತ್ತಿದ್ದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಶಾಸಕ ಹಾಗೂ ಸಂಸದರ ವೈಯಕ್ತಿಕ ವಿಚಾರದ ಸಲುವಾಗಿ ಸಭೆಯನ್ನು ರಣರಂಗವಾಗಿ ಪರಿಣಮಿಸಬಾರದಿತ್ತು. ಜನರ ಸಮಸ್ಯೆ ಆಲಿಸಲು ಬಂದು ವೇದಿಕೆಯಲ್ಲಿಯೇ ಕಿತ್ತಾಟ ಮಾಡಿಕೊಂಡಿದ್ದು, ಇದರಿಂದ ಜನತೆಗೆ ತಪ್ಪು ಸಂದೇಶ ರವಾನೆ ಆಗುತ್ತದೆ. ಅಲ್ಲಿ ಇಬ್ಬರೂ ಜನಪ್ರತಿನಿಧಿಗಳು ಒಬ್ಬರನ್ನೊಬ್ಬರು ಪರಸ್ಪರ ನಿಂದಿಸಿ ಕೈ ಕೈ ಮಿಲಾಯಿಸಿಕೊಳ್ಳುತ್ತಿದ್ದರೆ, ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಬಂದಿದ್ದ ಜನರಂತು ಇವರಿಬ್ಬರ ಫೈಟ್ ದರ್ಶನ ಕಂಡು ಅವಾಕ್ಕಾಗಿದ್ದಾರೆ. ಜನರ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳಿಗೆ ಪರಿಹಾರ ಕೊಡಲು ಆಯೋಜಿಸಲಾಗಿದ್ದ ಸರ್ಕಾರಿ ಕಾರ್ಯಕ್ರಮದಲ್ಲಿ ಇಬ್ಬರು ಜನಪ್ರತಿನಿಧಿಗಳ ಈ ರೀತಿಯ ನಡೆ ಶೋಭೆ ತರುವಂಥದ್ದಲ್ಲ. ಈ ರೀತಿಯ ಪ್ರಕರಣಗಳು ಮತ್ತೆ ಮರುಕಳಿಸದಿರಲಿ ಎಂಬುದೇ ಎಲ್ಲರ ಆಶಯವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

### ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಸಂಗ್ರಹಿಸಿದ ಕಸ ಸೂಕ್ತವಾಗಿ ವಿಲೇವಾರಿ ಮಾಡಿ



ಮಾನ್ಯರೆ,

ಕೆಲವು ಕಾಲೇಜುಗಳಲ್ಲಿ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಸಾಮಾಜಿಕ ಕೆಲಸದಡಿ ಚಾಮುಂಡಿಬೆಟ್ಟದ ಮೆಟ್ಟಿಲುಗಳ ಮೇಲೆ ತ್ಯಾಜ್ಯ ಸಂಗ್ರಹಿಸುವ ಕಾರ್ಯ ಮಾಡುತ್ತಾರೆ. ಭಕ್ತಾದಿಗಳು ತಿಂದು ಬಿಸಾಕಿದ ಪ್ಲಾಸ್ಟಿಕ್ ಕವರ್‌ಗಳು, ಪ್ಲಾಸ್ಟಿಕ್ ನೀರಿನ ಬಾಟಲ್‌ಗಳು ಮತ್ತು ತಿಂಡಿ–ತಿನಿಸುಗಳ ಪೇಪರ್ ಕವರ್‌ಗಳು ಇತ್ಯಾದಿ ಸಂಗ್ರಹಿಸುತ್ತಿದ್ದಾರೆ. ಸದರಿ ವಿದ್ಯಾರ್ಥಿಗಳು ಇವೆಲ್ಲವನ್ನೂ ಸಂಗ್ರಹಿಸಿ ದೊಡ್ಡ ಪ್ಲಾಸ್ಟಿಕ್ ಕವರ್‌ಗಳಲ್ಲಿ ತುಂಬಿ ಅವುಗಳನ್ನು ಬೆಟ್ಟದ ನಂದಿ ಬಳಿ ಇಟ್ಟು ತಮ್ಮ ಕೆಲಸ ಮುಗಿಯಿತು ಎಂದು ತಿಳಿದು ಹೊರಟು ಬಿಡುತ್ತಾರೆ. ಆದರೆ ಸಂಗ್ರಹಗೊಂಡ ತುಂಬಿದ ಪ್ಲಾಸ್ಟಿಕ್ ಕವರುಗಳನ್ನು ಮುಂದೆ ಯಾರು ಹೇಗೆ ತೆಗೆದುಕೊಂಡು ಹೋಗುತ್ತಾರೆ ಎಂಬುದರ ಬಗ್ಗೆ ಅವರಿಗೆ ಅರಿವಿಲ್ಲ. ಆದರೆ ಇಂತಹ ಕವರ್‌ಗಳನ್ನು ನಂದಿಯ ಬಳಿ ಮರಗಿಡಗಳ ಮೇಲಿರುವ ಕೋತಿಗಳು ಜಿಗಿದು ಬಂದು, ಚೀಲಗಳನ್ನೆಲ್ಲಾ ಕಿತ್ತು ಬಿಸಾಕಿ, ನಂದಿಯ ಬಳಿಯ ಜಾಗವನ್ನು ಕಲುಷಿತಗೊಳಿಸುತ್ತವೆ. ಆ ಕೊಳಕಿನಿಂದ ಬರುವ ದುರ್ವಾಸನೆ ನಂದಿಯ ಸುತ್ತ ಆವರಿಸಿಕೊಂಡು ಬರುವ ಭಕ್ತಾದಿಗಳು ಅಸಹ್ಯ ಪಟ್ಟುಕೊಳ್ಳುವ ಮಟ್ಟಿಗಿರುತ್ತದೆ. ಹಾಗಾಗಿ ಯಾವುದಾದರೂ ಸಂಘಟನೆಗಳು ಅಥವಾ ಕಾಲೇಜಿನ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಬೆಟ್ಟದ ಹಂತಗಳ ಸುತ್ತಾಮುತ್ತಾ ಹಂತಗಳ ಮೇಲೆ ಬಿದ್ದಿರುವ ಕಸ ಸಂಗ್ರಹಿಸಿದ ನಂತರ, ಆ ಕಸವನ್ನು ಸರಿಯಾಗಿ ವಿಲೇವಾರಿ ಮಾಡುವ ಜವಾಬ್ದಾರಿಯನ್ನು ಮಾಡಲೇಬೇಕು. ಇನ್ನು ಮುಂದಾದರೂ, ಸಂಗ್ರಹಿಸಿದ ಕಸವನ್ನು ಸೂಕ್ತವಾಗಿ ವಿಲೇವಾರಿ ಮಾಡಬೇಕು.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

**ಸಂಸ್ಕೃತಿ ಚಿಂತನಾ**

# ಕನ್ನಡದಲ್ಲಿ ಕಾವ್ಯತತ್ತ್ವ

**ಡಾ.** ಕೆ. ಕೃಷ್ಣಮೂರ್ತಿ ಅವರು ಕನ್ನಡ, ಸಂಸ್ಕೃತ, ಇಂಗ್ಲೀಷ್ ಎಂಬ ಮೂರು ಭಾಷೆಗಳಲ್ಲಿ ಅಸಾಧಾರಣ ವಿದ್ವಾಂಸರಾಗಿದ್ದು, ಇಪ್ಪತ್ತನೆಯ ಶತಮಾನದ ಸಾಹಿತ್ಯಕ್ಕೆ ವಿಪುಲವಾದ ಕೊಡುಗೆಯನ್ನು ಕೊಟ್ಟರು. ಭಾರತೀಯ ಕಾವ್ಯಮೀಮಾಂಸೆಯ ಹಲವು ಮೂಲಗ್ರಂಥ ಗಳನ್ನು ಕನ್ನಡಕ್ಕೆ ಅನುವಾದಿಸಿ ಅವರು ಕನ್ನಡ ಸಾಹಿತ್ಯದ ಸಿರಿವಂತಿಕೆಯನ್ನು ಹೆಚ್ಚಿಸಿದರು. ಅವರು ಕೇವಲ ಅನುವಾದಗಳಿಂದ ತೃಪ್ತಿ ಪಡಲಿಲ್ಲ. ಸ್ವತಂತ್ರ ವಿಮರ್ಶ ಗ್ರಂಥಗಳನ್ನೂ ರಚಿಸಿದರು. ಅವರ ವಿಶಾಲ ಮತ್ತು ಗಂಭೀರ ಶಾಸ್ತ್ರಜ್ಞಾನ, ಗುಣದೋಷಗಳನ್ನು ವಿವೇಚಿಸುವ ತೀಕ್ಷ್ಣಮನೀಷ ಅವರ ಗ್ರಂಥಗಳ ವೈಶಿಷ್ಟ್ಯದ ಮುಖ್ಯ ಕಾರಣ. ಕನ್ನಡ ಸಾಹಿತ್ಯದ ಸಕಲ ಅಲಂಕಾರ ಶಾಸ್ತ್ರೀಯ ಗ್ರಂಥಗಳು ಅವರಿಗೆ ಕರತಲಾಮಲಕವಾಗಿದ್ದವು. ಅಂತಹ ಅಪೂರ್ವ ವಿದ್ವತ್ತೆಯ ಪರಿಣಾಮವಾಗಿ ರೂಪಗೊಂಡ ಶ್ರೇಷ್ಠ ಗ್ರಂಥ **ಕನ್ನಡದಲ್ಲಿ ಕಾವ್ಯತತ್ತ್ವ.** ಈ ಪುಸ್ತಕ ಮೊದಲು ಪ್ರಕಟವಾದದ್ದು 1964ರಲ್ಲಿ. ನಾಲ್ಕನೆಯ ಮುದ್ರಣವು 2018ರಲ್ಲಿ ಆಗಿದೆ. ಈ ವರ್ಷ (2023) ಡಾ.ಕೆ.ಕೃಷ್ಣಮೂರ್ತಿ ಅವರ ಜನ್ಮ ಶತಮಾನೋತ್ಸವದ ಸಂದರ್ಭ ದಲ್ಲಿ ಅವರ ಗ್ರಂಥಗಳ ಮರುಮೌಲ್ಯ ಮಾಪನ ನಡೆಯುವುದು ಸಹಜವಾಗಿದೆ. ಈ ದೃಷ್ಟಿಯಿಂದ ಕನ್ನಡದಲ್ಲಿ ಕಾವ್ಯತತ್ತ್ವವನ್ನು ನೋಡೋಣ.

ಕಾವ್ಯತತ್ತ್ವದ ನಿರೂಪಣೆ ಕನ್ನಡದ (ಉಪಲಬ್ಧ) ಪ್ರಥಮ ಗ್ರಂಥವಾದ **ಕವಿರಾಜ ಮಾರ್ಗ**ದಲ್ಲೇ ಸೊಂಪಾಗಿ ಆಗಿದೆ. ಶ್ರೀ ವಿಜಯನಿಗೆ ದಂಡಿಯ ಕಾವ್ಯಾದರ್ಶದ ಪೂರ್ಣ ಪರಿಚಯ ಇತ್ತು. ಬಹು ಭಾಗದಲ್ಲಿ ಅವನು ದಂಡಿಯನ್ನು ಅನುಸರಿಸಿದ್ದಾನೆ. ದಂಡಿಗೆ ತಿಳಿಯದ ಕನ್ನಡದ ಕಾವ್ಯ ಪ್ರಕಾರ ಗಳನ್ನೂ ವಿಶಿಷ್ಟ ಪ್ರಯೋಗಗಳನ್ನೂ ಶ್ರೀ ವಿಜಯನು ವಿವರಿಸಿದ್ದಾನೆ. ಇದನ್ನು ಸರಿಯಾಗಿ ಗುರುತಿಸಿ ಡಾ. ಕೆ. ಕೃಷ್ಣಮೂರ್ತಿಗಳು ಈ ಗ್ರಂಥದಲ್ಲಿ ತೋರಿಸಿದ್ದಾರೆ. ಸಂಸ್ಕೃತದಲ್ಲಿ 'ಯತಿ' ಕಡ್ಡಾಯ, ಕನ್ನಡದಲ್ಲಿ ಪದಮಧ್ಯಯತಿಯನ್ನು ಬಿಡಬಹುದು. ಆದರೆ ದ್ವಿತೀಯಾಕ್ಷರಪ್ರಾಸ ಕನ್ನಡದಲ್ಲಿ ಕಡ್ಡಾಯ. ಸಂಸ್ಕೃತ ದಲ್ಲಲ್ಲ. ಇದನ್ನು ಕವಿರಾಜಮಾರ್ಗದಲ್ಲಿ–

ನುತ ಶಬ್ದಾಲಂಕಾರದೊಳತಿಶಯಮೀ
ಕನ್ನಡಕ್ಕೆ ಸತತಂ ಪ್ರಾಸಂ (II.20)

ಹೇಳಿದ್ದಾರೆಂಬುದನ್ನು ಡಾ.ಕೆ.ಕೆ. ತೋರಿಸಿದ್ದಾರೆ.

ಕಾವ್ಯತತ್ತ್ವದ ಅರಿವನ್ನು ಕನ್ನಡಿಗರಿಗೆ ಶಾಸ್ತ್ರೀಯವಾಗಿ ಕೊಡುವ ಇನ್ನೊಂದು ಗ್ರಂಥವೆಂದರೆ ನಾಗವರ್ಮ ವಿರಚಿತ ಕಾವ್ಯಾ ವಲೋಕನ. ಡಾ.ಕೆ.ಕೆ. ಅವರು ಇದನ್ನು ಸೂಕ್ಷ್ಮ ದೃಷ್ಟಿಯಿಂದ ವಿಮರ್ಶಿಸಿದ್ದಾರೆ. "ಇಲ್ಲಿ ಧ್ವನಿಯ ಪ್ರಸ್ತಾವವಿಲ್ಲವೇ ಹೊರತು ಉಳಿದೆಲ್ಲ ಕಾವ್ಯತತ್ತ್ವಗಳ ಕೂಲಂಕಷ ಪ್ರತಿಪಾದನೆ ಬಂದಿದೆ" (ಪು. 11) ಎನ್ನುವ ಅವರ ಮಾತು ಸ್ವೀಕಾರಾರ್ಹವಾಗಿದೆ.

ಕವಿಕಾಮ (ಹದಿಮೂರನೆಯ ಶತಮಾನ) ರಚಿಸಿದ ಶೃಂಗಾರ ರತ್ನಾಕರದ ವೈಶಿಷ್ಟ್ಯ ವನ್ನೂ ಡಾ. ಕೆ.ಕೆ. ತಿಳಿಸಿಕೊಟ್ಟಿದ್ದಾರೆ. "ಪೂರ್ವ ದವರ ಮನಶ್ಶಾಸ್ತ್ರವನ್ನರಿಯಲು ಇಂದಿಗೂ ಈ ಗ್ರಂಥ ಸಹಕಾರಿಯಾಗಿದೆ. ವಿಚಾರದಲ್ಲೂ ಶೈಲಿಯಲ್ಲೂ ಕವಿಯು ತನ್ನತನವನ್ನು ತೋರಿಸಿದ್ದಾನೆ" (ಪು. 13) ಎಂದು ಅವರು ಹೇಳಿದ್ದಾರೆ. ಸಾಳ್ವನ ರಸರತ್ನಾಕರ ಮತ್ತು ತಿರುಮಲಾರ್ಯನ ಅಪ್ರತಿಮವೀರಚರಿತೆಗಳ ಬಗೆಗೆ ಹೇಳುತ್ತಾ "ಇವುಗಳಲ್ಲಿ ಉದಾಹರಣೆಗಳ ನಾವೀನ್ಯತೆಯನ್ನು ಬಿಟ್ಟರೆ ಉಲ್ಲೇಖನೀಯವಾದ ಅಂಶಗಳಿಲ್ಲ" ಎಂದಿದ್ದಾರೆ. ಇದು ಅವರು ನಿಷ್ಪಕ್ಷಪಾತ ಧೋರಣೆಗೆ ಸಾಕ್ಷಿ.

ಶಾಸ್ತ್ರವನ್ನು ಓದುವುದು ಜ್ಞಾನಕ್ಕಾಗಿ, ಕಾವ್ಯವನ್ನು ಓದುವುದು ಉಲ್ಲಾಸಕ್ಕಾಗಿ. ಓದುಗರ ಉಲ್ಲಾಸ ಉಂಟಾಗುವುದು ಅಲಂಕಾರಗಳಿಂದ, ರಸಗಳಿಂದ, ಧ್ವನಿಯಿಂದ, ಚಮತ್ಕಾರದಿಂದ, ರೀತಿಯಿಂದ ಎಂಬ ನಾನಾ ವಿಚಾರಗಳು ಕಾವ್ಯಮೀಮಾಂಸಕರಿಂದ ಪ್ರತಿಪಾದಿತವಾಗಿರುವುದು ಸರ್ವವಿದಿತ. ಈ ಪರಿಕಲ್ಪನೆಗಳು ಭರತ, ಭಾಮಹ, ದಂಡಿ, ವಾಮನ, ಆನಂದ ವರ್ಧನ ಮುಂತಾದ ಹಲವರಿಂದ ಸಂಸ್ಕೃತದಲ್ಲಿ ಮೊದಲು ತಮ್ಮ ಗ್ರಂಥಗಳಿಂದ ಪ್ರತಿಪಾದಿತವಾದುವು. ಕನ್ನಡ, ತೆಲುಗು ಇತ್ಯಾದಿ ಭಾಷೆಗಳಲ್ಲಿ ಇದೇ ವಿಷಯಗಳನ್ನು ವಿದ್ವತ್ಕವಿಗಳು ಪ್ರತಿಪಾದಿಸಿದ್ದಾರೆ. ಹೊಸ ಪರಿಕಲ್ಪನೆ ಅಥವಾ ಸಿದ್ಧಾಂತ ಅವುಗಳಲ್ಲಿ ಕಂಡು ಬಂದಿಲ್ಲ. ಪಾಶ್ಚಾತ್ಯ ಕಾವ್ಯಗಳ ಮತ್ತು ಕಾವ್ಯ ಮೀಮಾಂಸೆಯ ಪರಿಚಯ ಉಂಟಾದ ಮೇಲೆ ಅಲ್ಲಿರುವ ಹೊಸ ವಿಚಾರಗಳೂ, ವಿಭಿನ್ನ ವಿಮರ್ಶನ ಪ್ರಕಾರಗಳೂ ನಮ್ಮಲ್ಲಿ ಹುಟ್ಟಿದುವು. ಇದೆಲ್ಲವನ್ನೂ ಅರಿತಿದ್ದ ಡಾ. ಕೆ.ಕೆ. ಎಲ್ಲ ಕನ್ನಡ ಅಲಂಕಾರವನ್ನು ಅವಲೋಕಿಸಿ, ಪರೀಕ್ಷಿಸಿ ತಮ್ಮ ಅಭಿಪ್ರಾಯಗಳನ್ನು ತರ್ಕಬದ್ಧವಾಗಿ ಪ್ರತಿಪಾದಿಸಿದ್ದಾರೆ. ಅಭಿಪ್ರಾಯ ಭೇದ ಇದ್ದಾಗ ಅದನ್ನು ಹೇಳು ಹಿಂಜರಿದಿಲ್ಲ.

ಕವಿರಾಜಮಾರ್ಗದ ಸಮಗ್ರ ವಿಮರ್ಶೆಯನ್ನು ಮಾಡಿ, ಅದರ ವೈಶಿಷ್ಟ್ಯವನ್ನು ತಿಳಿಸಿ ಡಾ.ಕೆ.ಕೆ.ನಾಗವರ್ಮನ ಛಂದೋಂಬುಧಿಯನ್ನು ಪೂರ್ಣವಾಗಿ ಪ್ರಸ್ತುತ ಪುಸ್ತಕದಲ್ಲಿ ಪರಿಚಯಿಸಿದ್ದಾರೆ. ಹಾಗೆಯೇ ಎರಡನೆಯ ನಾಗವರ್ಮನ ಕಾವ್ಯಾವಲೋಕನದ ಪರಿ ಚಯವೂ ಹೃದ್ಯವಾಗಿದೆ. ವಾಮನ, ಉದ್ಭಟ, ರುದ್ರಟ ಎಂಬ ಮೂವರು ಸಂಸ್ಕೃತ–ಅಲಂಕಾರಿಕರ ಪ್ರಭಾವ ಎರಡನೆಯ ನಾಗ ವರ್ಮನ ಮೇಲೆ ಎಷ್ಟು ಗಾಢವಾಗಿತ್ತು ಎಂಬುದನ್ನೂ ಡಾ.ಕೆ.ಕೆ. ವಿಶದಪಡಿಸಿದ್ದಾರೆ. ಉದಯಾದಿತ್ಯಾಲಂಕಾರ ಎಂಬುದು ಕನ್ನಡದ ಅಲಂಕಾರಿಕ ಗ್ರಂಥಗಳಲ್ಲಿ ಉನ್ನತ ಸ್ಥಾನವನ್ನು ಪಡೆಯಲು ಅರ್ಹವಾಗಿದೆ. ಚೋಳರಾಜ ಸೋಮ ನಾಥನ ಮಗ ಉದಯಾದಿತ್ಯನು ಇದರ ಕರ್ತೃ. ಉದೆಗ ಎಂದೂ ಅವನನ್ನು ಕರೆಯಲಾಗಿದೆ.

ಸದಮಲಕಾಂತಿಯಿಂ
ಸುಕುಮಾರತೆಯಿಂದೆ ಭಿನ್ನಭಾ
ವದೆ ನುತಲಕ್ಷ್ಯದಿಂ
ಸಕಲಭೋಗದಿನುಜ್ಜ್ವಲರೂಪದಿಂ ಪೊದ
ಳ್ದೊದವಿದ ಕಾವ್ಯದಿಂ ನೃಪಕವೀಶ್ವರರಿಂದ
ಶಿಖಾಮಣಿಯಾ
ದುದೆಗ ನೃಪೇಶ್ವರಂ ನೃಪಕವೀಶ್ವರರಿಂ
ಕವಿರಾಜಶೇಖರಂ ॥

ಎಂಬ ಪದ್ಯದಲ್ಲಿ ಉದೆಗ ಎಂಬ ಪದ ವನ್ನು ನೋಡಬಹುದು. ಉದಯಾದಿತ್ಯಾ ಲಂಕಾರವೂ ದಂಡಿಯ ಕಾವ್ಯಾದರ್ಶನವನ್ನೇ ಅನುಸರಿಸಿದೆ. ಇದರ ಬಗೆಗೂ ಡಾ.ಕೆ.ಕೆ. ಪರಿಚಯವನ್ನು ಕೊಟ್ಟಿದ್ದಾರೆ.

ಇದರ ಮುಂದೆ ಕವಿ ಕಾಮನ ಶೃಂಗಾರ ರತ್ನಾಕರವನ್ನು ಡಾ. ಕೆ.ಕೆ. ಚೆನ್ನಾಗಿ ಪರಿಚಯಿಸಿದ್ದಾರೆ. ಕವಿ ಕಾಮನು ತನ್ನ ಬಗೆಗೆ ಪ್ರಶಂಸಾತ್ಮಕವಾಗಿ ಹೇಳಿಕೊಂಡ ಪದ್ಯವನ್ನೂ ಉದಾಹರಿಸಿದ್ದಾರೆ.

ಅವದಾತಕೀರ್ತಿ ವಿದ್ಯಾ
ಭವನಂ ನವರಸವಿಭಾಸಿ ವಾಗ್ದೇವಿ
ಲಬ್ಧವರ ಪ್ರಸಾದವಿಭವಂ
ಕವಿಕಾಮಂ ಸುಜನವನಜವನಮಾರ್ತಂಡಂ॥

ಶೃಂಗಾರರಸವನ್ನು ವರ್ಣಿಸುವಾಗ ಅದರ ಐದು ವಿಧಗಳನ್ನು ಹೇಳಿರುವುದು ಕವಿಕಾಮನ ಕೊಡುಗೆ ಎನ್ನಬಹುದಾಗಿದೆ.

ಮುದಮಂ ಭಾವಿಸ ಚಿತ್ತವೃತ್ತಿ
ಸಮಸಂದಾರಾಗದಿಂದೆಯ್ದೆ ಪು
ಟ್ಟಿದ ವಕ್ತ್ರಾಬ್ಜವಿಕಾಸಮಂತದೆ ವಲಂ
ಶೃಂಗಾರಮಂತಾ ರಸಂ
ವಿದಿತಂ ಭಾವಿಸುವಾಗಳೈದು ತರನಾ
ವಾಗ್ವೃತ್ತಿಯಿಂದಾ ವಿಳ
ಸದೆ ನೇಪಥ್ಯದಿನಾ ಕ್ರಿಯಾತ್ಮಕದಿನಾ
ಸಂಕೀರ್ಣದಿಂ ವ್ಯಸ್ತದಿಂ॥

ಈ ಪದ್ಯದಲ್ಲಿ ಶೃಂಗಾರದ (1) ಮಾತು, (2) ರೂಪ (3) ಕ್ರಿಯೆ (4) ಸಂಕರ, (5) ವ್ಯಸ್ತ ಎಂಬ ಐದು ಪ್ರಕಾರಗಳನ್ನು ಹೇಳಿ ಅವು ಗಳಿಗೆ ಉದಾಹರಣೆಗಳನ್ನು ಕೊಟ್ಟಿರುವುದು ವಿಶೇಷ.

ಕನ್ನಡದಲ್ಲಿ ರಚಿತವಾದ ಇನ್ನೊಂದು ಅಲಂಕಾರ ಗ್ರಂಥ ಮಾಧವಾಲಂಕಾರ. ಇದರ ಕಾಲ ಹದಿನೇಳನೆಯ ಶತಮಾನದ ಪ್ರಾರಂಭ ಇರಬಹುದು. ಮಾಧವನೆಂಬ ರಾಜನು ದಂಡಿಯ ಕಾವ್ಯಾದರ್ಶದ ಸಮಗ್ರಾನುವಾದ ವನ್ನು ಮಾಡಲು ಇದನ್ನು ರಚಿಸಿದನು. ಇದನ್ನು ಕುರಿತು ಡಾ. ಕೆ.ಕೆ. ಹೇಳುತ್ತಾರೆ "ಈ ಕನ್ನಡ ಭಾಷಾಂತರವು ಭಾಷಾಂತರವೇ ಅಲ್ಲ. ಇದು ಸ್ವತಂತ್ರ ರಚನೆ ಯೆನಿಸುವ ಮಟ್ಟಿಗೆ ಸರಳವೂ ಸತ್ತ್ವಯುತವೂ ಆಗಿದೆ (ಪು.50)

ಹದಿನಾರನೆಯ ಶತಮಾನದ ಮಧ್ಯ ಭಾಗದಲ್ಲಿ ರಚಿತವಾದ ರಸರತ್ನಾಕರ ಮತ್ತು ಶಾರದಾ ವಿಲಾಸ ಎಂಬ ಗ್ರಂಥಗಳ ಕರ್ತೃ ಸಾಳ್ವ. ಇಲ್ಲೂ ಹೆಚ್ಚು ಗೋಚರವಾಗುವುದು ಅನುವಾದ, ಸ್ವತಂತ್ರ ಚಿಂತನೆ ಕಡಿಮೆ. "ಆತನಲ್ಲಿ ವಿಮರ್ಶನ ದೃಷ್ಟಿಗಿಂತಲೂ ಅನುವಾದ ದೃಷ್ಟಿಯೇ ಹೆಚ್ಚು" ಎಂದು ಡಾ.ಕೆ.ಕೆ. ಹೇಳಿದ್ದಾರೆ. ಈ ಗ್ರಂಥಗಳನ್ನು ವಿವೇಚಿಸುವಾಗ ಅವರು ತೀ.ನಂ.ಶ್ರೀ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡಿದ್ದಾರೆ. ಅನುಭಾವಗಳ ಬಗೆಗೆ ಆಸಕ್ತಿಯನ್ನುಳ್ಳ ಜಿಜ್ಞಾಸುಗಳು ಈ ಭಾಗವನ್ನು ಅವಶ್ಯವಾಗಿ ಓದಬೇಕು. ಕನ್ನಡದ ಅಲಂಕಾರ ಶಾಸ್ತ್ರೇತಿಹಾಸದಲ್ಲಿ ಧ್ವನಿಯ ಬಗೆಗೆ ಗಂಭೀರವಾಗಿ ನಿರೂಪಣೆಯನ್ನು ಮಾಡಿರುವವನು ಸಾಳ್ವನೊಬ್ಬನೇ ಎಂಬ ಮಾಹಿತಿಯನ್ನು ಡಾ.ಕೆ.ಕೆ. ಇಲ್ಲಿ ಕೊಟ್ಟಿದ್ದಾರೆ. "ಧ್ವನಿ ಪ್ರತಿಪಾದಕವಾದ ಏಕೈಕ ಗ್ರಂಥವಾದುದ ರಿಂದ ಕನ್ನಡ ಕಾವ್ಯಮೀ ಮಾಂಸೆಯಲ್ಲಿ ಇದರ ಮಹತ್ವ ಹೆಚ್ಚಿನದೆನ್ನಬೇಕು" (ಪು. 55)

ಹದಿನೇಳನೆಯ ಶತಮಾನದಲ್ಲಿ ಚಿಕ್ಕದೇವ ರಾಜ ಒಡೆಯರ ಆಸ್ಥಾನ ವಿದ್ವಾಂಸ ತಿರುಮಲಾರ್ಯನ 'ಅಪ್ರತಿಮ ವೀರಚರಿತ' ಎಂಬ ಗ್ರಂಥವನ್ನೂ ಡಾ. ಕೆ.ಕೆ. ವಿಮರ್ಶಿ ಸಿದ್ದಾರೆ. ಅಪ್ಪಯ್ಯ ದೀಕ್ಷಿತ ವಿರಚಿತವಾದ ಕುವಲಯಾನಂದವನ್ನು ಜಾಯೇಂದ್ರ ಮುಂತಾದವರು ಕನ್ನಡದಲ್ಲಿ ಅನುವಾದಿಸಿದ್ದಾರೆ. 19ನೆಯ ಶತಮಾನದಲ್ಲಿ ಅಳಿಯ ಲಿಂಗರಾಜ ನರಪತಿ ಚರಿತ ಎಂಬ ಗ್ರಂಥವನ್ನು ಕನ್ನಡದಲ್ಲಿ ರಚಿಸಿದ್ದಾನೆ ಎಂಬುದನ್ನು ತಿಳಿಸಿದ್ದಾರೆ.

ವಸ್ತುಕ–ವರ್ಣಕ ಎಂಬ ಪದಗಳು ಕನ್ನಡದಲ್ಲಿ ಬಳಕೆಯಲ್ಲಿವೆ. ಈ ಪದಗಳ ನಿಷ್ಕೃಷ್ಟಾರ್ಥವು ತಿಳಿದಿಲ್ಲ. ಈ ಬಗೆಗೆ ಒಂದು ದೀರ್ಘ ಲೇಖನ 'ಕನ್ನಡದಲ್ಲಿ ಕಾವ್ಯತತ್ತ್ವ'ದ ಕೊನೆಯ ಭಾಗವಾಗಿದೆ. ಇದನ್ನು ಓದಿದರೆ ಡಾ. ಕೆ.ಕೆ. ಸಂಸ್ಕೃತ ಪ್ರಾಧ್ಯಾಪಕರಾದರೂ ಕನ್ನಡ ಸಾಹಿತ್ಯದಲ್ಲಿ ಎಷ್ಟೊಂದು ಮುಳುಗಿ ಮುತ್ತುರತ್ನಗಳನ್ನು ಹೆಕ್ಕಿ ತೆಗೆದಿದ್ದರೆಂಬುದು ವಿದಿತವಾಗುತ್ತದೆ. ಅವರ ಅಧ್ಯಯನ ವಿಶಾಲವೂ ಗಂಭೀರವೂ ಆಗಿತ್ತೆಂಬುದು ಸ್ಪಷ್ಟ. ಅಂತಹ ಪಾಂಡಿತ್ಯವು ಇಂದು ವಿರಳತಮವಾಗಿದೆಯೆಂಬುದು ವಿಷಾದದ ಕಾರಣ. ಇಂದು ವಿಶ್ವವಿದ್ಯಾನಿಲಯಗಳ ಸಂಖ್ಯೆ ದೊಡ್ಡದು. ಆದರೆ ಪ್ರಮಾಣಭೂತರಾದ ಆಚಾರ್ಯ ರೆಂದು ಕರೆಸಿಕೊಳ್ಳಬಲ್ಲವರು ಎಲ್ಲಿದ್ದಾರೆ?

# ದೇಶಕ್ಕಾಗಿ ನಿನ್ನ ಸಾವು ನನಗೆ ಹೆಮ್ಮೆ ತಂದಿದೆ...!

ಇಂದು ಭಗತ್‌ಸಿಂಗ್ ಜನ್ಮದಿನ



"ಕ್ರಾಂತಿ ಎಂದರೆ ರಕ್ತಪಾತವಲ್ಲ, ಬಾಂಬ್ ಪಿಸ್ತೂಲು ನಮ್ಮ ಸಂಸ್ಕೃತಿಯಲ್ಲ ನನ್ನ ಪ್ರಕಾರ ಕ್ರಾಂತಿಯೆಂದರೆ ಅನ್ಯಾಯದ ವ್ಯವಸ್ಥೆ ತೊಲಗುವುದು – ಭಗತ್ ಸಿಂಗ್

ಬ್ಯಾ.ರಾ.ಪ್ರಸನ್ನಕುಮಾರ್
ಮೊ.9206376889

**ಗೋ**ಧಿ ಗದ್ದೆಯಲ್ಲಿ ಗನ್ ಬೆಳೆ ಬೆಳೆದು ಬ್ರಿಟಿಷರ ಕೊಂದು ಭಾರತಾಂಬೆಯ ಹಣೆಗೆ ರಕ್ತ ತಿಲಕವಿಡುತ್ತೇನೆಂದ ಬಾಲಕನ ಹೆಸರೇ ವೀರ ಭಗತ್‌ಸಿಂಗ್.

**ಬಾಲ್ಯ ಮತ್ತು ಶಿಕ್ಷಣ:** ಭಗತ್‌ಸಿಂಗ್ ಮೂಲತಃ ಪಂಜಾಬಿನ ಜಲಂಧರ್ ಜಿಲ್ಲೆಯ ಖಾತ್ಕರ್ ಕಲಾನ್ ಹಳ್ಳಿಗೆ ಸೇರಿದವರು. ಆದರೆ ಇವರ ಪೂರ್ವಜರು ಈಗಿನ ಪಾಕಿಸ್ತಾನದ ಲಾಯಲ್‌ಪುರ ಜಿಲ್ಲೆಯ ಜರಾನ್ ವಾಲಾ ತಾಲೂಕಿನ ಬಂಗಾದವರು. ತಾಯಿ ವಿದ್ಯಾವತಿ ತಂದೆ ಕಿಶನ್ ಸಿಂಗ್, ಚಿಕ್ಕಪ್ಪಂದಿರಾದ ಸ್ವರ್ಣಸಿಂಗ್ ಮತ್ತು ಅರ್ಜುನ್‌ಸಿಂಗ್ ಎಲ್ಲರೂ ಬ್ರಿಟಿಷ್ ಸರ್ಕಾರದ ವಿರುದ್ಧ ನಿರಂತರವಾಗಿ ಕಟು ಹೋರಾಟ ನಡೆಸಿಕೊಂಡು ಬಂದಿದ್ದಂತಹವರು. ಇಂತಹ ದೇಶಭಕ್ತ ಕುಟುಂಬದ ಮಗ ಭಗತ್‌ಸಿಂಗ್.

ಪ್ರಾಥಮಿಕ ಶಿಕ್ಷಣವನ್ನು ತನ್ನೂರಿನಲ್ಲಿ ಮುಗಿಸಿ, 1916ರಲ್ಲಿ ಲಾಹೋರಿನ ಡಿ.ಎ.ವಿ ಶಾಲೆಯಲ್ಲಿ 9ನೆಯ ತರಗತಿಯವರೆಗೆ ಶಿಕ್ಷಣ ಪಡೆದರು. ಲಾಹೋರಿನ ನ್ಯಾಷನಲ್ ಕಾಲೇಜು ಸೇರಿದ ಮೇಲೆ ವಿದ್ಯಾರ್ಥಿಯಾಗಿದ್ದ ಭಗತ್ ಕ್ರಾಂತಿಕಾರಿಯಾಗಿ ರೂಪಾಂತರಗೊಂಡರು. ಕಾಲೇಜಿನ ಶೈಕ್ಷಣಿಕ ವಾತಾವರಣ ಮತ್ತು ಅಲ್ಲಿನ ಅಧ್ಯಾಪಕರು ಕಾರಣರಾಗಿದ್ದರು. ಇತಿಹಾಸ ಅಧ್ಯಾಪಕರಾದ ಜಯಚಂದ್ರ ವಿದ್ಯಾಲಂಕಾರ್‌ರವರ ಮೆಚ್ಚಿನ ಶಿಷ್ಯನಾಗಿ ತರಗತಿಯಿಂದಾಚೆಗೆ ಬಂದ ಮೇಲೆ ಸಮಾಜವಾದ, ಜಗತ್ತಿನ ಕ್ರಾಂತಿಗಳು, ರಾಷ್ಟ್ರೀಯತೆ, ಶೋಷಣೆಗಳ ಬಗ್ಗೆ ಸಾಕಷ್ಟು ಚರ್ಚಿಸುತ್ತಿದ್ದರು. ಇದು ಭಗತ್‌ನ ಕ್ರಾಂತಿ ಹಸಿವಿಗೆ ಕಾರಣವಾಯಿತು.

**ಕ್ರಾಂತಿ ದೀವಿಗೆಯ ಕೈಹಿಡಿದ ಭಗತ್‌ಸಿಂಗ್:** ವಿದ್ಯಾರ್ಥಿ ಜೀವನದಲ್ಲಿ ಐತಿಹಾಸಿಕ ನಾಟಕಗಳ ಅಭಿನಯ ಚಕ್ರವರ್ತಿಯಾಗಿದ್ದ. 1921 ರಲ್ಲಿಯೇ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದ. 1924ರಲ್ಲಿ ಬಿ.ಎ.ಗೆ ಸೇರಿದ್ದ ಭಗತ್‌ಗೆ ಮನೆಯವರೆಲ್ಲಾ ಸೇರಿ ಮದುವೆ ಮಾಡಬೇಕೆಂದು ನಿರ್ಣಯಿಸಿದಾಗ ನನ್ನನ್ನು ಸಂಪೂರ್ಣವಾಗಿ ದೇಶಕ್ಕೆ ಅರ್ಪಿಸಿಕೊಂಡಿದ್ದೇನೆ ನಾನು ಮದುವೆ ಆಗುವುದಿಲ್ಲವೆಂದು ತಂದೆಗೆ ಪತ್ರ ಬರೆದು ಸಂಪೂರ್ಣವಾಗಿ ಶಿಕ್ಷಣ ತೊರೆದು ಕಾನ್ಪುರಕ್ಕೆ ತೆರಳಿ ಅಲ್ಲಿ ಕ್ರಾಂತಿಕಾರಿ ಗಣೇಶ್ ವಿದ್ಯಾರ್ಥಿ ಜೊತೆಗೂಡಿದ. ಇವರ ಮೂಲಕ ಚಂದ್ರಶೇಖರ ಆಜಾದ್, ಬಟುಕೇಶ್ವರ ದತ್, ಜೆ.ಸಿ.ಚಟರ್ಜಿ ಮುಂತಾದವರ ಪರಿಚಯವಾಯಿತು. ಕರ್ತಾರ್‌ಸಿಂಗ್ ಮತ್ತು ಲಾಲಾ ಲಜಪತರಾಯರಿಂದ ಹೆಚ್ಚು ಪ್ರಭಾವಿತನಾಗಿದ್ದ. 1919 ಏಪ್ರಿಲ್ 13 ರಂದು ನಡೆದಿದ್ದ ಜಲಿಯನ್‌ವಾಲಾಬಾಗ್ ಹತ್ಯಾಕಾಂಡದ ಘಟನೆ ಅವರನ್ನು ಹೆಚ್ಚು ವಿಚಲಿತವಾಗಿಸಿತ್ತು.

**ನವ ಜವಾನ್ ಸಭಾ ಸ್ಥಾಪನೆ:** 1917ರ ರಷ್ಯಾ ಕ್ರಾಂತಿ ಪ್ರೇರೇಪಣೆಯಿಂದ ಮಾರ್ಚ್, 1926ರಲ್ಲಿ ನವ ಜವಾನ್ ಭಾರತ್ ಸಭಾಯೆಂಬ ಕ್ರಾಂತಿಕಾರಿ ಸಂಘಟನೆ ರಾಮ್‌ಕಿಶನ್ ಅಧ್ಯಕ್ಷತೆ ಯಲ್ಲಿ ಸ್ಥಾಪನೆಯಾಯಿತು. ಈ ಸಂಘಟನೆಯಲ್ಲಿ ಭಗತ್ ಕಾರ್ಯದರ್ಶಿಯಾಗಿದ್ದರು. ಈ ಸಂಘಟನೆಯ ಮುಖ್ಯ ಸಂವಿಧಾನ ಯುವಕರಿಗೆ, ಶ್ರಮಿಕರಿಗೆ, ಜನತೆಗೆ ರಾಜಕೀಯ ಶಿಕ್ಷಣ ನೀಡಿ ಸ್ವತಂತ್ರ ಗಣತಂತ್ರ ಸ್ಥಾಪಿಸುವುದಾಗಿತ್ತು. ಈ ಸಂಘಟನೆ ಮುಂದೆ ಹಿಂದೂಸ್ತಾನ್ ಸಮಾಜವಾದಿ ಸಂಘಟನೆ ಎಂದಾಯಿತು.

**ಲಾಲ ಲಜಪತರಾಯ್ ಸಾವಿಗೆ ಪ್ರತೀಕಾರ:** 1928 ಲಾಹೋರ್‌ನಲ್ಲಿ ನಡೆದ ಸೈಮನ್ ಗೋಬ್ಯಾಕ್ ಚಳುವಳಿಯಲ್ಲಿ ಬ್ರಿಟಿಷ್ ಪೋಲೀಸರು ಲಾಠಿಚಾರ್ಜ್ ಮಾಡಿ ಲಜಪತರಾಯರ ಸಾವಿಗೆ ಕಾರಣರಾದರು. ಈ ಸಾವಿಗೆ ಕಾರಣನಾದ ಪೊಲೀಸ್ ಸೂಪರಿಂಟೆಂಟ್ ಸ್ಕಟ್‌ನನ್ನು ಕೊಲ್ಲಲು ನಿರ್ಧರಿಸಿ 17 ಡಿಸೆಂಬರ್ 1928ರಂದು ರಾಜ್‌ಗುರು ಮತ್ತು ಭಗತ್‌ಸಿಂಗ್ ಸ್ಕಾಟ್ ಕಡೆ ಗುಂಡು ಹಾರಿಸುವುದರ ಬದಲು ಸ್ಯಾಂಡರ್ಸ್‌ಗೆ ಗುಂಡು ತಗುಲಿ ಗಾಯಗೊಂಡನು.

8 ಏಪ್ರಿಲ್ 1929ರಂದು ಇನ್‌ಕ್ವಿಲಾಬ್ ಜಿಂದಾಬಾದ್ ಸಾಮ್ರಾಜ್ಯಶಾಹಿ ಮುರ್ದಾಬಾದ್ ಎಂದು ಘೋಷಣೆ ಕೂಗುತ್ತಾ ದೆಹಲಿಯ ಅಸೆಂಬ್ಲಿಯ ಸೆಂಟ್ರಲ್ ಹಾಲ್ ಅಧಿವೇಶನದಲ್ಲಿ ರಾಜ್‌ಗುರು, ಸುಖ್‌ದೇವ್ ಬಾಂಬ್ ದಾಳಿ ನಡೆಸಿದರು. ಈ ಸಮಯದಲ್ಲಿ ಭಗತ್‌ಸಿಂಗ್ ತಪ್ಪಿಸಿಕೊಳ್ಳದೆ ಬಂಧನಕ್ಕೊಳಗಾದಾಗ ಭಗತ್‌ಸಿಂಗ್ ಹೇಳಿದ್ದು ಯಾರನ್ನಾದರು ಕೊಲ್ಲುವುದು ನಮ್ಮ ಆಶಯವಲ್ಲ ನಾವು ಬಾಂಬ್ ಸ್ಫೋಟಿಸಿದ್ದು ಬ್ರಿಟಿಷ್ ಸರ್ಕಾರಕ್ಕೆ.

> ವಿದ್ಯಾರ್ಥಿ ಜೀವನದಲ್ಲಿ ಐತಿಹಾಸಿಕ ನಾಟಕಗಳ ಅಭಿನಯ ಚಕ್ರವರ್ತಿಯಾಗಿದ್ದ. 1921ರಲ್ಲಿಯೇ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದ. 1924ರಲ್ಲಿ ಬಿ.ಎ.ಗೆ ಸೇರಿದ್ದ ಭಗತ್‌ಗೆ ಮನೆಯವರೆಲ್ಲಾ ಸೇರಿ ಮದುವೆ ಮಾಡಬೇಕೆಂದು ನಿರ್ಣಯಿಸಿದಾಗ ನನ್ನನ್ನು ಸಂಪೂರ್ಣವಾಗಿ ದೇಶಕ್ಕೆ ಅರ್ಪಿಸಿಕೊಂಡಿದ್ದೇನೆ ನಾನು ಮದುವೆ ಆಗುವುದಲ್ಲವೆಂದು ತಂದೆಗೆ ಪತ್ರ ಬರೆದು ಸಂಪೂರ್ಣವಾಗಿ ಶಿಕ್ಷಣ ತೊರೆದು ಕಾನ್ಪುರಕ್ಕೆ ತೆರಳಿ ಅಲ್ಲಿ ಕ್ರಾಂತಿಕಾರಿ ಗಣೇಶ್ ವಿದ್ಯಾರ್ಥಿ ಜೊತೆಗೂಡಿದ.

**ಭಗತ್ ಸಾವಿನ ಅನುಮಾನದ ಹುತ್ತ** 7 ಅಕ್ಟೋಬರ್ 1930ರಂದು ಶಾಸನ ಸಭೆಯಲ್ಲಿ ಬಾಂಬ್ ಸಿಡಿಸಿದ್ದಕ್ಕೆ ಭಗತ್‌ಸಿಂಗ್, ರಾಜ್‌ಗುರು ಮತ್ತು ಸುಖದೇವ್‌ಗೆ ನೇಣುಶಿಕ್ಷೆ ನೀಡಲಾಯಿತು. ಅದರಂತೆ 24 ಮಾರ್ಚ್ 1931 ರಂದು ನೇಣಿಗೇರಿಸಲು ನಿರ್ಧರಿಸಿದ್ದರು ಸಹ 'Operation Trojan Horse' ಹೆಸರಿನಲ್ಲಿ ಯೋಜನೆ ರೂಪಿಸಿ 23 ಮಾರ್ಚ್ 1931 ಸಂಜೆ 7.30ಕ್ಕೆ ಗಲ್ಲಿಗೇರಿಸಿ ಅರೆಜೀವಗೊಳಿಸಿ ಜೈಲು ಅಧಿಕಾರಿಗಳೇ ರಾವಿ ಸಟ್ಲೇಜ್ ನದಿ ದಂಡೆ ಮೇಲೆ ರಹಸ್ಯವಾಗಿ ಸುಟ್ಟುಹಾಕಿದರು. ದಿಲೀಪ್‌ಸಿಂಗ್ ಮತ್ತು ಕುಲದೀಪ್‌ಸಿಂಗ್ ಬರೆದಿರುವ Some Hidden Facts: Martyrdom of Shaheed Bhagat Singh ಪುಸ್ತಕದಲ್ಲಿ ಕ್ರಾಂತಿ ಕಿಡಿ ಭಗತ್ ಮತ್ತು ಸ್ನೇಹಿತರ ಸಾವಿನ ಸುತ್ತ ಅನುಮಾನದ ಹುತ್ತ ಬೆಳೆದಿದೆ. ಗಲ್ಲಿಗೇರಿಸಿಲ್ಲ ಗುಂಡಿಕ್ಕಿ ಕೊಂದು ಶವಗಳನ್ನು ಅರೆಬರೆ ಸುಟ್ಟು ಎಸೆದಿದ್ದನ್ನು ಆತನ ಸಹೋದರಿ ಶವ ಸಂಸ್ಕಾರ ಮಾಡಿದರೆಂದು ಸಹ ಹೇಳಲಾಗುತ್ತಿದೆ.

**ಭಗತ್‌ಸಿಂಗ್ ಮತ್ತು ಗಾಂಧೀಜಿ:** ಕ್ರಾಂತಿಕಾರಿ ಕರ್ತಾರ್‌ಸಿಂಹರನ್ನು ಕೊಂದಾಗ ಮೌನವಹಿಸಿ, ಚೌರಿ ಚೌರಿ ಘಟನೆಯ ನಂತರ ಗಾಂಧಿ ತಮ್ಮ ಅಸಹಕಾರ ಚಳುವಳಿಯನ್ನು ಅರ್ಧಕ್ಕೆ ನಿಲ್ಲಿಸಿದ್ದರಿಂದ ಭಗತ್‌ಸಿಂಗ್ ಅಸಮಾಧಾನಗೊಂಡಿದ್ದ. ಭಗತ್‌ಸಿಂಗ್ ನೇಣುಶಿಕ್ಷೆಯ ರದ್ದತಿಗಾಗಿ ದೇಶದಾದ್ಯಂತ ಸಹಿ ಸಂಗ್ರಹ ಮಾಡಿ ಗಾಂಧಿಯಲ್ಲಿ ಮನವಿ ಮಾಡಿಕೊಂಡರು. ಆದರೆ ಇರ್ವಿನ್ ಒಪ್ಪಂದಕ್ಕೆ 5 ಮಾರ್ಚ್ 1931 ರಂದು ಗಾಂಧಿ ಸಹಿ ಹಾಕುವಾಗ ಭಗತ್‌ಸಿಂಗ್ ಶಿಕ್ಷೆ ವಿಚಾರದಲ್ಲಿ ಮೌನ ವಹಿಸಿದ್ದು ದೇಶವಾಸಿಗಳು ಇಂದಿಗೂ ಮರೆತಿಲ್ಲ.

**ಭಗತ್‌ಸಿಂಗ್ ಸಿದ್ಧಾಂತ:** ಭಗತ್‌ಸಿಂಗ್ ಕೇವಲ ಆಕ್ರೋಶಭರಿತ ಯುವ ಹೋರಾಟಗಾರನಲ್ಲ, ಅವನೊಬ್ಬ ಸೈದ್ಧಾಂತಿಕ ನಿಲುವು ಮತ್ತು ಬದ್ಧತೆಯ ಕ್ರಾಂತಿಕಾರಿಯಾಗಿದ್ದ ಕಾರ್ಲ್‌ಮಾರ್ಕ್ಸ್ ಸಮತಾವಾದಿ ತತ್ವಗಳಲ್ಲಿ ನಂಬಿಕೆ ಇತ್ತಾದರು ರಕ್ತಪಾತ ಭಗತ್‌ಸಿಂಗ್ ಗುರಿಯಾಗಿರಲಿಲ್ಲ. ರೈತ, ಕಾರ್ಮಿಕ, ಶೋಷಿತರ ದನಿಯಾಗ ಬಯಸಿದ್ದ ಸಮಾನತೆ ಸಮಾಜವಾದಿ ಗಣರಾಜ್ಯದ ಆಶಯ ಅವನದಾಗಿತ್ತು. ಗಾಂಧಿ ವಿಚಾರಗಳಲ್ಲಿ ಅಸಹನೆಯಿತ್ತು ಸಾವಿನ ಕೊನೆ ಘಳಿಗೆಯಲ್ಲೂ ಲೆನಿನ್ ಬಗೆಗಿನ ಪುಸ್ತಕ ಓದುತ್ತಿದ್ದ.

**ಭಗತ್‌ಸಿಂಗ್ ತಾಯಿ ಭಾರತಮಾತಾ:** ಭಗತ್‌ಸಿಂಗ್ ತಾಯಿ ವಿದ್ಯಾವತಿ ಭಗತ್‌ಸಿಂಗ್ ನೇಣುಗೇರುವ ಸಂದರ್ಭದಲ್ಲಿ ಮಗನೆ ಭಗತ್ 'ನೀನು ಸಾವಿಗೆ ಹೆದರುವವನಲ್ಲ, ಯಾರ ಸಾವನ್ನು ಜಗತ್ತು ಸದಾ ಕಾಲ ನೆನಪಿಡುತ್ತದೆಯೋ ಅದು ಶ್ರೇಷ್ಠ ಸಾವು. ದೇಶಕ್ಕಾಗಿ ನಿನ್ನ ಸಾವು ನನಗೆ ಹೆಮ್ಮೆ ತಂದಿದೆ' ಎಂದು ವೀರ ಮಗನಿಗೆ ತಿಳಿಸುತ್ತಾರೆ.

ತಾಯಿ ವಿದ್ಯಾವತಿಗೆ ಸ್ವತಂತ್ರ ನಂತರ ಭಾರತದ ಪಂಜಾಬ್ ಸರ್ಕಾರ ಭಾರತಮಾತಾ ಎಂಬ ಬಿರುದನ್ನು 1973ರಲ್ಲಿ ನೀಡಿತ್ತು. 1975 ಜೂನ್ 2ರಲ್ಲಿ ಇವರು ನಿಧನರಾದರು. ಭಾರತಾಂಭೆಯ ಅಮೃತ ಪುತ್ರ ಭಗತ್‌ಸಿಂಗ್‌ನ್ನು ರಾಜಕಾರಣಿಗಳು ಅಪಹರಿಸಿದ್ದಾರೆ. ಕೆಲವರು ಕೇಸರಿ ಶಾಲು ಹೊದಿಸಿ ಕೆಲವರು ಕೆಂಪು ಶಾಲು ಹೊದಿಸಿ ಅವನ ವ್ಯಕ್ತಿತ್ವವನ್ನು ವಿರೂಪಗೊಳಿಸಿ ವಿಕೃತಾನಂದದ ಕೇಕೆ ಹಾಕುತ್ತಿದ್ದಾರೆ. ನಮ್ಮ ಯುವಕರಿಗೆ ನಿಜ ಭಗತ್‌ಸಿಂಗ್‌ನನ್ನು ಪರಿಚಯಿಸುವಲ್ಲಿ ಶಿಕ್ಷಣವು ಸಹ ಸೋತಿರುವುದು ವಿಪರ್ಯಾಸ. ಏಕೆಂದರೆ ಇತಿಹಾಸ ಪಠ್ಯ ರಚನೆಯಲ್ಲಿ ರಾಜಕೀಯ ಪಕ್ಷಗಳ ಇಸಂಗಳ ಕಾಟದಿಂದ ಹೊರ ಬರಲಾಗುತ್ತಿಲ್ಲ. ಭಗ್ನಗೊಂಡಿರುವ ಭಗತ್‌ಸಿಂಗ್ ಮೂರ್ತಿಯನ್ನು ವಿಸರ್ಜಿಸಿ ನಿಜ ಕ್ರಾಂತಿವೀರನನ್ನು ಪರಿಚಯಿಸುವ ಕೆಲಸ ಶಿಕ್ಷಕ ಮತ್ತು ಶಿಕ್ಷಣದ್ದಾಗಬೇಕಿದೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ಮೈಸೂರಲ್ಲಿ ಇಂದು ವಿಶ್ವ ಪ್ರವಾಸೋದ್ಯಮ ದಿನಾಚರಣೆ

## ರಾತ್ರಿ 7.45ರಿಂದ 8.45 ಗಂಟೆವರೆಗೆ ಅರಮನೆ ದೀಪಾಲಂಕಾರ



ಮೈಸೂರು,ಸೆ.26(ಆರ್‌ಕೆ)– ಮೈಸೂರಿನ ಅರಮನೆ ಆವರಣದಲ್ಲಿ ನಾಳೆ (ಸೆ.27) ವಿಶ್ವ ಪ್ರವಾಸೋದ್ಯಮ ದಿನ ಆಚರಿಸಲಾಗುವುದು. ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆಯು ಹೋಟೆಲು ಮಾಲೀಕರ ಸಂಘ ಹಾಗೂ ಮೈಸೂರು ಟ್ರಾವೆಲ್ ಅಸೋಸಿಯೇಷನ್ ಸಹಯೋಗದೊಂದಿಗೆ ಆಯೋಜಿಸಿರುವ ವಿಶ್ವ ಪ್ರವಾಸೋದ್ಯಮ ದಿನ ಆಚರಣಾ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸುವಂತೆ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ತಿಳಿಸಿದರು.



ಜೆಎಲ್‌ಬಿ ರಸ್ತೆಯ ಮಯೂರ ಹೊಯ್ಸಳ ಹೋಟೆಲ್ ಸಭಾಂಗಣದಲ್ಲಿ ಇಂದು ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಹೋಟೆಲ್‌ಗಳಲ್ಲಿ ಹಸಿರು ದೀಪಗಳನ್ನು ಬೆಳಗಿಸಿ ಪ್ರವಾಸಿ ತಾಣಗಳ ಮಾಹಿತಿ ಬ್ಯಾನರ್‌ಗಳನ್ನು ಪ್ರದರ್ಶಿಸುವ ಮೂಲಕ ಪ್ರವಾಸಿಗರನ್ನು ಆಕರ್ಷಿಸಬೇಕು ಎಂದರು.

ವರಹಾ ದ್ವಾರದಿಂದ ಸಾಂಪ್ರದಾಯಿಕ ಉಡುಗೆ ಧರಿಸಿ ಆಯೋಜಕರು ಜಾಥಾ ನಡೆಸುವುದು, ಪ್ರವಾಸೀ ತಾಣಗಳ ಪೋಸ್ಟರ್ ಪ್ರದರ್ಶಿಸುವ ಮೂಲಕ ಪ್ರವಾಸೋದ್ಯಮ ದಿನವನ್ನು ಆಕರ್ಷಕ ಮತ್ತು ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ತಿಳಿಸಿದರು. ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ರಾಘವೇಂದ್ರ, ಮೈಸೂರು ಟ್ರಾವೆಲ್ ಅಸೋಸಿಯೇಷನ್‌ನ ಬಿ.ಎಸ್.ಪ್ರಶಾಂತ್, ಎಸಿ ರವಿ, ಕೆಎಸ್‌ಟಿಡಿಸಿಯ ದಾಸ ಹಾಗೂ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಅ.2ರಿಂದ ಆರ್ಟ್ ಆಫ್ ಲಿವಿಂಗ್‌ನಲ್ಲಿ ಯುವ ನಾಯಕತ್ವ ತರಬೇತಿ ಶಿಬಿರ



ಮೈಸೂರು, ಸೆ.26(ಎಂಟಿವೈ) – ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಲ್ಲಿ ಅ.2ರಿಂದ 8ರವರೆಗೆ ಯುವ ನಾಯಕತ್ವ ತರಬೇತಿ ಶಿಬಿರ ಆಯೋಜಿಸಿದ್ದು, ಆಸಕ್ತರು ಪ್ರಯೋಜನ ಪಡೆಯಬಹುದಾಗಿದೆ ಎಂದು ಸಂಚಾಲಕ ಜಿ.ಎ.ಸುಬ್ಬುಕೃಷ್ಣ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಬಿರದಲ್ಲಿ ಧ್ಯಾನ, ಪ್ರಾಣಾಯಾಮ, ಸುದರ್ಶನ ಕ್ರಿಯೆ, ಶಾರೀರಿಕ ಮತ್ತು ಮಾನಸಿಕ ಸದೃಢತೆ, ಸಂವಹನ ಕಲೆ, ಸಂಘಟನಾ ಶಕ್ತಿಯಲ್ಲಿ ವೃದ್ಧಿ, ಭಾಷಣ ಕಲೆ, ಗುಂಪು ಚರ್ಚೆ ಸೇರಿದಂತೆ ಇನ್ನಿತರ ಚಟುವಟಿಕೆ ನಡೆಸಲಾಗುತ್ತದೆ. ಈ ಶಿಬಿರದಲ್ಲಿ ತರಬೇತುದಾರರಾಗಿ ಮಹಾದೇವ ಪ್ರಸಾದ್, ರಾಜಶೇಖರ್ ಹಾಗೂ ಹೆಚ್.ಎಲ್.ವಿದ್ಯಾ ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ನೀಡಲಿದ್ದಾರೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ದೂ.91102 56623 ಅನ್ನು ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಆರ್ಟ್ ಆಫ್ ಲೀವಿಂಗ್ ಸಂಸ್ಥೆಯ ಹೆಚ್.ಎಲ್. ವಿದ್ಯಾ, ಮಹೇಶ್ ಉಪಸ್ಥಿತರಿದ್ದರು.

# ಡಾ. ವಿಷ್ಣುವರ್ಧನ್ ಜನ್ಮದಿನ; ನಾಳೆ ಮೈಸೂರಲ್ಲಿ ಸಂಗೀತ ಸಂಜೆ



ಮೈಸೂರು,ಸೆ.26(ಎಂಟಿವೈ)– ಸಾಹಸ ಸಿಂಹ ಡಾ.ವಿಷ್ಣುವರ್ಧನ್ ಅವರ ಜನ್ಮದಿನದ ಅಂಗವಾಗಿ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಸೆ.28ರಂದು ಸಂಜೆ 4.30ಕ್ಕೆ ಸಂಗೀತ ರಸಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರಾಗ ಕ್ರಿಯೇಟರ್ಸ್ ತಂಡದ ಸದಸ್ಯೆ ಡಾ. ರೇಖಾ ಅರುಣ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಧ ವೃತ್ತಿಯಲ್ಲಿರುವವರು ಸೇರಿ ರಾಗ ಕ್ರಿಯೇಟರ್ಸ್ ಸಂಸ್ಥೆಯನ್ನು ಹುಟ್ಟು ಹಾಕಲಾಗಿದೆ. ನೈಜ ಸಂಗೀತದೊಂದಿಗೆ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಡಾ.ವಿಷ್ಣುವರ್ಧನ್ ನಟಿಸಿರುವ ವಿವಿ ಚಿತ್ರಗಳು ಪ್ರಸಿದ್ಧ ಗೀತೆಗಳನ್ನು ಈ ಕಾರ್ಯಕ್ರಮದಲ್ಲಿ ಹಾಡಲಾಗುತ್ತದೆ. ಸುಮಾರು 10ರಿಂದ 12 ಗಾಯಕರು ಹಾಡಲಿದ್ದಾರೆ. ಸಾರ್ವಜನಿಕರಿಗೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದರು. ಗೋಷ್ಠಿಯಲ್ಲಿ ತಂಡದ ಅಧ್ಯಕ್ಷ ಆನಂದ ಶೆಟ್ಟಿ, ಪ್ರೇಮಲತಾ, ಗುರುರಾಜ್ ಇದ್ದರು.

## ಕಲಬುರಗಿಯಲ್ಲಿ ಜೆಡಿಎಸ್ ಪುನಶ್ಚೇತನ ಪರ್ವ ಕಾರ್ಯಕ್ರಮ

# ಕಾಂಗ್ರೆಸ್ ಎಂದೂ ನಂಬಿಕೆ ರಾಜಕಾರಣ ಮಾಡಿಲ್ಲ

### ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ವಾಗ್ದಾಳಿ





ಕಲಬುರಗಿಯಲ್ಲಿ ಹಮ್ಮಿಕೊಂಡಿದ್ದ ಜೆಡಿಎಸ್ ಪುನಶ್ಚೇತನ ಪರ್ವ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಮೈಸೂರು,ಸೆ.26(ಪಿಎಂ)– ಕಾಂಗ್ರೆಸ್ ಎಂದೂ ಮೈತ್ರಿ ತತ್ವದಡಿ ನಂಬಿಕೆಯ ರಾಜಕಾರಣ ಮಾಡಿಲ್ಲ. ನಂಬಿಕೆ ದ್ರೋಹ ಕಾಂಗ್ರೆಸ್ ರಕ್ತದಲ್ಲೇ ಇದ್ದು, ಹಿಂದಿನಿಂದಲೂ ಮೋಸದ ರಾಜಕಾರಣ ಮಾಡಿಕೊಂಡೇ ಬಂದಿದೆ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ವಾಗ್ದಾಳಿ ನಡೆಸಿದರು.

ಕಲಬುರಗಿಯಲ್ಲಿ ಮಂಗಳವಾರ ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಹಮ್ಮಿಕೊಂಡಿದ್ದ ಜೆಡಿಎಸ್ ಪುನಶ್ಚೇತನ ಪರ್ವ ಕಾರ್ಯಕ್ರಮ ಉದ್ಘಾಟಿಸಿ ಮಾತಾಡಿದ ಅವರು, ಕಾಂಗ್ರೆಸ್ ವರಿಷ್ಠರು ತಮ್ಮದೇ ನಾಯಕರ ಮೇಲೆ ನಂಬಿಕೆ ಹೊಂದಿಲ್ಲ. ಕಾಂಗ್ರೆಸ್‌ನಿಂದ ಮೋಸಕ್ಕೆ ಒಳಗಾದವರ ಪಟ್ಟಿ ದೊಡ್ಡದಿದ್ದು, ಚರಣ್ ಸಿಂಗ್, ಚಂದ್ರಶೇಖರ್, ಹೆಚ್.ಡಿ.ದೇವೇಗೌಡ ಎಲ್ಲರೂ ಕಾಂಗ್ರೆಸ್ ಕುತಂತ್ರಕ್ಕೆ ಬಲಿಯಾದವರೇ ಆಗಿದ್ದಾರೆ ಎಂದು ಉದಾಹರಣೆ ಸಹಿತ ವಿವರಿಸಿದರು.

ಕಲ್ಯಾಣ ಕರ್ನಾಟಕ ಭಾಗದ ವೈಜನಾಥ್ ಪಾಟೀಲ್, ಬಾಪೂಗೌಡ ದರ್ಶನಾಪುರ, ವಿಶ್ವನಾಥ್ ರೆಡ್ಡಿ ಮುದ್ನಾಳ್, ಚಂದ್ರಶೇಖರ್ ರೆಡ್ಡಿ ದೇಶಮುಖ್, ಎಸ್.ಕೆ.ಕಾಂತಾ ಅವರು ಜನತಾ ಪಕ್ಷ ಮತ್ತು ಜನತಾದಳದಲ್ಲೇ ಬೆಳೆದು ಬಂದ ಮುಂಚೂಣಿ ನಾಯಕರಾಗಿದ್ದಾರೆ. ಜೆಡಿಎಸ್ ಪಕ್ಷ ಕೇವಲ ದಕ್ಷಿಣ ಕರ್ನಾಟಕಕ್ಕೆ ಮಾತ್ರ ಸೀಮಿತ ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ. ಆದರೆ ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲೂ ಜೆಡಿಎಸ್ ಗಟ್ಟಿಯಾಗಿದೆ ಎಂದು ಹೇಳಿದರು.

ಜೆಡಿಎಸ್ ಅನ್ನು ದಕ್ಷಿಣ ಕರ್ನಾಟಕಕ್ಕೆ ಸೀಮಿತ ಎಂದು ಬಿಂಬಿಸಿ ಟೀಕಿಸಿದವರಿಗೆ ತಕ್ಕ ಉತ್ತರ ಕೊಡಬೇಕೆಂದೇ ಬಸವಣ್ಣನ ಕರ್ಮ ಭೂಮಿಯಾದ ಕಲ್ಯಾಣ ಕರ್ನಾಟಕದಲ್ಲಿ ಪಕ್ಷದ ಪುನಶ್ಚೇತನ ಕಾರ್ಯಕ್ರಮ ನಡೆಸಲಾಗುತ್ತಿದೆ. ಅಂತೆಯೇ ರಾಜ್ಯದಲ್ಲಿ ನಿರಂತರ ಪ್ರವಾಸ ಕೈಗೊಂಡು ಪಕ್ಷದ ಬಲವರ್ಧನೆ ಮಾಡಲು ಕೋರ್ ಕಮಿಟಿಯಲ್ಲಿ ನಿರ್ಧರಿಸಲಾಗಿದೆ ಎಂದರು.

ಇಂದು ಬೆಳಗ್ಗೆ ಶರಣ ಬಸವೇಶ್ವರರ ಕ್ಷೇತ್ರ ಹಾಗೂ ಖಾಜಾ ಬಂದೆ ನವಾಜ್ ದರ್ಗಾಕ್ಕೆ ಭೇಟಿ ನೀಡಿ, ದರ್ಶನ ಪಡೆದು ಬಂದಿದ್ದೇವೆ. ನಮ್ಮ ಪಕ್ಷ ಬಲವರ್ಧನೆಗೊಳಿಸಿ, ಜನರ ಸೇವೆಗಾಗಿ ಅಧಿಕಾರ ಕರುಣಿಸುವಂತೆ ಆಶೀರ್ವಾದ ಕೇಳಿದ್ದೇನೆ. ಕಲ್ಯಾಣ ಕರ್ನಾಟಕ ಬಸವಣ್ಣನವರ ಕರ್ಮಭೂಮಿಯಾಗಿದ್ದು, ಬಸವಣ್ಣನ ಜೊತೆಗೆ ಅಸಂಖ್ಯಾತ ಶರಣರು ಕಲ್ಯಾಣದ ಕ್ರಾಂತಿಗೆ ಕಾರಣರಾಗಿದ್ದಾರೆ. ಆ ಎಲ್ಲಾ ಶರಣರ ಪಾದಗಳಲ್ಲಿ ನಮಸ್ಕರಿಸಿ, ಪಕ್ಷದ ಬಲವರ್ಧನೆಗೆ ಮುಂದಡಿ ಇಡುತ್ತಿದ್ದೇವೆ. ಶರಣರ ಮೇಲೆ ನನಗೆ ಅಪಾರ ನಂಬಿಕೆ ಇದ್ದು, ಈ ಬಾರಿ ಶರಣರು ನಮ್ಮ ಪಕ್ಷದ ಮೇಲೆ ಕರುಣೆ ತೋರುತ್ತಾರೆಂಬ ಅಚಲ ನಂಬಿಕೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ಜನತೆ ಕ್ಷಮೆ ಯಾಚಿಸುತ್ತೇವೆ:** 2008ರಲ್ಲಿ ಮಾಡಿದ ತಪ್ಪಿನಿಂದ ನಾವು ಅಧಿಕಾರ ಕಳೆದುಕೊಂಡೆವು. ಅಂದು ಬಿಜೆಪಿ ಜೊತೆಗೆ ಮುಂದುವರೆದಿದ್ದರೆ ಹೆಚ್.ಡಿ.ಕುಮಾರಸ್ವಾಮಿಯವರು ಇನ್ನು 20 ವರ್ಷಗಳ ಕಾಲ ಮುಖ್ಯಮಂತ್ರಿ ಆಗಿ ಮುಂದುವರೆಯುತ್ತಿದ್ದರು. ನಮ್ಮ ನಾಯಕರು ಕಾಂಗ್ರೆಸ್ಸನ್ನು ನಂಬಿ ಕೆಟ್ಟರು. ನಮಗೆ ಅಂದಿನ ತಪ್ಪು ಅರಿವಾಗಿದ್ದು, ಇದಕ್ಕಾಗಿ ಜನರ ಕ್ಷಮೆಯನ್ನೂ ಕೋರುತ್ತೇವೆ ಎಂದರು.

**ಜೆಡಿಎಸ್–ಬಿಜೆಪಿ ಮೈತ್ರಿ ಬೆಂಬಲಿಸಿ:** ಇನ್ನು ಮುಂದೆ ಎಂದೂ ಅಂತಹ ತಪ್ಪು ಮಾಡುವುದಿಲ್ಲ. ಬಿಜೆಪಿ ಜೊತೆಗೆ ಹೊಂದಾಣಿಕೆ ಮಾಡಿಕೊಂಡಿದ್ದು, ಮುಂಬರುವ ಲೋಕಸಭೆ, ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯತಿ ಹಾಗೂ ಪಾಲಿಕೆ ಚುನಾವಣೆಗಳಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಬೆಂಬಲಿಸುವಂತೆ ಜನತೆಯಲ್ಲಿ ಕೋರಿದರು.

ನಾವು ಈಗ ಸ್ತ್ರೀ ಸಬಲೀಕರಣದ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ಅಂದೇ ಬಸವಣ್ಣನಾದಿಯಾಗಿ ಶರಣರು ಮಹಿಳಾ ಸಬಲೀಕರಣ ಮತ್ತು ಸಮಾನತೆಗೆ ಒತ್ತು ಕೊಟ್ಟಿದ್ದರು. ಇದರಿಂದ ಅಕ್ಕಮಹಾ ದೇವಿ, ನೀಲಾಂಬಿಕೆ, ಗಂಗಾಂಬಿಕೆ, ಸೂಳೆ ಸಂಕವ್ವ ಮೊದಲಾದ ಮಹಿಳಾ ಶರಣರು ಸಮಾಜದ ಸುಧಾರಣೆಗೆ ತಮ್ಮ ಕೊಡುಗೆ ನೀಡಲು ಸಾಧ್ಯವಾಯಿತು. ಶಿವಶರಣರ ಸಾಮಾಜಿಕ ಕ್ರಾಂತಿಯ ನೆಲದಲ್ಲಿ ಪಕ್ಷದ ಬಲವರ್ಧನೆಗೆ ಮುನ್ನುಡಿ ಬರೆದಿದ್ದು, ಜೆಡಿಎಸ್ ಮತ್ತು ಬಿಜೆಪಿ ಒಂದುಗೂಡಿ ರಾಜ್ಯದಲ್ಲಿ ಪ್ರಾಬಲ್ಯ ಮೆರೆಯುವುದು ಶತಸಿದ್ಧ ಎಂದು ಅತೀವ ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯರಾದ ಸಿ.ಎಸ್.ಪುಟ್ಟರಾಜು, ಅಲ್ಕೋಡ್ ಹನುಮಂತಪ್ಪ, ಬಂಡೆಪ್ಪ ಕಾಶಂಪೂರ್, ನಾಡಗೌಡ, ರಾಜುಗೌಡ, ಕೃಷ್ಣಾರೆಡ್ಡಿ, ಸುರೇಶ್‌ಗೌಡ, ದೊಡ್ಡಪ್ಪಗೌಡ, ತಿಮ್ಮರಾಯಪ್ಪ, ಕೆ.ಬಿ.ಪ್ರಸನ್ನಕುಮಾರ್, ವೀರಭದ್ರಪ್ಪ ಹಾಲರವಿ, ಸುನಿತಾ ಚೌಹಣ್, ಸೂರಜ್ ಸೋನಿ ನಾಯಕ್, ಮಾಜಿ ಸಚಿವರಾದ ಡಾ.ಎ.ಬಿ.ಮಾಲಕರೆಡ್ಡಿ, ಮಲ್ಲಿಕಾರ್ಜುನ ಖುಬಾ, ಗುರು ಪಾಟೀಲ್, ಸಂಜೀವನ್ ಯಾಕಾಪುರ್, ಜೆಡಿಎಸ್‌ನ ಕಲಬುರಗಿ ಜಿಲ್ಲಾಧ್ಯಕ್ಷ ಸುರೇಶ್ ಮಹಾಗವಕರ್, ಬೀದರ್ ಜಿಲ್ಲಾಧ್ಯಕ ರಮೇಶ್ ಪಾಟೀಲ್ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

### ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ನರೇಂದ್ರ ಮೋದಿ ಬೆಂಬಲಿಸಿ ಶಾಸಕ ಜಿಟಿಡಿ ಮನವಿ

ಮೈಸೂರು,ಸೆ.26(ಪಿಎಂ)– ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ದೇಶವು ಪ್ರಗತಿ ಪಥದಲ್ಲಿ ಸಾಗುತ್ತಿದ್ದು, ಜಗತ್ತಿನಲ್ಲಿ ಭಾರತವು ನಂಬರ್ 1 ರಾಷ್ಟ್ರವಾಗಿ ಹೊರಹೊಮ್ಮಲು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿಯವರನ್ನು ಬೆಂಬಲಿಸುವಂತೆ ಶಾಸಕ ಜಿ.ಟಿ.ದೇವೇಗೌಡ ಜನತೆಯಲ್ಲಿ ಮನವಿ ಮಾಡಿದರು.

ಮೋದಿ ನಾಯಕತ್ವದೆದುರು ರಾಜ್ಯವಲ್ಲದೇ ಇಡೀ ದೇಶದಲ್ಲಿ ಕಾಂಗ್ರೆಸ್ ಧೂಳೀಪಟವಾಗುವುದು ನಿಶ್ಚಿತ. ಮೋದಿಯವರ ಕಾಂಗ್ರೆಸ್ ಮುಕ್ತ ಭಾರತ ಚಿಂತನೆಗೆ ನಾವು ಕೈಜೋಡಿಸಬೇಕು. ದೇಶದ ಉನ್ನತಿಗೆ ಮೋದಿ ಅವರ ನಾಯಕತ್ವ ಅವಶ್ಯವಿದೆ ಎಂದು ನುಡಿದರು. 1977ರ ನಂತರ ಜನತಾ ಪಕ್ಷ ನಾನಾ ರೂಪಗಳನ್ನು ದೇಶ ಮತ್ತು ರಾಜ್ಯದಲ್ಲಿ ತಳೆದಿದೆ. ಜನತಾ ಪಕ್ಷ ಒಡೆದು ಹಲವಾರು ಹೋಳುಗಳಾಗಿರಬಹುದು. ಆದರೆ ಅದಿನ್ನೂ ಸದೃಢವಾಗಿದೆ. ಆರ್‌ಜೆಡಿ, ಜೆಡಿಯು, ಬಿಜೆಡಿ ಮತ್ತು ಜೆಡಿಎಸ್ ಆಗಿ ಗಟ್ಟಿಯಾಗಿದೆ ಎಂದರು.

# ದೈಹಿಕ ನ್ಯೂನತೆಯುಳ್ಳ ವಿದ್ಯಾರ್ಥಿಗೆ ಪ್ರವೇಶ ನಿರಾಕರಣೆ ಆರೋಪ

ಮೈಸೂರು, ಸೆ.26(ಎಂಟಿವೈ)– ದೈಹಿಕ ಚಲನಶೀಲತೆಯ ನ್ಯೂನತೆ ಇರುವ ವಿದ್ಯಾರ್ಥಿಯೊಬ್ಬರಿಗೆ ಶ್ರೀರಾಂಪುರದ ಖಾಸಗಿ ಶಾಲೆಯೊಂದರ ಆಡಳಿತ ಮಂಡಳಿ ಶಾಲೆಗೆ ದಾಖಲು ಮಾಡಿಕೊಳ್ಳಲು ನಿರಾಕರಿಸಿದ್ದು, ಈ ಸಂಬಂಧ ದೂರು ನೀಡಲು ನಿರ್ಧರಿಸಲಾಗಿದೆ ಎಂದು ಸಾಮೂಹಿಕ ನಾಯಕತ್ವದ ರೈತ ಸಂಘದ ಮುಖಂಡ ಮಂಜುಕಿರಣ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಕ್ಷಣ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಯೊಬ್ಬರ ಹತ್ತು ವರ್ಷದ ಪುತ್ರ ದೈಹಿಕವಾಗಿ ಅರ್ಧ ಚಲನಾಶೀಲತೆ ಸಾಮರ್ಥ್ಯ ಕೊರತೆ ಎದುರಿಸುತ್ತಿದ್ದಾರೆ. ಈ ಕಾರಣದಿಂದ ಶ್ರೀರಾಂಪುರದ ಸಿಬಿಎಸ್‌ಇ ಶಾಲೆಯೊಂದು ಪ್ರವೇಶ ನಿರಾಕರಿಸಿದೆ. ಈ ಹಿಂದೆ ನೀಡಿದ ದೂರಿನ ಮೇರೆಗೆ ಬಿಇಒ ವಿಚಾರಣೆ ನಡೆಸಿದ್ದರು. ಆದರೆ, ಶಾಲೆಯ ಆಡಳಿತ ಮಂಡಳಿ ಉಡಾಫೆ ಉತ್ತರ ನೀಡಿದೆ. ಹೀಗಾಗಿ ದಟ್ಟಗಳ್ಳಿಯ ರೋಟರಿ ಶಾಲೆಗೆ ಬಾಲಕನನ್ನು ದಾಖಲಿಸಲಾಗಿದೆ. ಆ ಶಾಲೆಯಲ್ಲಿ ಇದುವರೆಗೂ ವಿಶೇಷಚೇತನ ಮಕ್ಕಳಿಗೆ ಪ್ರವೇಶವನ್ನೇ ನೀಡುತ್ತಿಲ್ಲ. ಈ ಕಾರಣದಿಂದ ಪೋಷಕರೊಡಗೂಡಿ ರೈತ ಸಂಘ ಹೋರಾಟಕ್ಕಿಳಿದಿದೆ. ಅಗತ್ಯವಾದರೆ ಶಾಲೆ ವಿರುದ್ಧ ಕಾನೂನು ಹೋರಾಟ ಸಹ ನಡೆಸಲಿದೆ ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಬಾಲಕನ ಪೋಷಕರಾದ ಚಾರ್ಲ್ಸ್ ಅಂತೋಣಿ, ಲಿನ್ನಿ ಜಾರ್ಜ್, ಸಂಘಟನೆಯ ವಿದ್ಯಾಸಾಗರ ಕದಂಬ, ವರಕೋಡು ಕೃಷ್ಣೇಗೌಡ ಇದ್ದರು.

# ದೇಶದಲ್ಲಿ ಬಿಜೆಪಿ ವಿರೋಧಿ ಶಕ್ತಿಗಳು ಒಗ್ಗೂಡುತ್ತಿವೆ

## ಮುಖ್ಯಮಂತ್ರಿ ಸಿದ್ದರಾಮಯ್ಯ

ಮೈಸೂರು, ಸೆ.26(ಎಂಟಿವೈ)– ಪ್ರಧಾನಿ ಮೋದಿ ಸೇರಿದಂತೆ ಕೇಂದ್ರದ ಬಿಜೆಪಿ ನಾಯಕರು ಕಳೆದ 9 ವರ್ಷದಿಂದ ನುಡಿದಂತೆ ನಡೆಯದೇ ಭಾವನಾತ್ಮಕ ವಿಷಯ ಮುಂದಿಟ್ಟುಕೊಂಡು ಸಮಾಜ ಒಡೆಯುವುದರಲ್ಲಿ ನಿರತರಾಗಿರುವುದರಿಂದ ಬಿಜೆಪಿ ವಿರೋಧಿ ಶಕ್ತಿಗಳು ಒಂದುಗೂಡುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಎನ್‌ಡಿಎ ಮೈತ್ರಿಕೂಟದಿಂದ ಎಐಎಡಿಎಂಕೆ ಹೊರಬಂದಿರುವುದಕ್ಕೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಎನ್‌ಡಿಎ ಮೈತ್ರಿಕೂಟದಿಂದ ಎಐಡಿಎಂಕೆ ಹೊರಗೆ ಬಂದಿದೆ. ಅಲ್ಲದೆ, ಬಿಜೆಪಿಯೊಂದಿಗೆ ಜೆಡಿಎಸ್ ಮೈತ್ರಿ ಮಾಡಿಕೊಂಡಿರುವುದಕ್ಕೂ ಜೆಡಿಎಸ್‌ನಿಂದ ಮುಸ್ಲಿಂ ನಾಯಕರು ಹೊರಬರುತ್ತಿದ್ದಾರೆ. ದೇಶದಲ್ಲಿ ಬಿಜೆಪಿ ವಿರುದ್ಧದ ಶಕ್ತಿಗಳು ಒಂದುಗೂಡುತ್ತಿವೆ. ಬಿಜೆಪಿ ಕಳೆದ 9 ವರ್ಷಗಳಲ್ಲಿ ನುಡಿದಂತೆ ನಡೆದಿಲ್ಲ. ಭಾವನಾತ್ಮಕ ವಿಷಯಗಳನ್ನು ಮುಂದಿಟ್ಟು ಸಮಾಜವನ್ನು ಒಡೆಯುವ ಕೆಲಸ ಮಾಡಿದ್ದಾರೆ. ಈ ಸತ್ಯ ಗೊತ್ತಾದ ಮೇಲೆ ಅನೇಕ ಶಕ್ತಿಗಳು ಒಂದಾಗಿ ಬಿಜೆಪಿಯೇತರ ಗುಂಪಿನಲ್ಲಿ ಗುರುತಿಸಿಕೊಂಡಿದ್ದಾರೆ ಎಂದರು.

**ಮಹಿಳಾ ಮೀಸಲಾತಿ ಮಸೂದೆ ಜಾರಿ ಕಣ್ಣೊರೆಸುವ ತಂತ್ರ:** ಮುಂದಿನ ಲೋಕಸಭಾ ಚುನಾವಣೆ ದೃಷ್ಟಿ ಇಟ್ಟುಕೊಂಡು ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಮಸೂದೆ ಯನ್ನು ತರಾತುರಿಯಲ್ಲಿ, ಜಾರಿ ಗೊಳಿಸಿದೆ. ಆದರೆ ಮಹಿಳೆಯರಿಗೆ ಮೀಸಲಾತಿ ನೀಡುವ ಪ್ರಾಮಾಣಿಕ ಪ್ರಯತ್ನ ಕೇಂದ್ರದಿಂದ ಆಗಿಲ್ಲ. ಓಟ್ ಬ್ಯಾಂಕ್ ರಾಜಕಾರಣದಿಂದ ಬಿಲ್ ಜಾರಿಗೊಳಿಸಿದ್ದಾರೆ. ಈ ಬಿಲ್‌ಗೆ 15 ವರ್ಷ ಆಯಸ್ಸು ಎಂದಿದ್ದಾರೆ. ಜಾತಿ ಜನಗಣತಿ ಮಾಡದೇ ಮೀಸಲಾತಿ ಬಿಲ್ ಜಾರಿಗೊಳಿಸಿರುವುದು ಕಣ್ಣೊರೆಸುವ ತಂತ್ರಗಾರಿಕೆ. ನಮ್ಮಲ್ಲಿ 2011ರ ಜನಗಣತಿ ಫಲಿತಾಂಶವೇ ಬಂದಿಲ್ಲ. ಹೊಸದಾಗಿ ಗಣತಿ ಮಾಡಲು 2 ವರ್ಷ ಸಮಯ ಬೇಕು. ಅದನ್ನು ಗೆಜೆಟ್ ನೋಟಿಫಿಕೇಷನ್ ಮಾಡಬೇಕು. ಆ ನಂತರ ಡಿ–ಲಿಮಿಟೇಷನ್ ಮಾಡಬೇಕು. ಅದಕ್ಕೂ 2 ವರ್ಷಬೇಕು. 2026ಕ್ಕೆ ಡಿ–ಲಿಮಿಟೇಷನ್ ಆರಂಭವಾಗುತ್ತದೆ. ಅದು ಮುಗಿಯುವ ವೇಳೆ 2028ರ ಚುನಾವಣೆ ಮುಗಿಯುತ್ತದೆ. ಆ ಅವಧಿಯಲ್ಲೂ ಮಹಿಳೆಯರ ಮೀಸಲಾತಿ ಜಾರಿಯಾಗುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಮಹಿಳೆಯರಿಗೆ ಸೌಲಭ್ಯ ಕಲ್ಪಿಸುವ ಪ್ರಾಮಾಣಿಕ ಬದ್ಧತೆ ಇದ್ದಿದ್ದರೆ ಹಳೆ ಜನಗಣತಿ ಆಧಾರದಲ್ಲೇ ಮೀಸಲಾತಿ ಮುಂದುವರೆಸಬಹುದಾಗಿತ್ತು ಎಂದು ಹೇಳಿದರು.

### ನಾನು ಗಟ್ಟಿಯಾಗೇ ಇದ್ದೇನೇ.... ನೀವೇ ಸಡಿಲ ಮಾಡಲು ಯತ್ನಿಸ್ತೀರಾ

ಚಾಮರಾಜನಗರಕ್ಕೆ ಹೋದರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ಮೂಢನಂಬಿಕೆ ತೊಡೆದು ಹಾಕಿ ಕಳೆದ ಅವಧಿಯಲ್ಲಿ 5 ವರ್ಷ ಗಟ್ಟಿಯಾಗಿ ಅಧಿಕಾರ ನಡೆಸಿದ್ದೀರಿ ಎಂಬ ಪತ್ರಕರ್ತರೊಬ್ಬರ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿ, ನಾನು ಗಟ್ಟಿಯಾಗೇ ಇದ್ದೀನಿ. ನನ್ನನ್ನು ಸಡಿಲಗೊಳಿಸಲು ನೀವು (ಮಾಧ್ಯಮ) ಹಾಗೂ ಬಿಜೆಪಿಯವರು ಪಯತ್ನಿಸುತ್ತಲೇ ಇದ್ದೀರಾ. ಆದರೂ ನಾನು ಈಗಲೂ ಗಟ್ಟಿಯಾಗೇ ಇದ್ದೇನೆ ಎಂದು ಹಾಸ್ಯ ಚಟಾಕಿ ಹಾರಿಸಿದರು.

ಚಾಮರಾಜನಗರ ಜಿಲ್ಲೆಗೆ ಈಗ ಯಾವುದೇ ಅಪವಾದ, ಕಳಂಕ, ಮೂಢನಂಬಿಕೆ ಇಲ್ಲ. ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಹಲವು ಬಾರಿ ಹೋಗಿ, 5 ವರ್ಷ ಅಧಿಕಾರ ಪೂರೈಸಿದ್ದೇನೆ. ನಾಳೆ (ಸೆ.27)ಯೂ ಚಾಮರಾಜನಗರಕ್ಕೆ ಹೋಗುತ್ತಿದ್ದೇನೆ. ಈಗ ಯಾವುದೇ ಅಪವಾದ ಇಲ್ಲ. ಎಲ್ಲವೂ ಹೊರಟು ಹೋಗಿದೆ ಎಂದು ಬೀಗಿದರು.

# ಬಿಜೆಪಿ ಜೊತೆ ಮೈತ್ರಿ ಆದರೂ ನಮ್ಮ ಸಿದ್ಧಾಂತಕ್ಕೆ ನಾವು ಬದ್ಧ



**ಹೊಳೆನರಸೀಪುರ:** ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್, ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡರೂ ತಮ್ಮ ಪಕ್ಷದ ಸಿದ್ಧಾಂತ, ತತ್ವ ಹಾಗೂ ಬದ್ಧತೆಯನ್ನು ಕಾಯ್ದುಕೊಳ್ಳುತ್ತೇವೆ. ಈ ವಿಷಯದಲ್ಲಿ ಯಾರಿಗೂ ಅನುಮಾನ ಬೇಡ. ಮುಸ್ಲಿಂ ಜನಾಂಗದ ಮುಖಂಡರು ಹಾಗೂ ಪಕ್ಷದ ಹಿರಿಯರು ಮಾತುಕತೆ ನಡೆಸಿ ಮೈತ್ರಿಗೆ ಮುಂದಾಗಿದ್ದಾರೆ ಎಂದು ಸಂಸದ ಪ್ರಜ್ವಲ್ ರೇವಣ್ಣ ತಿಳಿಸಿದರು.

ಪಟ್ಟಣದಲ್ಲಿ ಮಾತನಾಡಿದ ಅವರು, ಯಾವ ಪಕ್ಷಕ್ಕೆ ಎಷ್ಟು ಸೀಟು ಎನ್ನುವ ಬಗ್ಗೆ ಇನ್ನೂ ನಿರ್ಧಾರ ಆಗಿಲ್ಲ. ಈ ಬಗ್ಗೆ ನಮ್ಮ ಪಕ್ಷದ ವರಿಷ್ಠರು ಮಾತುಕತೆ ನಡೆಸುತ್ತಿದ್ದಾರೆ. ಮೈತ್ರಿಯಿಂದ ಎರಡೂ ಪಕ್ಷಕ್ಕೆ ಒಳ್ಳೆಯದಾಗಲಿದ್ದು, ಕಾರ್ಯಕರ್ತರಿಗೂ ಒಳ್ಳೆಯದಾಗುತ್ತದೆ ಎಂದರು.

ಲೋಕಸಭಾ ಸದಸ್ಯತ್ವ ಅಸಿಂಧು ಕುರಿತಂತೆ ಮಾತನಾಡಿದ ಅವರು, ಈ ವಿಚಾರವಾಗಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದೇವೆ. ನ್ಯಾಯಾಲಯದಲ್ಲಿ ದಾವೆ ಹೂಡಿದರೆ ನಾವು ತಪ್ಪು ಮಾಡಿದ್ದೇವೆ ಎಂದು ಅರ್ಥ ಅಲ್ಲ ನ್ಯಾಯಾಲಯದ ಮೆಟ್ಟಿಲೇರಿ ಅವರ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ ಅಷ್ಟೇ. ನಾವು ತಪ್ಪು ಮಾಡಿದ್ದೇವೆ ಎಂದರ್ಥ ಅಲ್ಲ ಈ ಬಗ್ಗೆ ಯಾರಿಗೂ ಅನುಮಾನ ಬೇಡ. ನನ್ನ ಸಂಸದ ಸ್ಥಾನದ ಅವಧಿ ನಿರಾಂತಂಕವಾಗಿ ಪೂರ್ಣಗೊಳಿಸುತ್ತೇನೆ ಎಂದು ಹೇಳಿದರು.

# 25 ಲಕ್ಷಕ್ಕೆ 2 ಕೆಜಿ ನಕಲಿ ಚಿನ್ನ ನೀಡಿ ವಂಚನೆ: ಇಬ್ಬರು ಅರೆಸ್ಟ್



**ಹಾವೇರಿ:** 25 ಲಕ್ಷ ರೂ.ಗೆ 2 ಕೆಜಿ ಚಿನ್ನ ಕೊಡುವುದಾಗಿ ನಂಬಿಸಿ ವ್ಯಕ್ತಿಯೊಬ್ಬನಿಗೆ ವಂಚಿಸಿದ್ದ ಆರೋಪಿಗಳನ್ನು ಶಿಗ್ಗಾಂವ್ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳು ಮೊದಲು ಎರಡು ಚಿನ್ನದ ನಾಣ್ಯಗಳನ್ನು ನೀಡಿ ಹಣ ಪಡೆದು, ಬಳಿಕ ನಕಲಿ ಚಿನ್ನವನ್ನು ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತ ಆರೋಪಿಗಳನ್ನು ಕರಣ್ ಮತ್ತು ಪ್ರವೀಣ್ ಎಂದು ಗುರುತಿಸಲಾಗಿದೆ. ಆರೋಪಿಗಳು ಬೆಂಗಳೂರು ಮೂಲದ ಲಕ್ಷ್ಮಣ್ ಚೆನ್ನಬಸಯ್ಯ ಎಂಬುವರಿಗೆ ಚಿನ್ನದ ನಾಣ್ಯಗಳನ್ನು ನೀಡುವುದಾಗಿ ನಂಬಿಸಿದ್ದರು. ಮೊದಲಿಗೆ ಚಿನ್ನದ ನಾಣ್ಯ ನೀಡಿ 25 ಲಕ್ಷ ರೂ. ಪಡೆದು ಬಳಿಕ ನಕಲಿ ಚಿನ್ನದ ನಾಣ್ಯಗಳನ್ನು ನೀಡಿದ್ದರು. ಆರೋಪಿಗಳು ಚಿನ್ನದ ನಾಣ್ಯಗಳನ್ನು ನೀಡುವುದಾಗಿ ಹರಪನಹಳ್ಳಿಯ ಹೊಳಲು ಗ್ರಾಮದ ಬಳಿ ಲಕ್ಷ್ಮಣ್‌ನನ್ನು ಕರೆಸಿದ್ದರು. ಇಲ್ಲಿಯೇ ನಾಣ್ಯಗಳನ್ನು ನೀಡಿ ಹಣ ಪಡೆದಿದ್ದರು. ಬಳಿಕ ಇದನ್ನು ಪರೀಕ್ಷಿಸಿದಾಗ ನಕಲಿ ಎಂಬುದು ತಿಳಿದು ಬಂದಿತ್ತು.

# ಸಂಕಷ್ಟ ಸೂತ್ರ ರೂಪಿಸದ ಹೊರತು ತಮಿಳುನಾಡಿಗೆ ನೀರು ಹರಿಸಬಾರದು

## ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಆಗ್ರಹ





ಬೆಂಗಳೂರು,ಸೆ.26(ಕೆಎಂಶಿ)–ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ (CWMA) ಮತ್ತು ಕಾವೇರಿ ಜಲ ನಿಯಂತ್ರಣ ಸಮಿತಿ (CWRC) ಸಂಕಷ್ಟ ಪರಿಸ್ಥಿತಿಯಲ್ಲಿ ನೀರು ಹಂಚಿಕೆ ಸೂತ್ರ ರೂಪಿಸದ ಹೊರತು ತಮಿಳುನಾಡಿಗೆ ನೀರು ಹರಿಸಬಾರದು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ರಾಜ್ಯ ಸರ್ಕಾರದ ವೈಫಲ್ಯಗಳನ್ನು ತಮಿಳುನಾಡು ಅತ್ಯಂತ ಜಾಣತನದಿಂದ ಲಾಭ ಮಾಡಿಕೊಳ್ಳುತ್ತಿದೆ ಎಂದು ಟೀಕಾಪ್ರಹಾರ ನಡೆಸಿದ್ದಾರೆ. ಅಲ್ಲದೆ, ನಮ್ಮ ಸರ್ಕಾರ, ಡಿಎಂಕೆ ಯೋಗಕ್ಷೇಮವನ್ನಷ್ಟೇ ಆಲೋಚನೆ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ.

ಪೆಟ್ಟಿನ ಮೇಲೆ ಪೆಟ್ಟು ತಿನ್ನುತ್ತಿರುವ ಕರ್ನಾಟಕಕ್ಕೆ ಈಗ ಮತ್ತೆ ದೊಡ್ಡ ಹಿನ್ನಡೆ ಆಗಿದೆ. ಇದು ನಿರಂತರವಾಗಿದ್ದು, ಕಾವೇರಿ ಜಲ ನಿಯಂತ್ರಣಾ ಸಮಿತಿ ತಮಿಳುನಾಡಿಗೆ ಇನ್ನೂ 18 ದಿನಗಳ ಕಾಲ ನಿತ್ಯವೂ 3,000 ಕ್ಯುಸೆಕ್ ನೀರು ಹರಿಸಲು ಕರ್ನಾಟಕಕ್ಕೆ ಇಂದು ಆದೇಶ ನೀಡಿದೆ. ಇದು ನಿಜಕ್ಕೂ ಆಘಾತಕಾರಿ, ಕಾವೇರಿ ಮತ್ತು ಕನ್ನಡಿಗರ ಪಾಲಿಗೆ ಮರಣ ಶಾಸನ ಎಂದು ಅವರು ಹೇಳಿದ್ದಾರೆ.

ಕಾವೇರಿ ಕೊಳ್ಳ ಮತ್ತು ಬೆಂಗಳೂರು ನಗರದ ಜನರ ಕತ್ತು ಹಿಚುಕುವುದಕ್ಕೆಂದೇ ರಾಜ್ಯ ಕಾಂಗ್ರೆಸ್ ಸರಕಾರ ಬಂದಿದೆಯೇನೋ ಎಂದು ಬಹಳ ನೋವಿನಿಂದ ಹೇಳಲೇಬೇಕಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕೆಆರ್‌ಎಸ್ ಜಲಾಶಯಕ್ಕೆ ನಿತ್ಯವೂ 10,000 ಕ್ಯುಸೆಕ್ ಒಳಹರಿವು ಇದೆ ಎನ್ನುತ್ತಾರೆ ಜಲ ಸಂಪನ್ಮೂಲ ಸಚಿವರು. ಇದಕ್ಕೆ ತದ್ವಿರುದ್ಧವಾಗಿ ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದ ಅಧಿಕಾರಿಗಳು 'ನಮ್ಮಲ್ಲಿ ನೀರೇ ಇಲ್ಲ' ಎಂಬ ಮಾಹಿತಿ ನೀಡುತ್ತಾರೆ. ಇನ್ನೊಂದೆಡೆ ಹಿರಿಯ ಅಧಿಕಾರಿಯೊಬ್ಬರು 'ಈ ಆದೇಶದಿಂದ ರಾಜ್ಯಕ್ಕೆ 2.5 ಟಿಎಂಸಿ ನೀರು ಉಳಿತಾಯವಾಗಿದೆ' ಎನ್ನುತ್ತಾರೆ. 'ಎತ್ತು ಏರಿಗೆ, ಕೋಣ ನೀರಿಗೆ' ಎನ್ನುವಂತಿದೆ ಜಲ ಸಂಪನ್ಮೂಲ ಇಲಾಖೆ ಮತ್ತು ಸರ್ಕಾರದ ಪರಿಸ್ಥಿತಿ. ಹೆಜ್ಜೆಹೆಜ್ಜೆಗೂ ಅನರ್ಥಗಳನ್ನೇ ಮಾಡುತ್ತಿರುವ ಈ ಸರ್ಕಾರದ ವೈಫಲ್ಯದ ಲಾಭವನ್ನು ತಮಿಳುನಾಡು ಅತ್ಯಂತ ಜಾಣತನದಿಂದ ಪಡೆದುಕೊಳ್ಳುತ್ತಿದೆ ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ನಾವು ಕುಡಿಯಲು ನೀರು ಕೇಳುತ್ತಿದ್ದೇವೆ, ತಮಿಳುನಾಡು ಅಕ್ರಮವಾಗಿ ಮಿತಿಮೀರಿದ ವಿಸ್ತೀರ್ಣದಲ್ಲಿ ಬೆಳೆದ ಕುರುವೈ ಬೆಳೆಗೆ ನೀರು ಕೇಳುತ್ತಿದೆ. ಅಲ್ಲಿ ಸ್ವಾರ್ಥ ಇದೆ, ಇಲ್ಲಿ ಜನರ ಬದುಕಿದೆ. ಮಾನವೀಯ ನ್ಯಾಯಕ್ಕೆ ವಿರುದ್ಧವಾದ ತಮಿಳುನಾಡು ನಡೆಯನ್ನು ಒಪ್ಪಲು ಸಾಧ್ಯವೇ ಇಲ್ಲ. ಆ ರಾಜ್ಯದ ಇಂಥ ಮನಃಸ್ಥಿತಿಯ ವಿರುದ್ಧ ಪ್ರಬಲ ಹೋರಾಟ ಮಾಡುವ ಇಚ್ಛಾಶಕ್ತಿ ಈ ಸರ್ಕಾರಕ್ಕೆ ಇಲ್ಲದಾಗಿದೆ. ಕನ್ನಡಿಗರ ಮೇಲೆ 'ಬಂಡೆ' ಎಳೆದಿದೆ ಎಂದು ಅವರು ಕಿಡಿಕಾರಿದ್ದಾರೆ.

ಒಕ್ಕೂಟ ವ್ಯವಸ್ಥೆಯಲ್ಲಿ ಎಲ್ಲರೂ ಸಮಾನರು. ಈಗಾಗಲೇ ಕಾವೇರಿ ನೀರು ಹಂಚಿಕೆಯನ್ನು ನ್ಯಾಯಾಧೀಕರಣ ಅಖೈರುಗೊಳಿಸಿದ್ದು, ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ. ಆದರೆ, ಸಂಕಷ್ಟ ಕಾಲದಲ್ಲಿ ಪರಿಹಾರವೇನು? ಮಾತೆತ್ತಿದರೆ ನೀರು ಬಿಡಿ ಎಂದು ಆದೇಶಿಸುವ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ (CWMA) ಮತ್ತು ಕಾವೇರಿ ಜಲ ನಿಯಂತ್ರಣ ಸಮಿತಿ (CWRC) ಈ ಕೂಡಲೇ 'ಸಂಕಷ್ಟ ಹಂಚಿಕೆ ಸೂತ್ರ'ವನ್ನು ರೂಪಿಸಲೇಬೇಕು. ಆ ನಿಟ್ಟಿನಲ್ಲಿ ಸರಕಾರ ಒತ್ತಡ ಹೇರಿ, ಆ ಸೂತ್ರ ರೂಪಿಸದ ಹೊರತು ತಮಿಳುನಾಡಿಗೆ ನೀರು ಹರಿಸುವ ಪ್ರಶ್ನೆಯೇ ಇಲ್ಲವೆಂದು ಕಡ್ಡಿ ತುಂಡು ಮಾಡಿದಂತೆ ಸ್ಪಷ್ಟವಾಗಿ ಹೇಳಲೇಬೇಕು. ಯಾವುದೇ ಕಾರಣಕ್ಕೂ ಈಗ ನೀರು ಹರಿಸಬಾರದು ಎಂದು ಒತ್ತಾಯ ಮಾಡಿದ್ದಾರೆ.

## ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ರೋಜ್ಗಾರ್ ಮೇಳ

# ನೇಮಕಾತಿ ಪತ್ರ ವಿತರಿಸಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ



ಮೈಸೂರು,ಸೆ.26(ಆರ್‌ಕೆ)– ರೋಜ್ಗಾರ್ ಯೋಜನೆಯಡಿ ಹೊಸದಾಗಿ ವಿವಿಧ ಇಲಾಖೆಗಳಿಗೆ ನೇಮಕಗೊಂಡಿರುವ 51,000 ಮಂದಿಗೆ ದೇಶದ 46 ಸ್ಥಳಗಳಲ್ಲಿ ಮಂಗಳವಾರ ಪ್ರಧಾನಮಂತ್ರಿ ನರೇಂದ್ರ ಮೋದಿ ವಿಡಿಯೋ ಕಾನ್ಫರೆನ್ಸ್ ಮೂಲಕ ನೇಮಕಾತಿ ಪತ್ರಗಳನ್ನು ವಿತರಿಸಿದರು.

ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್)ಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಕೃಷಿ ಮತ್ತು ರೈತ ಕ್ಷೇಮಾಭಿವೃದ್ಧಿ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೊಸದಾಗಿ ನೇಮಕಗೊಂಡಿರುವ ಉದ್ಯೋಗಿಗಳಿಗೆ ನೇಮಕಾತಿ ಪತ್ರ ವಿತರಿಸಿ, ಶುಭ ಕೋರಿದರು.

ಉದ್ಯೋಗ ಸೃಷ್ಟಿಯಲ್ಲಿ ಮಹತ್ತರ ಸಾಧನೆ ಮಾಡಿರುವ ಕೇಂದ್ರ ಸರ್ಕಾರವು, ಇಲಾಖೆಗಳ ಬಲವರ್ಧನೆಗೆ ಆದ್ಯತೆ ನೀಡುತ್ತಿದೆ ಎಂಬುದನ್ನು ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಡುವುದು ರೋಜ್ಗಾರ್ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಆ ಮೂಲಕ ಯುವ ಸಮುದಾಯಕ್ಕೆ ಉತ್ತಮ ಭವಿಷ್ಯ ರೂಪಿಸಲು ಸರ್ಕಾರ ಮುಂದಾಗಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ನುಡಿದರು.

ಅಂಚೆ, ಇಂಡಿಯನ್ ಆಡಿಟ್ ಅಂಡ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್, ಆಟೋಮಿಕ್ ಎನರ್ಜಿ, ಕಂದಾಯ, ಉನ್ನತ ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಸೇರಿದಂತೆ ಕೇಂದ್ರ ಸರ್ಕಾರದ ಹಲವು ಇಲಾಖೆಗಳಲ್ಲಿ ಖಾಲಿ ಹುದ್ದೆ ಭರ್ತಿ ಮಾಡುವ ಮೂಲಕ ಉದ್ಯೋಗ ಸೃಷ್ಟಿ ಮಾಡಿದೆ ಎಂದು ಅವರು ನುಡಿದರು.

ಸ್ಥಳೀಯ ಯುವಕರು ರೋಜ್ಗಾರ್ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡು ಇಲಾಖೆಯ ಶ್ರೇಯೋಭಿವೃದ್ಧಿಯಲ್ಲಿ ಪಾಲ್ಗೊಳ್ಳಬೇಕು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೂ ಹೊಸದಾಗಿ ನೇಮಕಗೊಂಡಿರುವ ಯುವಕರಿಗೆ ಶುಭಾಶಯ ಕೋರಿದ್ದಾರೆ. ಎಲ್ಲರೂ ಶ್ರದ್ಧೆಯಿಂದ ಕೆಲಸ ನಿರ್ವಹಿಸಿ ದೇಶದ ಶ್ರೇಯೋಭಿವೃದ್ಧಿಗೆ ಕೈ ಜೋಡಿಸಬೇಕೆಂದು ಇದೇ ಸಂದರ್ಭ ನುಡಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು, ಆಯಿಷ್ ವಿದ್ಯಾರ್ಥಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

# ಕಾವೇರಿ ಹೋರಾಟ: ಕೆ.ಆರ್.ಪೇಟೆ, ಮಳವಳ್ಳಿ ಬಂದ್ ಯಶಸ್ವಿ

**● ಸ್ವಯಂಪ್ರೇರಿತವಾಗಿ ಅಂಗಡಿ ಮುಂಗಟ್ಟು ಮುಚ್ಚಿದ ವರ್ತಕರು ● ವಿವಿಧ ಸಂಘಟನೆಗಳಿಂದ ಪ್ರತಿಭಟನೆ, ಆಕ್ರೋಶ**

**ಕೆ.ಆರ್.ಪೇಟೆ/ಮಳವಳ್ಳಿ, ಸೆ.26– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಕಾವೇರಿ–ಹೇಮಾವತಿ ಹಿತರಕ್ಷಣಾ ಸಮಿತಿ, ರೈತ ಹಾಗೂ ಪ್ರಗತಿಪರ ಮುಖಂಡರು ಮತ್ತು ಜೆಡಿಎಸ್, ಬಿಜೆಪಿ ಮಂಗಳವಾರ ಕರೆ ನೀಡಿದ್ದ ಮಳವಳ್ಳಿ ಹಾಗೂ ಕೆ.ಆರ್.ಪೇಟೆ ಬಂದ್ ಸಂಪೂರ್ಣ ಯಶಸ್ವಿಯಾಗಿದೆ.**


ಕೆ.ಆರ್.ಪೇಟೆ ಪಟ್ಟಣದ ಟಿಬಿ ವೃತ್ತದಲ್ಲಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

**ಕೆ.ಆರ್.ಪೇಟೆ:** ಕಾವೇರಿ–ಹೇಮಾವತಿ ಹಿತರಕ್ಷಣಾ ಸಮಿತಿ ಸೇರಿದಂತೆ ವಿವಿಧ ಸಂಘಟನೆ ಕರೆ ನೀಡಿದ್ದ ಕೆ.ಆರ್.ಪೇಟೆ ಬಂದ್ ಮಂಗಳವಾರ ಯಶಸ್ವಿಯಾಯಿತು.

ಮೆಡಿಕಲ್ ಸ್ಟೋರ್, ಆಸ್ಪತ್ರೆ, ಆಂಬುಲೆನ್ಸ್ ಸೇರಿದಂತೆ ಅಗತ್ಯ ವಸ್ತುಗಳನ್ನು ಹೊರತುಪಡಿಸಿ ಉಳಿದೆಲ್ಲಾ ಅಂಗಡಿ ಮುಂಗಟ್ಟು, ಹೋಟೆಲ್‌ಗಳು, ಬಾರ್‌ಗಳು, ಸಿನಿಮಾ ಮಂದಿರಗಳು ಬೆಳಗ್ಗೆಯಿಂದ ಸಂಜೆವರೆಗೆ ಸ್ವಯಂಪ್ರೇರಿತವಾಗಿ ಮುಚ್ಚಿ ಬಂದ್‌ಗೆ ಸಹಕಾರ ನೀಡಿದವು. ಬಂದ್ ಹಿನ್ನೆಲೆಯಲ್ಲಿ ಪಟ್ಟಣದ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಇಂಜಿನಿಯರಿಂಗ್ ಹಾಗೂ ಪದವಿ ಕಾಲೇಜು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಚಳವಳಿಯಲ್ಲಿ ಭಾಗವಹಿಸಿದ್ದರು.

ಪಟ್ಟಣದ ಪ್ರವಾಸಿ ಮಂದಿರದ ಬಳಿ ರೈತ, ಕನ್ನಡಪರ, ಪ್ರಗತಿಪರ, ದಲಿತಪರ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಜಮಾಯಿಸಿ ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಟಿಬಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಬೃಹತ್ ಪ್ರತಿಭಟನೆ ನಡೆಸಿದ ಹೋರಾಟಗಾರರು, ಕಾವೇರಿ–ಹೇಮಾವತಿ ಹಿತರಕ್ಷಣಾ ಸಮಿತಿಯಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಸುಪ್ರೀಂಕೋರ್ಟ್ ಮತ್ತು ಕಾವೇರಿ ನೀರು ಹಂಚಿಕೆ ಪ್ರಾಧಿಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ಮತ್ತು ಹೇಮಾವತಿ ನದಿ ಪಾತ್ರದಲ್ಲಿ ಮಳೆ ಇಲ್ಲದೇ ಬರಗಾಲ ಆವರಿಸಿದೆ. ಜನ ಜಾನುವಾರುಗಳ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ. ಆದರೆ ತಮಿಳುನಾಡು ಕುರುವೈ ಬೆಳೆಗೆ ನೀರು ಕೇಳುತ್ತಿರುವುದು ನ್ಯಾಯವಾದ ಬೇಡಿಕೆಯಲ್ಲ. ಯಥೇಚ್ಛವಾಗಿ ಮಳೆಯಾದರೆ ತಮಿಳುನಾಡಿಗೆ ನೀರು ಹರಿಸಲು ನಮಗೆ ಯಾವುದೇ ತೊಂದರೆ ಇಲ್ಲ. ನಮಗೆ ಕುಡಿಯಲು ನೀರಿಲ್ಲದಿರುವಾಗ ಬೇಸಾಯಕ್ಕೆ ನೀರು ಬಿಡಿ ಎಂದು ಸುಪ್ರೀಂಕೋರ್ಟ್ ಹಾಗೂ ನೀರು ಹಂಚಿಕೆ ಪ್ರಾಧಿಕಾರ ಕುರುಡು ಆದೇಶ ನೀಡುವ ಮೂಲಕ ಕನ್ನಡಿಗರ ಸಹನೆ ಕೆಣಕುತ್ತಿರುವುದಕ್ಕೆ ತಕ್ಕ ಉತ್ತರ ನೀಡಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.


ಮಳವಳ್ಳಿಯ ಅನಂತರಾಂ ವೃತ್ತದಲ್ಲಿ ರಸ್ತೆಯಲ್ಲೇ ಕುಳಿತು ಊಟ ಮಾಡುವ ಮೂಲಕ ಪ್ರತಿಭಟನೆ ನಡೆಸಲಾಯಿತು.


**ಶಾಸಕ ಹೆಚ್.ಟಿ.ಮಂಜು ಬೆಂಬಲ:** ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಶಾಸಕ ಹೆಚ್.ಟಿ.ಮಂಜು, ನಮಗೆ ನೀರಿಲ್ಲದ ಸಮಯದಲ್ಲಿ ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ. ಇದನ್ನು ಸುಪ್ರೀಂಕೋರ್ಟ್ ಹಾಗೂ ಪ್ರಾಧಿಕಾರಕ್ಕೆ ಸರ್ಕಾರ ಮನವರಿಕೆ ಮಾಡಿಕೊಡಬೇಕು. ಹೀಗೆ ನಿತ್ಯ ತಮಿಳುನಾಡಿಗೆ ನೀರು ಹರಿಸಿದರೆ ಕೊನೆಗೆ ನಮಗೆ ಕುಡಿಯಲು ನೀರಿನ ಸಮಸ್ಯೆ ಉಂಟಾಗುತ್ತದೆ. ಈ ನಿಟ್ಟಿನಲ್ಲಿ ಕಾವೇರಿ ವಿಚಾರದಲ್ಲಿ ಸರ್ಕಾರ ದಿಟ್ಟ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಸರ್ವಪಕ್ಷದ ಸಭೆಯಲ್ಲಿ ನೀರು ಬಿಡಲ್ಲ ಎಂದು ಹೇಳಿದ್ದರೂ ನೀರು ಬಿಡಲಾಗುತ್ತಿದೆ. ರೈತರ ಆಕ್ರೋಶಕ್ಕೆ ಬೆಲೆ ತೆರಬೇಕಾಗುತ್ತದೆ. ಕಾಂಗ್ರೆಸ್ ಸರ್ಕಾರ ಘೋರ ಅನ್ಯಾಯ ಮಾಡುತ್ತಿದೆ. ಕೂಡಲೇ ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರನ್ನು ನಿಲ್ಲಿಸಬೇಕೆಂದು ಆಗ್ರಹಿಸಿದರು.

ಇದೇ ವೇಳೆ ವಕೀಲರು ನ್ಯಾಯಾಲಯದ ಕಲಾಪ ಬಹಿಷ್ಕರಿಸಿ ಬಂದ್‌ಗೆ ಬೆಂಬಲ ಸೂಚಿಸಿದರು. ಇನ್ನು ತಾಲೂಕು ರಾಜಸ್ಥಾನ ಸಮಾಜದವರು ರಸ್ತೆಯಲ್ಲೇ ಅಡುಗೆಮಾಡಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಕಾವೇರಿ–ಹೇಮಾವತಿ ಹಿತರಕ್ಷಣಾ ಸಮಿತಿ ಸಂಚಾಲಕ ಕೆ.ಆರ್.ಜಯರಾಂ, ಶಂಕರ್, ಪುಟ್ಟೇಗೌಡ, ಶ್ರೀರುದ್ರ ಮುನಿ ಸ್ವಾಮೀಜಿ, ವಕೀಲರ ಸಂಘದ ಅಧ್ಯಕ್ಷ ಎನ್.ಆರ್.ರವಿಶಂಕರ್, ಹಿರಿಯ ವಕೀಲರಾದ ಬಿ.ಎಲ್.ದೇವರಾಜು, ಬಿ.ಗಣೇಶ್, ಹೆಚ್.ಬಿ.ಕೆ.ಎನ್.ನಾರಾಯಣ, ದೇವರಾಜು, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಂ, ಮನ್‌ಮುಲ್ ನಿರ್ದೇಶಕ ಡಾಲು ರವಿ, ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಎಸ್.ಆರ್.ದಿನೇಶ್, ಬಿಜೆಪಿ ಮುಖಂಡ ಭರತ್, ತಾಪಂ ಮಾಜಿ ಸದಸ್ಯ ಅಶೋಕ್, ಕರವೇ ಅಧ್ಯಕ್ಷ ಡಿ.ಎಸ್.ವೇಣು, ಸಿ.ಬಿ.ಚೇತನ್ ಕುಮಾರ್, ಮದನ್, ತಾಲೂಕು ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ತಾಲೂಕು ಅಧ್ಯಕ್ಷ ಸಮೀರ್ ಸೇರಿದಂತೆ ವಿವಿಧ ಸಂಘಟನೆಗಳ ಸಾವಿರಾರು ಪ್ರತಿಭಟನಾಕಾರರು ಹೋರಾಟದಲ್ಲಿ ಭಾಗವಹಿಸಿದ್ದರು.

**ಮಳವಳ್ಳಿ:** ಪಟ್ಟಣದಲ್ಲಿ ಬಂದ್ ಹಿನ್ನೆಲೆಯಲ್ಲಿ ವರ್ತಕರು ಸ್ವಯಂಪ್ರೇರಿತವಾಗಿ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿದ್ದರಿಂದ ವ್ಯಾಪಾರ ವಹಿವಾಟು ಸ್ಥಗಿತಗೊಂಡಿತ್ತು. ಪೆಟ್ರೋಲ್ ಬಂಕ್, ಹೋಟೆಲ್‌ಗಳು ಬಾಗಿಲು ಮುಚ್ಚಿದ್ದವು. ಖಾಸಗಿ ಬಸ್, ಟೆಂಪೋ ವಾಹನ ಸಂಚಾರ ಸ್ಥಗಿತವಾಗಿತ್ತು. ಬೆಳಗ್ಗೆ ಸಂಚರಿಸಿದ ಸರ್ಕಾರಿ ಬಸ್‌ಗಳು ಆನಂತರ ಸಂಚಾರ ಸ್ಥಗಿತಗೊಳಿಸಿದವು. ಇನ್ನು ಬೈಕ್ ರ್‍ಯಾಲಿ ನಡೆಸಿದ ಪ್ರತಿಭಟನಾಕಾರರು, ಪಟ್ಟಣದ ಮೈಸೂರು, ಕೊಳ್ಳೇಗಾಲ ಮತ್ತು ಮಂಡ್ಯ ರಸ್ತೆಗಳಲ್ಲಿ ಅಂಗಡಿಗಳನ್ನು ಮುಚ್ಚಿಸಿದರು. ಜನಜೀವನ ಸಹಜವಾಗಿದ್ದರೂ ಸಾರ್ವಜನಿಕರ ಓಡಾಟ ಅಷ್ಟಾಗಿ ಕಂಡು ಬರಲಿಲ್ಲ. ಪಟ್ಟಣದ ಪ್ರಮುಖ ಭಾಗಗಳಲ್ಲಿ ಪೊಲೀಸ್ ಭದ್ರತೆ ಕೈಗೊಳ್ಳಲಾಗಿತ್ತು. ಯಾವುದೇ ಅಹಿತಕರ ಘಟನೆ ನಡೆದ ಬಗ್ಗೆ ವರದಿಯಾಗಿಲ್ಲ.


ಬಂದ್ ಹಿನ್ನೆಲೆಯಲ್ಲಿ ಕೆ.ಆರ್.ಪೇಟೆ–ಭೇರ್ಯ ರಸ್ತೆ ಬಸ್‌ನಿಲ್ದಾಣ ಬಿಕೋ ಎನ್ನುತ್ತಿರುವುದು

**ವಿವಿಧ ಸಂಘಟನೆಗಳ ಪ್ರತಿಭಟನೆ:** ಜಾತ್ಯತೀತ ಜನತಾದಳ, ಕನ್ನಡಪರ ಹಾಗೂ ಜನಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಬೈಕ್ ಜಾಥಾ ನಡೆಸಿ ಅನಂತರಾಮ್ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ಕನ್ನಂಬಾಡಿ ಕಟ್ಟೆ ನೀರಿಲ್ಲದೆ ಖಾಲಿಯಾಗಿದ್ದು, ಜನ ಜಾನುವಾರುಗಳಿಗೆ ಕುಡಿಯುವ ನೀರು ಇಲ್ಲದಂತಾಗಿದೆ. ಆದರೂ ಸರ್ಕಾರ ತಮಿಳುನಾಡಿಗೆ ನೀರು ಹರಿಸುವ ಮೂಲಕ ರೈತ ವಿರೋಧಿಯಾಗಿದೆ. ರೈತರಿಗೆ ಮೋಸ ಮಾಡಿ ಯಾವ ಸರ್ಕಾರವೂ ದೀರ್ಘಕಾಲ ಉಳಿಯಲು ಸಾಧ್ಯವಿಲ್ಲ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ ಯಾವುದೇ ಕಾರಣಕ್ಕೂ ನೀರು ಬಿಡಲು ಸಾಧ್ಯವಿಲ್ಲ ಎಂಬ ನೈಜ ಸ್ಥಿತಿಯನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟು ರೈತರ ಹಿತ ಕಾಪಾಡಲು ಮುಂದಾಗಬೇಕು ಎಂದು ಒತ್ತಾಯಿಸಿದರು.


ಮಳವಳ್ಳಿಯಲ್ಲಿ ಮಾಜಿ ಶಾಸಕ ಅನ್ನದಾನಿ ನೀರು ಬಿಡದಂತೆ ಮನವಿ ಸಲ್ಲಿಸುತ್ತಿರುವುದು.

ಈ ವೇಳೆ ಪುರಸಭೆ ಸದಸ್ಯ ನಂದಕುಮಾರ್, ಜೆಡಿಎಸ್ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯಾಧ್ಯಕ್ಷ ಜಯರಾಮ್, ಮಾಜಿ ಪುರಸಭೆ ಅಧ್ಯಕ್ಷ ಚಿಕ್ಕರಾಜು, ಪುರಸಭೆ ಮಾಜಿ ಅಧ್ಯಕ್ಷ ರಾಮಣ್ಣ, ಮಾಜಿ ಉಪಾಧ್ಯಕ್ಷ ಪ್ರಶಾಂತ್, ಜೆಡಿಎಸ್ ಟೌನ್ ಅಧ್ಯಕ್ಷ ಪ್ರಭು, ಅನಂತು ಭಾಗವಹಿಸಿದ್ದರು.

**ಹಲಗೂರು:** ವಿವಿಧ ಕನ್ನಡಪರ ಸಂಘಟನೆಗಳು, ರೈತಪರ ಒಕ್ಕೂಟಗಳು ಕರೆ ನೀಡಿದ್ದ ಹಲಗೂರು ಬಂದ್‌ಗೆ ಯಶಸ್ವಿಯಾಯಿತು. ವರ್ತಕರು, ಬೀದಿಬದಿಯ ವ್ಯಾಪಾರಿಗಳು, ಸ್ವಯಂಪ್ರೇರಿತವಾಗಿ ಅಂಗಡಿ ಮುಂಗಟ್ಟು ಮುಚ್ಚುವ ಮೂಲಕ ಬಂದ್‌ಗೆ ಸಹಕರಿಸಿದರು.

ಈ ವೇಳೆ ನವ ಕರ್ನಾಟಕ ಯುವಶಕ್ತಿ ಅಧ್ಯಕ್ಷ ಕುಮಾರ್, ಗಿರೀಶ್, ಸುರೇಂದ್ರ, ಕುಂತೂರು ಸೋಮಶೇಖರ್, ರಾಜು, ಬಾಲು, ವೆಂಕಟೇಶ್, ವಿಜಯ್, ಚಿಕ್ಕಣ್ಣ, ನಾಗೇಶ್, ಶ್ರೀನಿವಾಸ್ ಶಾಸ್ತ್ರಿ ಇತರರಿದ್ದರು.

# ಕಾವೇರಿ ವಿಚಾರದಲ್ಲಿ ಸುಪ್ರೀಂಕೋರ್ಟ್ ತೀರ್ಪು ಕಠೋರ

### ನೀರಾವರಿ ತಜ್ಞ ಅರ್ಜುನಹಳ್ಳಿ ಪ್ರಸನ್ನಕುಮಾರ್



ಮಂಡ್ಯ, ಸೆ.26– ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಸುಪ್ರೀಂಕೋರ್ಟ್ ಆದೇಶದಲ್ಲಿ ರಾಜ್ಯಕ್ಕೆ ಒಂದು ಹನಿ ನೀರನ್ನು ಮೀಸಲಿಟ್ಟಿಲ್ಲ. ತೀರ್ಪಿನಲ್ಲಿ ಕೇವಲ ನೀರನ್ನು ತಮಿಳುನಾಡಿಗೆ ಬಿಡುವಂತೆ ತಿಳಿಸಿದೆ ಇದೊಂದು ಕಠೋರ ತೀರ್ಪಾಗಿದ್ದು, ಇದರ ವಿರುದ್ಧ ಮೇಲ್ಮನವಿ ಸಲ್ಲಿಸುವಂತೆ ಆಗಿನ ಸರ್ಕಾರಕ್ಕೆ ತಿಳಿಸಿದ್ದೆ. ಆದರೆ ಎಲ್ಲಾ ಸರ್ಕಾರಗಳು ನಿರ್ಲಕ್ಷ್ಯ ವಹಿಸಿದ ಪರಿಣಾಮ ಇಂದು ನೀರು ಬಿಡಬೇಕಾದ ಪರಿಸ್ಥಿತಿ ಎದುರಾಗಿದೆ ಎಂದು ನೀರಾವರಿ ತಜ್ಞ ಅರ್ಜುನಹಳ್ಳಿ ಪ್ರಸನ್ನಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ನ್ಯಾಯ ಮಂಡಳಿ ಐತೀರ್ಪಿನ ವಿರುದ್ಧ 90 ದಿನಗಳು ಕಾಲಾವಕಾಶವಿತ್ತು. ಆಗಲೇ ಮೇಲ್ಮನವಿ ಸಲ್ಲಿಸಿ ಪುನರ್ ಪರಿಶೀಲಿಸುವಂತೆ ಮನವಿ ಮಾಡಿ ಎಂದು ಆಗಲೂ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದೆ. ಆದರೆ ಅವರು ನಿರ್ಲಕ್ಷ್ಯ ವಹಿಸಿದರು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ನದಿ ನೀರು ನಿಯಂತ್ರಣ ಸಮಿತಿಗಳೆರಡು ಅಸಿಂಧು. ಇವುಗಳ ರಚನೆಗೆ ವಿರೋಧ ವ್ಯಕ್ತಪಡಿಸಿ, ನಾಮನಿರ್ದೇಶನ ಮಾಡದಂತೆಯೂ ಮನವಿ ಮಾಡಿದ್ದೆ. ಆದರೆ ಇದರ ಬಗ್ಗೆ ಸರ್ಕಾರ ತಲೆಕೆಡಿಸಿಕೊಳ್ಳಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

> ರಾಜ್ಯದ ಪರ ವಾದ ಮಾಡುತ್ತಿದ್ದ ವಕೀಲ ಪಾಲಿ ನಾರಿಮನ್ ರಾಜ್ಯಕ್ಕೆ ಅನ್ಯಾಯ ಮಾಡುತ್ತಲೇ ಬಂದಿದ್ದರು. ತಮಿಳುನಾಡಿಗೆ ಅನುಕೂಲವಾಗುವಂತೆಯೇ ವಾದ ಮಂಡಿಸುತ್ತಿದ್ದರು. ಈ ಬಗ್ಗೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ, ಹೆಚ್.ಡಿ.ಕುಮಾರಸ್ವಾಮಿ ಹಾಗೂ ದೇವೇಗೌಡರ ಗಮನಕ್ಕೂ ತಂದಿದ್ದೆ. ಆದರೆ ಯಾರೂ ಸಹ ವಕೀಲರನ್ನು ಬದಲಾಯಿಸುವ ದಿಟ್ಟತನ ತೋರಲಿಲ್ಲ. ನಂತರ ಬಂದ ಬಿ.ಎಸ್.ಯಡಿಯೂರಪ್ಪ ಸಹ ಮೌನ ವಹಿಸಿದರು. ನಾರಿಮನ್‌ಗೆ ಎಲ್ಲ ಮಾಹಿತಿ ಗೊತ್ತಿದೆ ಎಂದು ಹೇಳುತ್ತಿದ್ದರು. ಆತ ಮಾಡುತ್ತಿದ್ದ ಅನ್ಯಾಯ ಮಾತ್ರ ಕಾಣಿಸಲಿಲ್ಲ. ಆತ ಯಾವ ರೀತಿ ಅನ್ಯಾಯ ಮಾಡಿದ್ದಾನೆ ಎಂಬುದನ್ನು ಒಂದು ಪುಸ್ತಕವನ್ನೇ ಬರೆದಿದ್ದೇನೆ.
> – ಪ್ರಸನ್ನಕುಮಾರ್, ನೀರಾವರಿ ತಜ್ಞ

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ನದಿ ನೀರು ನಿಯಂತ್ರಣ ಸಮಿತಿಗಳಿಗೆ ರಾಜ್ಯದ ನಾಮ ನಿರ್ದೇಶನ ಮಾಡಿದ್ದರಿಂದ ಕಾವೇರಿ ನ್ಯಾಯ ಮಂಡಳಿ ತೀರ್ಪನ್ನು ಒಪ್ಪಿಕೊಂಡಂತಾಯಿತು. ಈಗ ಪ್ರಾಧಿಕಾರ ನೀಡುವ ಆದೇಶವನ್ನೇ ಸುಪ್ರೀಂಕೋರ್ಟ್ ಮಾನ್ಯ ಮಾಡುತ್ತಿದೆ. ಪ್ರಾಧಿಕಾರದ ಕಚೇರಿ ಬೆಂಗಳೂರಿನಲ್ಲಿದ್ದು, ರಾಜ್ಯದ ಜಲಾಶಯಗಳ ಮಾಹಿತಿ ಪಡೆದುಕೊಳ್ಳಲಾಗುತ್ತಿದೆ. ಅದರ ಆಧಾರದ ಮೇಲೆಯೇ ಪ್ರಾಧಿಕಾರ, ಸಮಿತಿಗಳು ನೀರು ಹರಿಸುವಂತೆ ಆದೇಶ ನೀಡುತ್ತಿವೆ. ಇದೇ ರೀತಿ ಪಂಜಾಬ್ ಹಾಗೂ ಹರಿಯಾಣ ನಡುವೆ ಜಲವಿವಾದವಿದೆ. ಆದರೆ ಪಂಜಾಬ್ ಇದುವರೆಗೂ ಪ್ರಾಧಿಕಾರ ಹಾಗೂ ಸಮಿತಿ ರಚನೆಗೆ ವಿರೋಧ ವ್ಯಕ್ತಪಡಿಸುತ್ತಲೇ ಬಂದಿದೆ. ಯಾವ ತೀರ್ಪು ಬಂದರೂ ಅವರು ನೀರು ಬಿಡಲ್ಲ. ಅವರ ವಾದವೇ ರಾಷ್ಟ್ರೀಯ ಜಲ ನೀತಿ ರೂಪಿಸುವಂತೆ ಆಗ್ರಹಿಸುತ್ತಿದ್ದಾರೆ. ಆ ಒಂದು ದಿಟ್ಟತನ ಆಗಿನ ನಮ್ಮ ರಾಜ್ಯ ಸರ್ಕಾರ ತೋರಬೇಕಿತ್ತು ಎಂದು ತಿಳಿಸಿದರು.

ಕಾವೇರಿ ನ್ಯಾಯ ಮಂಡಳಿ ನೀಡಿದ ಐತೀರ್ಪಿನ ವಿರುದ್ಧ ರಾಜ್ಯದ ಪರ ವಾದ ಮಾಡುತ್ತಿದ್ದ ವಕೀಲ ಫಾಲಿ ನಾರಿಮನ್ ಮೇಲ್ಮನವಿ ಸಲ್ಲಿಸಲಿಲ್ಲ. ಇದೇ ತಮಿಳುನಾಡಿಗೆ ಸಹಾಯವಾಗಿದೆ. ತಮಿಳುನಾಡಿನವನಾದ ಈತ ರಾಜ್ಯದ ಪರ ಇರದೆ ತಮಿಳುನಾಡಿಗೆ ಅನುಕೂಲ ಮಾಡಿಕೊಟ್ಟ, ಈ ಅನ್ಯಾಯದ ಬಗ್ಗೆ ದೇವೇಗೌಡರು, ಕುಮಾರಸ್ವಾಮಿ, ಸಿದ್ದರಾಮಯ್ಯ ಅವರಿಗೂ ತಿಳಿಸಿದ್ದೆ. ಆದರೆ ಇವರು ಕೇಳಲಿಲ್ಲ. ತೀರ್ಪಿನಲ್ಲಿ ನೀರು ಹಂಚಿಕೆ ಮಾಡಲಾಗಿದೆ. ಅದರಂತೆ ರಾಜ್ಯದ ಪಾಲಿನ ನೀರನ್ನು ಬಳಸುವಂತೆ ಎಲ್ಲಿಯೂ ಹೇಳಿಲ್ಲ ಕೇವಲ ತಮಿಳುನಾಡಿಗೆ ಹರಿಸುವಂತೆ ತಿಳಿಸಿದೆ. ಸಂಕಷ್ಟ ಬಂದಾಗ ಸಮಾನವಾಗಿ ಹಂಚಿಕೆ ಮಾಡಿಕೊಳ್ಳುವಂತೆ ತಿಳಿಸಿದೆ. ಆದರೆ ಯಾವ ಮಾನದಂಡದ ಮೇಲೆ ಹಂಚಿಕೆ ಮಾಡಬೇಕು ಎಂಬುದು ಇಲ್ಲ. ಈ ಐತೀರ್ಪನ್ನೇ ಸುಪ್ರೀಂಕೋರ್ಟ್ ಸಹ ಅನುಮೋದನೆ ನೀಡಿದೆ. ಇದರಿಂದ ನಮ್ಮ ಪಾಲಿನ ನೀರನ್ನು ಬಳಸಲು ಸಾಧ್ಯವಾಗುತ್ತಿಲ್ಲ ಎಂದು ವಿವರಿಸಿದರು.

ಪ್ರಸ್ತುತ ಮಳೆ ಪ್ರಮಾಣ ಹಾಗೂ ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿರುವ ಮಾಹಿತಿ ಸರ್ಕಾರಕ್ಕೆ ಇತ್ತು. ಮೊದಲ ಬಾರಿ ಪ್ರಾಧಿಕಾರ ನೀರು ಬಿಡುವಂತೆ ಆದೇಶ ನೀಡಿದಾಗಲೇ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿ ಪ್ರಶ್ನಿಸಬೇಕಾಗಿತ್ತು. ಮಳೆ ಇಲ್ಲ, ಬೆಳೆ ಇದ್ದು, ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಡಿಮೆ ಇದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಲಿದೆ. ಇಷ್ಟೆಲ್ಲ ಸಮಸ್ಯೆಗಳಿದ್ದರೂ ಯಾವ ಮಾನದಂಡದ ಮೇಲೆ ನೀರು ಹರಿಸುವಂತೆ ಆದೇಶ ಮಾಡುತ್ತೀರಾ ಎಂದು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೊದಲೇ ಹೋಗಿ ತಡೆಯಾಜ್ಞೆ ತರಬೇಕಾಗಿತ್ತು. ಆದರೆ ಸರ್ಕಾರ ಯಾವುದನ್ನೂ ಮಾಡದೆ ನಿರ್ಲಕ್ಷ್ಯ ವಹಿಸಿದ ಪರಿಣಾಮ ಇಂದು ನೀರು ಹರಿಸಬೇಕಾಗಿದೆ ಎಂದು ಹೇಳಿದರು.

ಐತೀರ್ಪಿನಲ್ಲಿ ಸಂಕಷ್ಟ ಸೂತ್ರದಲ್ಲಿ ಸಮಾನವಾಗಿ ಹಂಚಿಕೆ ಮಾಡಿಕೊಳ್ಳಿ ಎಂದು ತಿಳಿಸಿದೆ. ಆದರೆ ಪ್ರಾಧಿಕಾರ ಹಾಗೂ ಸಮಿತಿಗೆ ಆದೇಶ ಜಾರಿ ಮಾಡುವುದಷ್ಟೇ ಅಧಿಕಾರ ಇದೆ. ಆದರೆ ಯಾವ ಆಧಾರ ಹಾಗೂ ಮಾನದಂಡಗಳೇನು ಎಂಬುದರ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲ. ಇದರಿಂದ ತಮಿಳುನಾಡು ಕೇಳಿದ ತಕ್ಷಣ ಪ್ರಾಧಿಕಾರ ಆದೇಶ ನೀಡುತ್ತಿದೆ. ಇದರಿಂದ ರಾಜ್ಯಕ್ಕೆ ಅನ್ಯಾಯವಾಗುತ್ತಲೇ ಇದೆ ಎಂದರು.

ಗೋಷ್ಠಿಯಲ್ಲಿ ಮುಖಂಡರಾದ ಎಂ.ಎಸ್.ರಮೇಶ್, ಸುಬ್ರಮಣಿ, ಲಿಂಗೇಗೌಡ, ಗಿರೀಶ್, ಶಿವಕುಮಾರ್ ಇದ್ದರು.

# ಹೋರಾಟ ಬೆಂಬಲಿಸಿ ವಕೀಲರಿಂದ ಕಲಾಪ ಬಹಿಷ್ಕಾರ



ಶ್ರೀರಂಗಪಟ್ಟಣ, ಸೆ.26– ತಮಿಳುನಾಡಿಗೆ ನೀರು ಹರಿಸುವಂತೆ ಸುಪ್ರೀಂಕೋರ್ಟ್ ಆದೇಶ ಖಂಡಿಸಿ ಪಟ್ಟಣದ ವಕೀಲರ ಸಂಘದ ಪದಾಧಿಕಾರಿಗಳು ಮಂಗಳವಾರ ನ್ಯಾಯಾಲಯದ ಕಲಾಪ ಬಹಿಷ್ಕರಿಸಿ ಕಾವೇರಿ ಹೋರಾಟಕ್ಕೆ ಬೆಂಬಲ ಸೂಚಿಸಿದರು. ತಾಲೂಕು ವಕೀಲರ ಸಂಘದ ಅಧ್ಯಕ್ಷ ಸತ್ಯನಾರಾಯಣ ಹಾಗೂ ಕಾರ್ಯದರ್ಶಿ ಚಂದ್ರೇಗೌಡರ ನೇತೃತ್ವದಲ್ಲಿ ವಕೀಲರ ಸಂಘದ ಆವರಣದಲ್ಲಿ ಜಮಾಯಿಸಿದ ಪದಾಧಿಕಾರಿಗಳು ಕಾವೇರಿ ಹೋರಾಟ ಬೆಂಬಲಿಸಿ ಕಲಾಪದಿಂದ ದೂರ ಉಳಿದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ವಕೀಲರ ಸಂಘದ ಮಾಜಿ ಅಧ್ಯಕ್ಷರಾದ ಕೆ.ಕುಮಾರ್, ಎ.ಕುಮಾರ್, ಹಿರಿಯ ವಕೀಲರಾದ ವೆಂಕಟೇಶ್, ಜಯಸ್ವಾಮಿ, ಸಿದ್ದರಾಜು, ನವೀನ್, ಪುಲಿಕೇಶಿ ಇತರರಿದ್ದರು.

# ಸರಗೂರಲ್ಲಿ ಡಾ.ರಾಜೇಂದ್ರ ಶ್ರೀಗಳ ಜಯಂತ್ಯುತ್ಸವ

**ಅಸಮಾನತೆ, ಬಡತನ, ಅನಕ್ಷರತೆ ಹೋಗಲಾಡಿಸಲು ಶ್ರಮಿಸಿದ ಶ್ರೀಗಳು**



ಸರಗೂರು, ಸೆ.26– ಸುತ್ತೂರು ಮಠ ನಾಡಿನ ಪ್ರಸಿದ್ಧ ಮಠಗಳಲ್ಲಿ ಒಂದಾಗಿದ್ದು, ಸಾಮಾಜಿಕ ಪ್ರಗತಿಯಲ್ಲಿ ಮಹತ್ವದ ಕೊಡುಗೆ ನೀಡಿದೆ ಎಂದು ವಾಟಾಳು ಸೂರ್ಯ ಸಿಂಹಾಸನ ಮಠದ ಶ್ರೀಸಿದ್ದಲಿಂಗ ಶಿವಾಚಾರ್ಯ ಸ್ವಾಮಿ ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದಿಂದ ಶಾಲಾ ಆವರಣದಲ್ಲಿ ನಡೆದ ಡಾ.ರಾಜೇಂದ್ರ ಮಹಾಸ್ವಾಮೀಜಿಯವರ 108ನೇ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಧರ್ಮ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಪೋಷಕರಾಗಿದ್ದರು. ಸಮಾಜದಲ್ಲಿನ ಅಸಮಾನತೆ, ಬಡತನ ಮತ್ತು ಅನಕ್ಷರತೆ ಹೋಗಲಾಡಿಸಲು ಸ್ವಾಮಿಗಳು ತಮ್ಮನ್ನೇ ತೊಡಗಿಸಿಕೊಂಡವರು. ಅವರ ಆದರ್ಶ ಇಂದಿನ ವಿದ್ಯಾರ್ಥಿಗಳಿಗೆ ಪ್ರೇರಣೆ ಎಂದರು.

ವಿಶ್ರಾಂತ ಉಪನಿರ್ದೇಶಕ ಸ್ವಾಮಿ ಮಾತನಾಡಿ, ಸಾಮಾಜಿಕ, ಆರ್ಥಿಕ ಬದಲಾವಣೆ ಮಾಡುವ ಮೂಲಕ ಸಮಾಜವನ್ನು ಸ್ವಾವಲಂಬಿಯನ್ನಾಗಿ ಮಾಡಲು ಜೆಎಸ್‌ಎಸ್ ಮಹಾವಿದ್ಯಾಪೀಠ ಹಲವಾರು ಕೊಡುಗೆ ನೀಡುತ್ತಾ ಬಂದಿದೆ. ವಿದ್ಯಾರ್ಥಿಗಳ ಶಿಕ್ಷಣದ ಜ್ಞಾನೋದಯಕ್ಕಾಗಿ ಶಿಕ್ಷಕರ ಪಾತ್ರ ಹೇಗೆ ಕರ್ತವ್ಯ ನಿರ್ವಹಿಸಬೇಕು ಎಂಬುದನ್ನು ತೋರಿಸಿಕೊಟ್ಟವರು. ವಸತಿ ಆರೋಗ್ಯ ಶಿಕ್ಷಣವೇ ಶಕ್ತಿ ಎಂದು ವಿಶ್ವಕ್ಕೆ ಪರಿಚಯಿಸಿದವರು, ಗ್ರಾಮೀಣ ಭಾಗದ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂದು ಗ್ರಾಮೀಣ ಭಾಗಗಳಲ್ಲಿ ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಿದರು. ಇಂದು ಅವುಗಳು ಹೆಮ್ಮರವಾಗಿ ಬೆಳೆದಿವೆ ಎಂದರು.

ಹಂಚೀಪುರ ಮಠದ ಚನ್ನಬಸವಸ್ವಾಮಿ, ದಡದಹಳ್ಳಿ ಪಟ್ಟದ ಮಠದ ಷಡಕ್ಷರಸ್ವಾಮಿ, ಪಡವಲು ವಿರಕ್ತ ಮಠದ ಮಹದೇವಸ್ವಾಮಿ, ಕಿರಿಯ ತೋಂಟದಾರ್ಯಸ್ವಾಮಿ, ಆಶೀರ್ವಚನ ನೀಡಿದರು, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಡಿ.ಜಿ.ಶಿವರಾಜು, ಸತ್ಯ ಸಾಯಿಬಾಬಾ ಜ್ಯೂನಿಯರ್ ಕಾಲೇಜು ಮೈಸೂರು ಪ್ರಾಂಶುಪಾಲ ತ್ರಿಮೂರ್ತಿ ಮಾತನಾಡಿದರು.

ಜೆಎಸ್‌ಎಸ್ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ಸುಧಾ, ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿದರು. ಇದಕ್ಕೂ ಮುನ್ನ ಶ್ರೀಗಳ ಪುತ್ಥಳಿಯನ್ನು ಬೆಳ್ಳಿ ರಥದಲ್ಲಿ ಮೆರವಣಿಗೆ ಮಾಡಲಾಯಿತು.

ವೀರಶೈವ ತಾಲೂಕು ಅಧ್ಯಕ್ಷ ಡಿ.ಜಿ.ಶಿವರಾಜು, ಎಸ್.ಎನ್.ಮೋಹನ್ ಕುಮಾರ್, ಗುರುಸ್ವಾಮಿ, ಜೆಎಸ್‌ಎಸ್ ಮುಖ್ಯ ಶಿಕ್ಷಕರಾದ ಅಂಜಮನ್ ಪಾಷ, ಗಂಗಾಧರಯ್ಯ, ಮಹದೇವಸ್ವಾಮಿ, ಕೃಷ್ಣಮೂರ್ತಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಕಾವೇರಿ ಹೋರಾಟಕ್ಕೆ ವೃತ್ತಿಪರ ಛಾಯಾಗ್ರಾಹಕರ ಬೆಂಬಲ



ಮಂಡ್ಯ, ಸೆ.26– ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ರೈತರಿಗೆ ನಿರಂತರ ಅನ್ಯಾಯವಾಗುತ್ತಿರುವುದನ್ನು ವಿರೋಧಿಸಿ ವೃತ್ತಿಪರ ಛಾಯಾಗ್ರಾಹಕರು ಮಂಗಳವಾರ ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮಾಂಡವ್ಯ ವೃತ್ತಿಪರ ಛಾಯಾಚಿತ್ರ ಗ್ರಾಹಕರ ಸಂಘದ ಆಶ್ರಯದಲ್ಲಿ ಸ್ಟುಡಿಯೋಗಳನ್ನು ಬಂದ್ ಮಾಡಿ ಕಾವೇರಿ ಹೋರಾಟಕ್ಕೆ ವೃತ್ತಿಪರ ಛಾಯಾಗ್ರಾಹಕರು ಬೆಂಬಲ ಸೂಚಿಸಿದರು.

ನಗರದ ಸಿಲ್ವರ್‌ಜ್ಯೂಬಿಲಿ ಪಾರ್ಕ್‌ನಿಂದ ಮೆರವಣಿಗೆ ಹೊರಟು ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಬಳಿಕ ಹಿತ ರಕ್ಷಣಾ ಸಮಿತಿ ಸರ್‌ಎಂವಿ ಪುತ್ಥಳಿ ಮುಂದೆ ನಡೆಸುತ್ತಿರುವ ಹೋರಾಟದ ಸ್ಥಳಕ್ಕೆ ತೆರಳಿ ಬೆಂಬಲ ಸೂಚಿಸಿದರು. ಕಾವೇರಿ ವಿಚಾರದಲ್ಲಿ ರೈತರಿಗೆ ಸತತವಾಗಿ ಅನ್ಯಾಯವಾಗುತ್ತಿದ್ದು, ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಸುಪ್ರೀಂಕೋರ್ಟ್ ತೀರ್ಪು ಮಾರಕವಾಗಿದೆ. ಮಳೆ ಕೊರತೆಯಿಂದ ಕಾವೇರಿ ಕೊಳ್ಳದ ಜಲಾಶಯಗಳಲ್ಲಿ ನೀರಿನ ಲಭ್ಯತೆ ಕಡಿಮೆ ಇದೆ. ಆದರೂ ಸಹ ತಮಿಳುನಾಡಿಗೆ ನೀರು ಹರಿಸುತ್ತಿರುವುದು ರೈತರಿಗೆ ಮಾಡಿದ ದ್ರೋಹವಾಗಿದೆ ಎಂದು ಹೇಳಿದರು. ರೈತರು ದೇಶದ ಬೆನ್ನೆಲುಬು ರೈತರ ಹಿತ ಕಾಪಾಡುವುದು ಸರ್ಕಾರದ ಆದ್ಯ ಕರ್ತವ್ಯ, ಹಾಗಾಗಿ ಕೃಷ್ಣರಾಜಸಾಗರದಿಂದ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ತಕ್ಷಣ ಸ್ಥಗಿತ ಮಾಡಬೇಕು. ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ದೃಢ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಸಂಘದ ಅಧ್ಯಕ್ಷ ಉಮೇಶ್, ಉಪಾಧ್ಯಕ್ಷ ಕಾರ್ತಿಕ್, ಪದಾಧಿಕಾರಿಗಳಾದ ವಿನೋದ್, ರೂಬಿನ್, ಮಹೇಶ್, ಲಕ್ಷ್ಮಣ್ ಪಟೇಲ್, ಬಾಬು, ಜಗದೀಶ್, ಬಾಲು, ಮಧುಚಂದ್ರ ಭಾಗವಹಿಸಿದ್ದರು.

## ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

ಮಂಡ್ಯ, ಸೆ.26– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ (ವೃತ್ತಿಪರ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಮತ್ತು ಪ.ಜಾ/ಪ.ವರ್ಗ ಸೇರಿದ ವಿದ್ಯಾರ್ಥಿಗಳಿಂದ 2023–24ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು https://shp.karnataka.gov.in ಅನ್ನು ಸಂಪರ್ಕಿಸಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಅ.11ಕೊನೆ ದಿನ ಎಂದು ಪ್ರಕಟಣೆ ತಿಳಿಸಿದೆ.

### ತಿ.ನರಸೀಪುರದಲ್ಲಿ 'ದಕ್ಷಯಜ್ಞ' ನಾಟಕ ಪ್ರದರ್ಶನ

# ರಂಗಭೂಮಿ ಕಲಾವಿದರಿಗೆ ಸೌಲಭ್ಯ ಕಲ್ಪಿಸಿ



ತಿ.ನರಸೀಪುರ ಸೆ.26– ರಂಗಭೂಮಿ ಕಲಾವಿದರಿಗೆ ಸರ್ಕಾರ ಸೌಲಭ್ಯ ಕಲ್ಪಿಸಬೇಕು ಎಂದು ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಹೇಳಿದರು. ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಆವರಣದಲ್ಲಿ ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಖಾಸಗಿ ಬಸ್ ಮಾಲೀಕರ ಸಹಕಾರದೊಂದಿಗೆ ಏಜೆಂಟರ ಸಂಘದಿಂದ 28ನೇ ವರ್ಷದ ಶ್ರೀ ಗಣಪತಿ ಪ್ರತಿಷ್ಠಾಪನೆ ಮಹೋತ್ಸವದ ಪ್ರಯುಕ್ತ ನಡೆದ ದಕ್ಷಯಜ್ಞ ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಂಗಭೂಮಿ ಕಲೆ ನಾಡಿನ ಜನರ ಜೀವನಾಡಿ ಆಗಿರುವುದರಿಂದ ಕಲಾವಿದರಿಗೆ ಸರ್ಕಾರದ ನೆರವು ಅಗತ್ಯವಾಗಿದೆ ಎಂದರು.

ತಾ.ಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ಬಸ್ ಏಜೆಂಟ್ ವೃತ್ತಿಯನ್ನು ಮಾಡುತ್ತಾ ಜೀವನ ನಡೆಸುತ್ತಿರುವ ಖಾಸಗಿ ಬಸ್ ಏಜೆಂಟರುಗಳು ಪ್ರತಿ ವರ್ಷವೂ ಗೌರಿ–ಗಣೇಶ ಹಬ್ಬವನ್ನು ಮಹೋತ್ಸವದಂತೆ ಆಚರಿಸಿ ಪಟ್ಟಣದ ನಿವಾಸಿಗಳು ಮತ್ತು ಪ್ರಯಾಣಿಕರಿಗೆ ಸಾಂಸ್ಕೃತಿಕ ಮತ್ತು ಮನರಂಜನೆ ಕಾರ್ಯಕ್ರಮಗಳನ್ನು ಬಸ್ ಮಾಲೀಕರ ಸಹಕಾರದಿಂದ ಆಯೋಜಿಸುತ್ತಿದ್ದಾರೆ. ಜೀವನದ ನಡುವೆ ಇವರ ಸೇವಾ ಕಾರ್ಯಕ್ರಮಗಳು ಹೀಗೆಯೇ ಮುಂದುವರಿಯಲಿ ಎಂದು ಹಾರೈಸಿದರು.

ನಂತರ ಶ್ರೀ ಮಲೈ ಮಹದೇಶ್ವರ ಕಲಾ ಮಂಡಳಿಯ ತಂಡವರಿಂದ ದಕ್ಷಯಜ್ಞ ಎಂಬ ಪೌರಾಣಿಕ ನಾಟಕ ನಡೆಯಿತು. ಜಿ.ಪಂ ಮಾಜಿ ಸದಸ್ಯ ಹೊನ್ನನಾಯಕ, ಏಜೆಂಟರ ಸಂಘದ ಪ್ರಧಾನ ಕಾರ್ಯದರ್ಶಿ ರಾಜಣ್ಣ, ಗ್ರಾಪಂ ಮಾಜಿ ಸದಸ್ಯ ಉಕ್ಕಲಗೆರೆ ಎಂ.ರಾಜು, ಏಜೆಂಟರಾದ ಶ್ರೀನಿವಾಸ್, ರಮೇಶ್, ರಾಜು, ಮುಖಂಡ ಪುಟ್ಟೇಗೌಡನಹುಂಡಿ ಶಿವಣ್ಣ ಹಾಗೂ ಇನ್ನಿತರರು ಹಾಜರಿದ್ದರು.

# ಗ್ರಾಮೀಣ ಕ್ರೀಡೆಗಳಲ್ಲಿ ತೊಡಗಿ ಆರೋಗ್ಯ ಕಾಪಾಡಿಕೊಳ್ಳಿ

ನಂಜನಗೂಡು, ಸೆ.26– ಯುವಕರು ಆರೋಗ್ಯವನ್ನು ಹಾಳು ಮಾಡುವ ಚಟಗಳಿಗೆ ಬಲಿಯಾಗದೆ ಗ್ರಾಮೀಣ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ತಮ್ಮ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಬಿಜೆಪಿ ಓಬಿಸಿ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಹೆಮ್ಮರಗಾಲ ಸೋಮಣ್ಣ ತಿಳಿಸಿದರು.

ತಾಲೂಕಿನ ಹೆಮ್ಮರಗಾಲ ಗ್ರಾಮದಲ್ಲಿ ಭಾನುವಾರ ಗ್ರಾಮದೇವತೆ ಮಾಲರಸಮ್ಮ ಹಬ್ಬದ ಪ್ರಯುಕ್ತ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಹಿಂದೆ ಹಳ್ಳಿಗಳಲ್ಲಿ ಗ್ರಾಮೀಣ ಕ್ರೀಡೆಗಳನ್ನು ಸುಗ್ಗಿಯ ನಂತರದ ಹಬ್ಬಗಳಲ್ಲಿ ಆಯೋಜನೆಗೊಳಿಸಲಾಗುತ್ತಿತ್ತು ಎಂದರು.

ಈಚೆಗೆ ಯುವಕರು ಕ್ರಿಕೆಟ್ ಮುಂತಾದ ವಿದೇಶಿ ಕ್ರೀಡೆಗಳ ಕಡೆಗೆ ಹೆಚ್ಚಿನ ಗಮನಹರಿಸಿದ್ದರಿಂದ ಗ್ರಾಮೀಣ ಕ್ರೀಡೆಗಳು ಕಡೆಗಣಿಸಲ್ಪಡುತ್ತಿವೆ. ಅಲ್ಲದೆ ಯುವಕರು ಹೆಚ್ಚಾಗಿ ಮೊಬೈಲ್ ಬಳಕೆಗೆ ಮುಂದಾಗಿ ದೈಹಿಕ ಕಸರತ್ತು ನಡೆಸುವಂತಹ ದೇಶಿ ಕ್ರೀಡೆಗಳನ್ನು ಮರೆಯುತ್ತಿದ್ದಾರೆ. ಆದ್ದರಿಂದ ಯುವಕರು ತಮ್ಮ ದೈಹಿಕ ಸಾಮರ್ಥ್ಯ, ಮಾನಸಿಕ ದೃಢತೆ ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಕಬಡ್ಡಿ, ವಾಲಿಬಾಲ್ ಮುಂತಾದ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ಇದೇ ಸಂದರ್ಭದಲ್ಲಿ ರಂಗಸ್ವಾಮಿ, ಶಿವು, ಮಹಾದೇವಸ್ವಾಮಿ, ಆನಂದ, ವೆಂಕಟರಾಮು, ಮಾದಸ್ವಾಮಿ, ಸಿದ್ದರಾಜು, ಮಹೇಶ್, ರಾಜೇಶ್, ಅಭಿ, ಗೋಪಾಲ ಸೇರಿದಂತೆ ಹಲವಾರು ಪ್ರಮುಖರು ಇದ್ದರು.



ಮೈಸೂರು ಮಿತ್ರ


# ಪ್ರೊಬೆಷನರಿ ಪೊಲೀಸ್, ಅಬಕಾರಿ ಉಪಾಧೀಕ್ಷಕರ ನಿರ್ಗಮನ ಪಥಸಂಚಲನ





ಮೈಸೂರು,ಸೆ.26(ಎಸ್‌ಬಿಡಿ)– ಸಮಾಜದ ಸುರಕ್ಷತೆಗಾಗಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರೊಬೆಷನರಿ ಡಿವೈಎಸ್ಪಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ(ಕೆಪಿಎ) ಕವಾಯತು ಮೈದಾನದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ 37ನೇ ತಂಡದ ಪ್ರೊಬೆಷನರಿ ಪೊಲೀಸ್ ಉಪಾಧೀಕ್ಷಕ(ಸಿವಿಲ್) ಮತ್ತು ಅಬಕಾರಿ ಉಪಾಧೀಕ್ಷಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನದಲ್ಲಿ ಗೌರವ ವಂದನೆ ಸ್ವೀಕರಿಸಿ, ಅತ್ಯುತ್ತಮ ಪ್ರಶಿಕ್ಷಣಾರ್ಥಿಗಳಿಗೆ ಬಹುಮಾನ ವಿತರಿಸಿ, ಮಾತನಾಡಿದರು.

ಶಾಂತಿ–ಸುವ್ಯವಸ್ಥೆ ಇಲ್ಲದ ಸಮಾಜ, ರಾಜ್ಯ, ದೇಶ ಪ್ರಗತಿಪಥದಲ್ಲಿ ಸಾಗಲು ಸಾಧ್ಯವೇ ಇಲ್ಲ. ಸುಸ್ಥಿರ ಸಮಾಜ ನಿರ್ಮಾಣ ನಮ್ಮೆಲ್ಲರ ಜವಾಬ್ದಾರಿ. ಈ ನಿಟ್ಟಿನಲ್ಲಿ ನಾಡು, ದೇಶದ ಅಭಿವೃದ್ಧಿಗೆ ಪೂರಕವಾದ ಕಾನೂನು ಸುವ್ಯವಸ್ಥೆ ಕಾಪಾಡಬೇಕಿದೆ. ತರಬೇತಿ ಪೂರೈಸಿ ಸೇವೆಗೆ ಸಿದ್ಧರಾಗಿರುವ ನೀವು ಸಮಾಜದ ಸುರಕ್ಷತೆಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಜನರ ಋಣ ತೀರಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಯಜಮಾನರು. ಜನ ಆಯ್ಕೆ ಮಾಡುವ ಜನಪ್ರತಿನಿಧಿಗಳಿಂದ ರಚನೆಯಾಗುವ ಸರ್ಕಾರ, ಅಧಿಕಾರಿಗಳನ್ನು ನೇಮಕ ಮಾಡುತ್ತದೆ. ಹಾಗಾಗಿ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಜನ ಸೇವಕರು ಎನ್ನುವುದನ್ನು ಮರೆಯಬಾರದು. ಸಾರ್ವಜನಿಕ ಜೀವನದಲ್ಲಿ ತುಂಬಾ ಜಾಗೃತರಾಗಿರಬೇಕು. ಮುಖ್ಯವಾಗಿ ಪೊಲೀಸರು ಜನಸ್ನೇಹಿಗಳಾಗಿರಬೇಕು. ಜನರ ಕಷ್ಟ–ಸುಖ ಆಲಿಸಲು ತಾಳ್ಮೆ ಇರಬೇಕು. ಸಮಸ್ಯೆಗಳಿಗೆ ಪರಿಹಾರ ಹುಡುಕುವ ವ್ಯವದಾನ ಬೇಕು. ಕಾನೂನಿನಡಿ ಪ್ರಾಮಾಣಿಕವಾಗಿ ಜವಾಬ್ದಾರಿ ನಿರ್ವಹಿಸುವ ಮೂಲಕ ಜನರ ವಿಶ್ವಾಸ ಗಳಿಸಬೇಕು. ಸಾರ್ವಜನಿಕ ಸೇವೆಗೆ ಈ ಎಲ್ಲಾ ಅರ್ಹತೆಗಳು ಮುಖ್ಯವಾಗಿರಬೇಕು ಎಂದು ಹೇಳಿದರು.

**ಹಕ್ಕು ರಕ್ಷಿಸಬೇಕು:** ಪ್ರತಿಯೊಬ್ಬರಿಗೂ ಜೀವಿಸುವ ಹಕ್ಕಿದೆ. ಯಾರ ಹಕ್ಕಿಗೂ ಧಕ್ಕೆಯಾಗಬಾರದು. ಯಾರ ಮೇಲೂ ದೌರ್ಜನ್ಯ ನಡೆಯಬಾರದು. ಹಕ್ಕು ಕಸಿಯುವ ಪರಿಸ್ಥಿತಿ ನಿರ್ಮಾಣವಾಗಬಾರದು. ಇದಕ್ಕೆ ಪೊಲೀಸರು ಆಸ್ಪದ ನೀಡಬಾರದು. ಸಮಾಜದಲ್ಲಿ ಅಸಮಾನತೆ ಹಿಂದೆಯೂ ಇತ್ತು, ಇಂದೂ ಇದೆ, ಮುಂದೆಯೂ ಇರಬಹುದು. ಹಾಗಾಗಿ ಎಲ್ಲರೂ ಗೌರವ, ಸ್ವಾಭಿಮಾನದಿಂದ ಬದುಕುವ ವಾತಾವರಣ ನಿರ್ಮಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.

**ಸವಾಲು ಎದುರಿಸಿ:** ಪೊಲೀಸ್ ಸೇವೆಯಲ್ಲಿ ಕ್ಲಿಷ್ಟ ಸನ್ನಿವೇಶ ಹಾಗೂ ಸವಾಲುಗಳು ಎದುರಾಗುತ್ತವೆ. ಅಂತಹ ಸಂದರ್ಭವನ್ನೂ ತಾಳ್ಮೆಯಿಂದ ನಿರ್ವಹಿಸಬೇಕು. ಜಾತಿ ಹೆಸರಲ್ಲಿ ದೌರ್ಜನ್ಯ ನಡೆದಿದೆ ಎನ್ನಲಾದ ಪ್ರಕರಣಗಳಲ್ಲಿ ಶಿಕ್ಷೆಯಾಗಿರುವುದು ಶೇ.3.5ರಷ್ಟು ಪ್ರಕರಣಗಳಲ್ಲಿ ಮಾತ್ರ. ಇಂತಹ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸಬೇಕು. ತಪ್ಪು ಮಾಡಿದವರಿಗೆ ಕಾನೂನಾತ್ಮಕವಾಗಿ ಶಿಕ್ಷೆಯಾಗದಿದ್ದರೆ ಮತ್ತೆ ಮತ್ತೆ ತಪ್ಪು ಮಾಡುತ್ತಾರೆ. ಅಂತಹವರೊಂದಿಗೆ ಪೊಲೀಸರು ನಿಷ್ಠೂರವಾಗಿ ನಡೆದುಕೊಳ್ಳಬೇಕು. ಇತ್ತೀಚಿನ ವರ್ಷಗಳಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ ದ್ವೇಷದ ಭಾಷಣ, ಸುಳ್ಳು ಸುದ್ದಿ ಹರಡುವುದು, ವ್ಯಕ್ತಿಗಳ ಚಾರಿತ್ರ್ಯಹರಣ ಕೃತ್ಯಗಳು ವ್ಯಾಪಕವಾಗುತ್ತಿವೆ. ಹೀಗೆ ಸಮಾಜದ ಸ್ವಾಸ್ಥ್ಯ ಹಾಳು ಮಾಡುವವರು ಎಷ್ಟೇ ಬಲಾಢ್ಯರಾಗಿದ್ದರೂ, ಅವರಿಗೆ ರಾಜಕೀಯ ಕುಮ್ಮಕ್ಕಿದ್ದರೂ ಸುಮ್ಮನೆ ಬಿಡಬಾರದು. ಎದುರಾಗುವ ಸವಾಲುಗಳನ್ನು ಮೆಟ್ಟಿನಿಂತು ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

**ಪ್ರತಿಷ್ಠಿತ ಕೆಪಿಎ:** ಕರ್ನಾಟಕ ಪೊಲೀಸ್ ಅಕಾಡೆಮಿ ಒಂದು ಪ್ರತಿಷ್ಠಿತ ತರಬೇತಿ ಸಂಸ್ಥೆ. ಪೊಲೀಸ್, ಅಬಕಾರಿ ಹಾಗೂ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ತರಬೇತಿ ನೀಡಿ, ಸಾರ್ವಜನಿಕ ಸೇವೆಗೆ ಸಜ್ಜುಗೊಳಿಸುತ್ತಿದೆ. ಪ್ರಶಿಕ್ಷಣಾರ್ಥಿಗಳಿಗೆ ದೇಹದಾರ್ಢ್ಯ ಸಾಮರ್ಥ್ಯದ ತರಬೇತಿ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ಜಾಗೃತಗೊಳಿಸಲಾಗುತ್ತಿದೆ. ನೂತನ ಡಿವೈಎಸ್ಪಿಗಳ ನಿರ್ಗಮನ ಪಥಸಂಚಲನದಲ್ಲಿ ಭಾಗವಹಿಸಿದ್ದು ಸಂತಸ ತಂದಿದೆ ಎಂದರು. ಪೊಲೀಸ್ ಮಹಾನಿರ್ದೇಶಕ (ತರಬೇತಿ) ಡಾ.ಪಿ. ರವೀಂದ್ರನಾಥ್, ಕೆಪಿಎ ನಿರ್ದೇಶಕ ಲೋಕೇಶ್ ಭ.ಜಗಲಾಸರ್ ವೇದಿಕೆಯಲ್ಲಿದ್ದರು. ಶಾಸಕ ಟಿ.ಎಸ್.ಶ್ರೀವತ್ಸ ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ದಕ್ಷಿಣ ವಲಯ ಡಿಐಜಿ ಡಾ.ಎಂ.ಬಿ.ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಕೆಪಿಎ ಉಪನಿರ್ದೇಶಕ ನಿರಂಜನ ರಾಜ್ ಅರಸ್ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

## 20 ಪತ್ರಾಂಕಿತ ಪ್ರಶಿಕ್ಷಣಾರ್ಥಿಗಳು

ಮೂವರು ಅಬಕಾರಿ ಉಪಾಧೀಕ್ಷಕರು ಹಾಗೂ 17 ಪೊಲೀಸ್ ಉಪಾಧೀಕ್ಷಕರು(ಸಿವಿಲ್) ಸೇರಿ ಒಟ್ಟು 20 ಪತ್ರಾಂಕಿತ ಪ್ರಶಿಕ್ಷಣಾರ್ಥಿಗಳು 37ನೇ ತಂಡದಲ್ಲಿ 1 ವರ್ಷದ ಬುನಾದಿ ತರಬೇತಿ ಪೂರೈಸಿದ್ದಾರೆ. ಇವರಲ್ಲಿ ಮೂವರು ಮಹಿಳೆಯರಿದ್ದಾರೆ. 20 ಪ್ರಶಿಕ್ಷಣಾರ್ಥಿಗಳಲ್ಲಿ 16 ಮಂದಿ ವಿವಾಹಿತರಾಗಿದ್ದು, ನಾಲ್ವರು ಅವಿವಾಹಿತರಿದ್ದಾರೆ. ಪ್ರಧಾನ ದಳಪತಿ ಸ್ನೇಹರಾಜ್ ಅವರು ಸಂಪೂರ್ಣ ಕನ್ನಡದಲ್ಲೇ ಗೌರವ ವಂದನೆ ಹಾಗೂ ಪಥಸಂಚನಲದ ಮುನ್ನಡೆಸಿದ್ದು ವಿಶೇಷವಾಗಿತ್ತು.

ನಿರ್ಗಮನ ಪಥ ಸಂಚಲನ ಕವಾಯತಿನ ಪ್ರಧಾನ ದಳಪತಿ ಶ್ರೀಮತಿ ಎನ್.ಸ್ನೇಹರಾಜ್, ವೇದಿಕೆಯಲ್ಲಿದ್ದ ಗಣ್ಯರಿಗೆ ಗೌರವ ವಂದನೆ ಸಲ್ಲಿಸಿದರು. ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತೆರೆದ ವಾಹನದಲ್ಲಿ ತುಕಡಿಗಳ ಪರಿವೀಕ್ಷಣೆ ಮಾಡಿ, ವೇದಿಕೆಗೆ ವಾಪಸ್ಸಾದರು. ರಾಷ್ಟ್ರಧ್ವಜ ಹಾಗೂ ಪೊಲೀಸ್ ಧ್ವಜಗಳ ಆಗಮನದ ವೇಳೆ ವಾದ್ಯ ವೃಂದದಿಂದ ರಾಷ್ಟ್ರಗೀತೆ ಮೊಳಗಿತು. ಧ್ವಜಗಳ ನಿರ್ಗಮನದ ಬಳಿಕ ಕೆಪಿಎ ನಿರ್ದೇಶಕರು ಪ್ರಶಿಕ್ಷಣಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ನಂತರ ಪ್ರಧಾನ ದಳಪತಿ ಮೈಸೂರಿನ ಎನ್.ಸ್ನೇಹರಾಜ್ ನೇತೃತ್ವದಲ್ಲಿ ಶಿವರಾಜ್ ಕೆ.ಕಟಕಬಾವಿ, ಕೆ.ವೈ.ರವಿಕುಮಾರ್, ಜೆ.ಹೇಮಂತ್ ಶರಣ್, ಯಶವಂತ್ ಕುಮಾರ್, ಬಿ.ಅಶ್ವಿನಿ, ಎಸ್.ಉಮಾರಾಣಿ ತಂಡಗಳು ವಾದ್ಯ ಸಂಗೀತ ಹಿಮ್ಮೇಳನದೊಂದಿಗೆ ನಿಧಾನಗತಿ ಹಾಗೂ ಶೀಘ್ರಗತಿಯಲ್ಲಿ ಆಕರ್ಷಕ ಪಥಸಂಚನ ನಡೆಸಿ, ಗಣ್ಯರಿಗೆ ವಂದನೆ ಸಲ್ಲಿಸಿದರು. ಸಭಾ ಕಾರ್ಯಕ್ರಮದ ಬಳಿಕ ಪ್ರಶಿಕ್ಷಣಾರ್ಥಿಗಳ ವಿದಳನ ನಡೆಯೊಂದಿಗೆ ಸಮಾರಂಭ ಮುಕ್ತಾಯವಾಯಿತು.

## ಮೈಸೂರಿನ ಸ್ನೇಹರಾಜ್ ಸರ್ವೋತ್ತಮ ಪ್ರಶಿಕ್ಷಣಾರ್ಥಿ



ಅಬಕಾರಿ ನಿರೀಕ್ಷಕಿಯಾಗಿ 7 ವರ್ಷ ಸೇವೆ ಸಲ್ಲಿಸಿ, ಇದೀಗ ಪ್ರೊಬೆಷನರಿ ಡಿವೈಎಸ್ಪಿ ತರಬೇತಿ ಪೂರೈಸಿದ ಮೈಸೂರು ಮೂಲದ ಬಿ.ಇ ಪದವೀಧರೆ ಶ್ರೀಮತಿ ಸ್ನೇಹರಾಜ್ ಒಂದು ವರ್ಷದ ಬುನಾದಿ ತರಬೇತಿಯಲ್ಲಿ ಸರ್ವೋತ್ತಮ ಪ್ರಶಿಕ್ಷಣಾರ್ಥಿಯಾಗಿ ಹೊರಹೊಮ್ಮಿದರು. ಇವರು ಒಳಾಂಗಣ ಅತ್ಯುತ್ತಮ ಪ್ರಶಿಕ್ಷಣಾರ್ಥಿಗೆ ನೀಡಲಾಗುವ ಮಾನ್ಯ ಗೃಹಮಂತ್ರಿಗಳ ಕಪ್, ಸರ್ವೋತ್ತಮ ಮಹಿಳಾ ಪ್ರಶಿಕ್ಷಣಾರ್ಥಿಗೆ ನೀಡಲಾಗುವ ಮಾನ್ಯ ಗೃಹಮಂತ್ರಿಗಳ ಟ್ರೋಫಿ, ಸರ್ವೋತ್ತಮ ಪ್ರಶಿಕ್ಷಣಾರ್ಥಿಗೆ ನೀಡಲಾಗುವ ಮುಖ್ಯಮಂತ್ರಿಗಳ ಟ್ರೋಫಿ, ಮುಖ್ಯಮಂತ್ರಿಗಳ ಸ್ವೋರ್ಡ್, ಡಿಜಿ & ಐಜಿಪಿರವರ ಬೇಟನ್, ನಿವೃತ್ತ ಡಿಜಿ&ಐಜಿಪಿ ಶ್ರೀಯುತ ಗರುಡಾಚಾರ್ ನಗದು ಬಹುಮಾನಕ್ಕೆ ಪಾತ್ರರಾದರು. ಕೆ.ಆರ್.ನಗರ ಸಾಲಿಗ್ರಾಮದ ಬಿ.ಎಸ್ಸಿ, ಎಂಎ ಪದವೀಧರ ಯಶವಂತ್‌ಕುಮಾರ್ ಉತ್ತಮ ರೈಫಲ್ ಫೈರಿಂಗ್, ಐದು ವರ್ಷ ಪಿಎಸ್ಐ ಆಗಿದ್ದ ಬೆಂಗಳೂರಿನ ಜೆ.ಹೇಮಂತ್ ಶರಣ್ ಉತ್ತಮ ರಿವಾಲ್ವರ್ ಫೈರಿಂಗ್ ಹಾಗೂ ಡೈರೆಕ್ಟರ್ಸ್ ಅಸೆಸ್ಮೆಂಟ್ ಕಪ್ ಮತ್ತು 2 ವರ್ಷ ಪಿಎಸ್ಐ ಆಗಿದ್ದ ದೊಡ್ಡಬಳ್ಳಾಪುರದ ಕೆ.ವೈ.ರವಿಕುಮಾರ್ ಹೊರಾಂಗಣ ಅತ್ಯುತ್ತಮ ಪ್ರಶಿಕ್ಷಣಾರ್ಥಿಗೆ ನೀಡಲಾಗುವ ಡಿಜಿ & ಐಜಿಪಿ ಕಪ್‌ಗೆ ಭಾಜನರಾದರು.

## ಪೊಲೀಸರ ಊಟದಲ್ಲಿ ಸತ್ತ ಇಲಿ

ಬೆಂಗಳೂರು, ಸೆ.26– ಕಾವೇರಿ ನೀರಿಗಾಗಿ ಕರೆ ನೀಡಿದ್ದ ಬೆಂಗಳೂರು ಬಂದ್‌ಗೆ ಮಂಗಳವಾರ ಬಿಗಿ ಭದ್ರತೆಗೆ ನಿಯೋಜನೆಗೊಂಡಿದ್ದ 180 ಪೊಲೀಸರಿಗೆ



ವಿತರಿಸಿದ್ದ ಉಪಾಹಾರದಲ್ಲಿ ಸತ್ತ ಇಲಿ ಪತ್ತೆಯಾಗಿದೆ. ಜಾಲತಾಣದಲ್ಲಿ ಫೋಟೋ ವೈರಲ್ ಆಗಿದ್ದು, ಪೊಲೀಸ್ ಅಧಿಕಾರಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ 2 ಠಾಣೆಗಳ 180 ಪೊಲೀಸರಿಗೆ ಬೆಳಗ್ಗೆ 7.30ಕ್ಕೆ ಅಶೋಕ ಹೋಟೆಲ್‌ನಿಂದ ರೈಸ್ ಬಾತ್ ವಿತರಿಸಲಾಗಿತ್ತು ಅದರಲ್ಲಿ ಯಶವಂತಪುರ ಸಂಚಾರ ಠಾಣೆ ಕಾನ್‌ಸ್ಟೆಬಲ್‌ಗೆ ಕೊಟ್ಟಿದ್ದ ಆಹಾರ ಪೊಟ್ಟಣದಲ್ಲಿ ಸತ್ತ ಇಲಿ ಕಂಡು ಬಂದಿದೆ.


ಗಾಬರಿಗೊಂಡ ಕಾನ್‌ಸ್ಟೆಬಲ್ ಕೂಡಲೇ ವಾಟ್ಸಾಪ್ ಗ್ರೂಪ್‌ನಲ್ಲಿ ಫೋಟೋ ಸಹಿತ ಮಾಹಿತಿ ಹಂಚಿಕೊಂಡಿದ್ದರು. ಜತೆಗೆ ರೈಸ್ ಬಾತ್ ಸೇವಿಸದಂತೆ ಎಚ್ಚರಿಸಿ ದ್ದರು. ವಿಚಾರ ಗೊತ್ತಾದ ಕೂಡಲೇ ಆಹಾರ ಪೊಟ್ಟಣ ವಿತರಿಸದಂತೆ ಅಧಿಕಾರಿಗಳು ಸೂಚನೆ ಕೊಟ್ಟಿದ್ದರು. ಅಷ್ಟರಲ್ಲಿ ಇಲಿ ಸತ್ತಿರುವ ರೈಸ್ ಬಾತ್ ಫೋಟೋ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಕಳಪೆ ಆಹಾರ ನೀಡಿದ ನಗರ ಪೊಲೀಸ್ ಇಲಾಖೆ ವಿರುದ್ಧ ಸಾರ್ವಜನಿಕ ವಲಯದಲ್ಲಿ ಅಸಮಾಧಾನ ವ್ಯಕ್ತವಾಗಿತ್ತು. ಎಚ್ಚೆತ್ತ ನಗರ ಪೊಲೀಸರು, ಕಳಪೆ ಆಹಾರ ಸರಬರಾಜು ಮಾಡಿದ್ದ ಯಶವಂತಪುರ ಮೇಲ್ಸೇತುವೆ ಬಳಿಯ ಅಶೋಕ ಹೋಟೆಲ್‌ಗೆ ಬೀಗ ಹಾಕಿಸಿದ್ದರು. ಆಹಾರ ಪೂರೈಕೆ ಹೊಣೆಗಾರಿಕೆ ಹೊತ್ತಿದ್ದ ಯಶವಂತಪುರ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಜಿ.ಚಿದಾನಂದ್ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಜಂಟಿ ಆಯುಕ್ತ (ಸಂಚಾರ) ಎಂ.ಎನ್.ಅನುಚೇತ್ ಸೂಚಿಸಿದ್ದಾರೆ ಎಂದು ತಿಳಿದುಬಂದಿದೆ.

3 ದಿನಗಳ ಹಿಂದೆ ಯಲಹಂಕದಲ್ಲಿ ಗಣೇಶ ವಿಸರ್ಜನೆ ಬಂದೋಬಸ್ತ್‌ಗೆ ನಿಯೋಜನೆಗೊಂಡಿದ್ದ ಪೊಲೀಸರಿಗೆ ಕಳಪೆ ಆಹಾರ ಪೂರೈಕೆ ಮಾಡಿದ್ದರು. ಕೇಸರಿಬಾತ್, ಉಪ್ಪಿಟ್ಟು ಮತ್ತು ವಡೆಯಲ್ಲಿ ಅತೀ ಹೆಚ್ಚು ಎಣ್ಣೆ ಇರುವುದನ್ನು ಕಾನ್‌ಸ್ಟೆಬಲ್ ವಿಡಿಯೋ ಮಾಡಿ ತೋರಿಸಿದ್ದ ದೃಶ್ಯಾವಳಿ ಸಹ ಎಲ್ಲೆಡೆ ವೈರಲ್ ಆಗಿತ್ತು. ಇದರ ಬೆನ್ನಲ್ಲೆ ರೈಸ್‌ಬಾತ್‌ನಲ್ಲಿ ಸತ್ತ ಇಲಿ ಪತ್ತೆಯಾಗಿದೆ.

ಈ ಸಂಬಂಧ ಅಶೋಕ ಹೋಟೆಲ್‌ಗೆ ಬೀಗ ಜಡಿದು ಮಾಲೀಕನ ವಿರುದ್ಧ ಕಳಪೆ ಆಹಾರ ಪೂರೈಕೆ ಆರೋಪದಡಿ ಆರ್‌ಎಂಸಿ ಯಾರ್ಡ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲು ಪೊಲೀಸರು ನಿರ್ಧರಿಸಿದ್ದಾರೆ. ಪ್ರತ್ಯೇಕ ತನಿಖೆ ಸಹ ನಡೆಸಲು ಬಿಬಿಎಂಪಿ ಆಹಾರ ಪರಿವೀಕ್ಷಕ ತಂಡ, ಹೋಟೆಲ್‌ಗೆ ಭೇಟಿ ನೀಡಿ ಪರಿಶೀಲಿಸಿದೆ. ತಪ್ಪು ಕಂಡುಬಂದರೆ 4ರಿಂದ 5 ಲಕ್ಷ ರೂ.ದಂಡವನ್ನು ಬಿಬಿಎಂಪಿ ವಿಧಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಒಂದು ಅಂತಿಮ ಪರಿಹಾರದ ಅಗತ್ಯವಿದೆ

ಮೈಸೂರು, ಸೆ.26(ಎಸ್‌ಬಿಡಿ)– ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಅಂತಿಮ ಪರಿಹಾರ ಅಗತ್ಯವಿದೆ ಎಂದು ಶ್ರೀ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದ್ದಾರೆ.



ತಮಿಳುನಾಡಿಗೆ ಮತ್ತೆ ನೀರು ಹರಿಸಲು ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶಿಸಿರುವ ಬೆನ್ನಲ್ಲೇ ಸುತ್ತೂರು ಶ್ರೀಗಳು ಪತ್ರಿಕಾ ಪ್ರಕಟಣೆ ನೀಡಿದ್ದು, ಕರ್ನಾಟಕ ಸರ್ಕಾರ ಎಲ್ಲಾ ಸಂದರ್ಭದಲ್ಲೂ ನೆರೆ ರಾಜ್ಯದ ರೈತರ ಸಂಕಷ್ಟಕ್ಕೆ ಸ್ಪಂದಿಸುತ್ತಾ ಬಂದಿದೆ. ತನಗೆ ಎಷ್ಟೇ ತೊಂದರೆಯಾದರೂ ಜನ ವಿರೋಧದ ನಡುವೆಯೂ ನ್ಯಾಯಾಧೀಕರಣ ಮತ್ತು ನ್ಯಾಯಾಲಯಗಳ ತೀರ್ಪುಗಳನ್ನು ಗೌರವಿಸಿ, ಪಾಲಿಸಿಕೊಂಡು ಬರುತ್ತಿದೆ. ಇದನ್ನು ತಮಿಳುನಾಡು ಹಾಗೂ ಸಂಬಂಧಪಟ್ಟವರು ದೌರ್ಬಲ್ಯವೆಂದು ಭಾವಿಸಬಾರದು ಎಂದು ಕಿವಿಮಾತು ಹೇಳಿದ್ದಾರೆ.

ಕಾವೇರಿ ನೀರಿನ ಸಮಸ್ಯೆ ದಶಕಗಳಿಂದ ಜ್ವಲಂತವಾಗಿದೆ. ಆರಂಭದಿಂದಲೂ ತಮಿಳುನಾಡು ಅಗತ್ಯಕ್ಕಿಂತ ಹೆಚ್ಚಿನ ನೀರು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಕರ್ನಾಟಕದ ಕಾವೇರಿ ನದಿ ಪಾತ್ರದ ರೈತರು ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ.

### ಸುತ್ತೂರು ಶ್ರೀಗಳ ಕಿವಿಮಾತು

ಮೈಸೂರು, ಬೆಂಗಳೂರು ಇನ್ನಿತರ ಭಾಗದಲ್ಲಿ ಕುಡಿಯುವ ನೀರಿಗೂ ಸಮಸ್ಯೆ ತಲೆದೋರಿದೆ. ಇದಕ್ಕೆ ಶಾಶ್ವತ ಪರಿಹಾರ ಯಾವಾಗ ಎನ್ನುವುದು ಪ್ರಶ್ನಾರ್ಥಕವಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಅನಾವೃಷ್ಟಿಯಾದಾಗ ಉಂಟಾಗುವ ಈ ಸಮಸ್ಯೆಗೆ ಅಂತಿಮ ಪರಿಹಾರ ಅತ್ಯವಶ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರತಿ ವರ್ಷ ಮಳೆ ಪ್ರಮಾಣ, ಜಲಾಶಯಗಳಲ್ಲಿನ ನೀರಿನ ಮಟ್ಟ ಆಧರಿಸಿ ಕ್ರಮ ವಹಿಸುವುದು ಅಗತ್ಯ. ಕೇಂದ್ರ ಸರ್ಕಾರ, ಸುಪ್ರೀಂಕೋರ್ಟ್ ಮತ್ತು ನ್ಯಾಯಾಧೀಕರಣ ಸಮಾಲೋಚಿಸಿ ಉಭಯ ರಾಜ್ಯಗಳ ಹೊರತಾಗಿ ಬೇರೆ ರಾಜ್ಯಗಳ ನೀರಾವರಿ ತಜ್ಞರ ಸಮಿತಿ ರಚಿಸಬೇಕು. ಆ ಮೂಲಕ ನೀರಿನ ಸಂಗ್ರಹ ವಾಸ್ತವಾಂಶವನ್ನು ಅಧ್ಯಯನ ಮಾಡಿ, ಸಮಸ್ಯೆಗೆ ಸೂಕ್ತ ಪರಿಹಾರ ಸೂಚಿಸುವುದು ತುರ್ತಾಗಿ ಆಗಬೇಕಿದೆ. ಕರ್ನಾಟಕ ಜನರ ಕುಡಿಯುವ ನೀರಿಗೆ, ರೈತರ ಬೆಳೆಗಳಿಗೆ ಹಾಗೂ ಜಾನುವಾರುಗಳಿಗೆ ಅಗತ್ಯವಾಗಿರುವ ನೀರನ್ನು ಬಳಸಿಕೊಂಡು ನಂತರ ಹೆಚ್ಚುವರಿ ನೀರನ್ನು ತಮಿಳುನಾಡಿಗೂ ಅನುಕೂಲವಾಗುವಂತೆ ಹರಿಸಲು ಸೂಕ್ತಕ್ರಮ ಕೈಗೊಳ್ಳಲು ಸಂಬಂಧಪಟ್ಟವರು ಮುಂದಾಗಬೇಕು ಎಂದು ಶ್ರೀಗಳು ಆಗ್ರಹಿಸಿದ್ದಾರೆ.

## ಬಾಯಿಯಲ್ಲಿ ಇಲಿ ಹಿಡಿದುಕೊಂಡು ಪ್ರತಿಭಟಿಸಿದ ತಮಿಳುನಾಡು ರೈತರು



**ತಿರುಚ್ಚಿ:** ತಮಿಳುನಾಡಿಗೆ ಕಾವೇರಿ ನೀರು ಬಿಡುವಂತೆ ಆಗ್ರಹಿಸಿ ಕರ್ನಾಟಕ ಮತ್ತು ಕೇಂದ್ರ ಸರ್ಕಾರದ ವಿರುದ್ಧ ತಮಿಳುನಾಡು ರೈತರು ಮಂಗಳವಾರ ತಿರುಚ್ಚಿಯಲ್ಲಿ ಬಾಯಿಯಲ್ಲಿ ಇಲಿಗಳನ್ನು ಹಿಡಿದು ಅನಿರೀಕ್ಷಿತ ರೀತಿಯಲ್ಲಿ ಪ್ರತಿಭಟನೆ ನಡೆಸಿದರು. ರಾಷ್ಟ್ರೀಯ ದಕ್ಷಿಣ ಭಾರತ ನದಿ ಜೋಡಣೆ ರೈತರ ಸಂಘದ ತಮಿಳುನಾಡು ವಿಚಿತ್ರ ಅಧ್ಯಕ್ಷ ಅಯ್ಯಕಣ್ಣು ನೇತೃತ್ವದಲ್ಲಿ ತಿರುಚ್ಚಿಯಲ್ಲಿ ರೈತರು ಈ ಪ್ರತಿಭಟನೆ ನಡೆಸಿದರು.

ತಮಿಳುನಾಡಿನಲ್ಲಿ ಬೆಳೆದು ನಿಂತಿರುವ ಕುರುವೇ ಬೆಳೆ ಉಳಿಸಲು ಕಾವೇರಿ ನೀರು ಹರಿಸುವಂತೆ ಕರ್ನಾಟಕ ಮತ್ತು ಕೇಂದ್ರ ಸರ್ಕಾರಕ್ಕೆ ಪ್ರತಿಭಟನಾಕಾರರು ಒತ್ತಾಯಿಸಿದರು.

ಇದಕ್ಕೂ ಮುನ್ನ, ಭಾನುವಾರ ತಿರುಚ್ಚಿಯಲ್ಲಿ ರೈತರ ಗುಂಪು ಕಾವೇರಿ ನದಿ ನೀರಿನಲ್ಲಿ ಇಳಿದು ತಮಿಳುನಾಡಿಗೆ ಕಾವೇರಿ ನೀರು ಬಿಡುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದ್ದರು.

ಇದೇ ವೇಳೆ ಕರ್ನಾಟಕದ ಅಣೆಕಟ್ಟುಗಳಿಂದ ತಮಿಳುನಾಡಿಗೆ ನೀರು ಬಿಡದಂತೆ ಆಗ್ರಹಿಸಿ ಇಂದು ಬೆಂಗಳೂರು ಬಂದ್ ಮಾಡಿ ರೈತರು ಪ್ರತಿಭಟನೆ ನಡೆಸಿದರು. ಸೆ.13ರಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ತನ್ನ ನೆರೆಯ ರಾಜ್ಯ ತಮಿಳುನಾಡಿಗೆ 15 ದಿನಗಳ ಕಾಲ ನಿತ್ಯ 5000 ಕ್ಯೂಸೆಕ್ ನೀರನ್ನು ಬಿಡುಗಡೆ ಮಾಡುವಂತೆ ಆದೇಶಿಸಿದಾಗಿನಿಂದ ಕರ್ನಾಟಕದಾದ್ಯಂತ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ.

## ಅರಣ್ಯ ದಳ ದಾಳಿ: ಅಕ್ರಮವಾಗಿ ಸಂಗ್ರಹಿಸಿದ್ದ ಹಾವು, ಪುನಗು ಬೆಕ್ಕು ವಶಕ್ಕೆ

ಮೈಸೂರು, ಸೆ.26– ಮನೆಯಲ್ಲಿ ಅಕ್ರಮವಾಗಿ ಹಾವುಗಳನ್ನು ಇಟ್ಟುಕೊಂಡಿದ್ದ ವ್ಯಕ್ತಿಯನ್ನು ಮೈಸೂರಿನ ಸಿಐಡಿ ಫಾರೆಸ್ಟ್ ಸೆಲ್ ತಂಡ ಬಂಧಿಸಿದೆ. ಮೈಸೂರು ರಾಜೀವ್‌ನಗರದ ನಿವಾಸಿ ಸಂದೀಪ್ ಅಲಿಯಾಸ್ ದೀಪು ಬಂಧಿತ. ಈತ ಮನೆಯಲ್ಲಿ ಅಕ್ರಮವಾಗಿ ಇಟ್ಟುಕೊಂಡಿದ್ದ 9 ವಿವಿಧ ಜಾತಿಯ ಒಟ್ಟು 18 ಹಾವುಗಳು ಹಾಗೂ 4 ಪುನಗು ಬೆಕ್ಕುಗಳನ್ನು ವಶಪಡಿಸಿಕೊಳ್ಳಲಾಗಿದೆ. ಅಲ್ಲದೆ ಹಾವಿನ ವಿಷ ಸಂಗ್ರಹಿಸುವ ಘಟಕವೂ ಪತ್ತೆಯಾಗಿರುವುದಾಗಿ ಎಂದು ತಿಳಿದುಬಂದಿದೆ.

ಸಂದೀಪ್ ಮನೆಯಲ್ಲಿ ಹತ್ತಾರು ಹಾವುಗಳಿದ್ದು, ಅವುಗಳ ವಿಷ ಸಂಗ್ರಹಿಸುತ್ತಿರಬಹುದು ಎಂದು ಅನುಮಾನಿಸಿ ಕೆಲವರು ದೂರು ನೀಡಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಸಿಐಡಿ ಫಾರೆಸ್ಟ್ ಸೆಲ್ ಅಧಿಕಾರಿಗಳು, ಆತನ ಚಲನವಲನಗಳ ಬಗ್ಗೆ ನಿಗಾ ವಹಿಸಿದ್ದರು. ಆತ ಅಕ್ರಮವಾಗಿ ಮನೆಯಲ್ಲಿ ಹಾವುಗಳನ್ನು ಇಟ್ಟಿಕೊಂಡಿದ್ದನ್ನು ಖಚಿತಪಡಿಸಿಕೊಂಡು ದಾಳಿ ನಡೆಸಿದ್ದಾರೆ. ಬಂಧಿತನನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.





ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮಕ್ಕೆ ಮಂಗಳವಾರ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಭೇಟಿ ನೀಡಿ, ಚಾತುರ್ಮಾಸ ವ್ರತದಲ್ಲಿರುವ ಉಡುಪಿಯ ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಗಳ ಆಶೀರ್ವಾದ ಪಡೆದರು. ಈ ವೇಳೆ ಶಾಸಕ ಶ್ರೀವತ್ಸ, ಬಿಜೆಪಿ ಮುಖಂಡರಾದ ಕೇಬಲ್ ಮಹೇಶ್, ಜೋಗಿ ಮಂಜ, ಕೆ.ಜೆ.ರಮೇಶ್, ಪ್ರದೀಪ್‌ಕುಮಾರ್, ಜಯರಾಂ, ಶಿವರಾಜ್, ಕೃಷ್ಣ, ಕಿಶೋರ್ ಇತರರು ಹಾಜರಿದ್ದರು.

## ತುಮಕೂರು ಬಳಿ ಬೆಳ್ಳಂಬೆಳಗ್ಗೆ ಭೀಕರ ಅಪಘಾತ; ಕಾರಿಗೆ ಲಾರಿ ಡಿಕ್ಕಿ ಮೂವರು ಸ್ಥಳದಲ್ಲೇ ಸಾವು

ಮಧುಗಿರಿ: ತಾಲೂಕಿನ ಮಿಡಿಗೇಶಿ ಗ್ರಾಮದ ಬಳಿ ಮಂಗಳವಾರ ಬೆಳ್ಳಂಬೆಳಗ್ಗೆ ಕಾರ್ ಮತ್ತು ಲಾರಿ ಮಧ್ಯೆ ನಡೆದ ಅಪಘಾತದಲ್ಲಿ ಕಾರಿನಲ್ಲಿದ್ದ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದು, ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಪಾವಗಡ ತಾಲೂಕಿನ ಗುಜ್ಜನುಡು ಗ್ರಾಮದ ಆಕಾಶ್(26), ಕಾರ್ತಿಕ್ (28) ಹೇಮಂತ್ (30) ಮೃತರು. ಗಾಯಾಳು ಉಜ್ವಲ್ ಅವರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಂಗಳೂರಿನಿಂದ ಪಾವಗಡಕ್ಕೆ ಹೋಗುತ್ತಿದ್ದ ಕಾರು, ಪಾವಗಡದಿಂದ ಬೆಂಗಳೂರಿಗೆ ತೆರಳುತ್ತಿದ್ದ ಲಾರಿ ಮುಖಾಮುಖಿಯಾಗಿವೆ. ಮೃತರು ಗುಜ್ಜನಡು ಗ್ರಾಮದಲ್ಲಿ ನಡೆಯುತ್ತಿದ್ದ ಮಾರಮ್ಮ ದೇವಿ ರಥೋತ್ಸವ ಕಾರ್ಯಕ್ರಮಕ್ಕೆ ತೆರಳುತ್ತಿದ್ದರು. ಈ ಸಂಬಂಧ ಮಿಡಿಗೇಶಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹಿರಿಯ ನಟ ಬ್ಯಾಂಕ್ ಜನಾರ್ಧನ್‌ಗೆ ಹೃದಯಾಘಾತ, ಐಸಿಯುನಲ್ಲಿ ಚಿಕಿತ್ಸೆ

ಬೆಂಗಳೂರು: ಕನ್ನಡ ಚಿತ್ರರಂಗದ



ಹಿರಿಯ ನಟ ಬ್ಯಾಂಕ್ ಜನಾರ್ಧನ್ ಅವರಿಗೆ ಹೃದಯಾಘಾತವಾಗಿದ್ದು, ನಗರದ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಿಗೆ ಐಸಿಯುನಲ್ಲಿ ಚಿಕಿತ್ಸೆ ಮುಂದುವರೆದಿದ್ದು, ಆರೋಗ್ಯವಾಗಿದ್ದಾರೆ. ಆಂಜಿಯೋಗ್ರಾಮ್ ಮಾಡಲಾಗುತ್ತಿದೆ ಎಂದು ತಿಳಿದುಬಂದಿದೆ.

ಹಿರಿಯ ನಟರಾದ ವೈಜನಾಥ್ ಬಿರಾದಾರ್ ಮತ್ತಿತರರು ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದಾರೆ. 74 ವರ್ಷದ ಬ್ಯಾಂಕ್ ಜನಾರ್ದನ್ ಕಳೆದ 40 ವರ್ಷಗಳಿಂದ ಚಿತ್ರರಂಗದಲ್ಲಿ ಸಕ್ರಿಯವಾಗಿದ್ದಾರೆ. ಹಲವು ಚಿತ್ರಗಳಲ್ಲಿ ಹಾಸ್ಯ, ಪೋಷಕ ನಟರಾಗಿ ಅಭಿನಯಿಸುವ ಮೂಲಕ ನಾಡಿನಲ್ಲಿ ಜನಪ್ರಿಯರಾಗಿದ್ದಾರೆ. ಅಜಗಜಾಂತರ, ಉಪೇಂದ್ರ ನಿರ್ದೇಶನದ ಶ್, ಜಗ್ಗೇಶ್ ಅಭಿನಯದ ತರ್ಲೆ ನನ್ ಮಗ, ಬೆಳ್ಳಿಯಪ್ಪ ಬಂಗಾರಪ್ಪ, ಸೇರಿದಂತೆ ಸುಮಾರು 500ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. 2012ರಲ್ಲಿ ತೆರೆ ಕಂಡ ರಕ್ಷಿತ್ ಶೆಟ್ಟಿ, ರಿಷಭ್ ಶೆಟ್ಟಿ ಹಾಗೂ ಮೇಘನಾ ಗಾಂವ್ಕರ್ ಅಭಿನಯದ ಸಿನಿಮಾ 'ತುಘ್ಲಕ್' ಚಿತ್ರದ ನಂತರ ಅಷ್ಟಾಗಿ ಚಿತ್ರಗಳಲ್ಲಿ ಕಾಣಿಸಿಕೊಳ್ಳದ ಬ್ಯಾಂಕ್ ಜನಾರ್ಧನ್ ಬಳಿಕ ಸೀರಿಯಲ್‌ನಲ್ಲಿ ನಟಿಸುತ್ತಿದ್ದರು. ಪಾಪ ಪಾಂಡು, ಮಾಂಗಲ್ಯ, ರೋಬೋ ಫ್ಯಾಮಿಲಿ, ಜೋಕಾಲಿ ಮತ್ತಿತರ ಸೀರಿಯಲ್‌ನಲ್ಲಿ ಬ್ಯಾಂಕ್ ಜನಾರ್ದನ್ ಅಭಿನಯಿಸಿದ್ದರು.

## ಮಾಜಿ ಸಿಎಂ ವೀರೇಂದ್ರ ಪಾಟೀಲರ ಪತ್ನಿ ಶಾರದಾ ಪಾಟೀಲ ನಿಧನ



**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ದಿ. ವೀರೇಂದ್ರ ಪಾಟೀಲ ಪತ್ನಿ ಶಾರದಾ ಪಾಟೀಲ (93) ಅವರು ಬೆಂಗಳೂರಿನ ಸದಾಶಿವ ನಗರದ ಸ್ವಗೃಹದಲ್ಲಿ ಮಂಗಳವಾರ ನಿಧನರಾಗಿದ್ದಾರೆ.

ಮಾಜಿ ಶಾಸಕ ಕೈಲಾಸನಾಥ್ ಪಾಟೀಲ ಮತ್ತು ಇಬ್ಬರು ಪುತ್ರಿಯರನ್ನು ಅವರು ಅಗಲಿದ್ದಾರೆ. ಶಾರದಾ ಪಾಟೀಲ ಪಾರ್ಥಿವ ಶರೀರವನ್ನು ಚಿಂಚೋಳಿಗೆ ತೆಗೆದುಕೊಂಡು ಹೋಗಲಾಗುವುದು. ಚಿಂಚೋಳಿಯಲ್ಲಿರುವ ವೀರೇಂದ್ರ ಪಾಟೀಲರ ಸಮಾಧಿ ಪಕ್ಕದಲ್ಲೇ ಶಾರದಾ ಪಾಟೀಲರ ಅಂತ್ಯಕ್ರಿಯೆ ಬುಧವಾರ ಅಪರಾಹ್ನ ನಡೆಯಲಿದೆ ಎಂದು ಕೈಲಾಸನಾಥ ಪಾಟೀಲ ತಿಳಿಸಿದ್ದಾರೆ. ಶಾರದಾ ಪಾಟೀಲ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಾಪ ಸೂಚಿಸಿದ್ದಾರೆ.

## ಮದ್ಯದಂಗಡಿಗೆ ಪರವಾನಗಿ ಪ್ರಸ್ತಾಪ; ಎಐಎಂಎಸ್‌ಎಸ್ ತೀವ್ರ ಬೇಸರ

ಮೈಸೂರು, ಸೆ.26(ಎಸ್‌ಪಿಎನ್)– ರಾಜ್ಯದಲ್ಲಿ ಹೊಸದಾಗಿ ಸಾವಿರಕ್ಕೂ ಹೆಚ್ಚು ಮದ್ಯದಂಗಡಿಗಳಿಗೆ ಪರವಾನಗಿ ನೀಡಲು ಅಬಕಾರಿ ಇಲಾಖೆ, ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಮೈಸೂರು ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ.




ಈ ಬಗ್ಗೆ ಪ್ರಕಟಣೆ ನೀಡಿರುವ ಜಿಲ್ಲಾ ಸಮಿತಿ ಕಾರ್ಯದರ್ಶಿ ಜಿ.ಎಸ್.ಸೀಮಾ, ಗ್ರಾಪಂ ಹಾಗೂ ನಗರದಲ್ಲಿನ ಸೂಪರ್ ಮಾರುಕಟ್ಟೆಗಳಲ್ಲಿ ಹೊಸ ಪರವಾನಗಿ ಮತ್ತು ಬಳಕೆ ಇಲ್ಲದ ಪರವಾನಗಿಗಳಿಗೆ ಮರುಜೀವ ನೀಡುವಂತೆ ಅಬಕಾರಿ ಇಲಾಖೆ ಪ್ರಸ್ತಾವನೆ ನೀಡಿದೆ. ಇಲಾಖೆಯು ಸುಮಾರು 600ಕ್ಕೂ ಹೆಚ್ಚು ಗ್ರಾಪಂ ವ್ಯಾಪ್ತಿಯಲ್ಲಿ ಮದ್ಯದ ಅಂಗಡಿಗಳು ಇಲ್ಲದಿರುವುದನ್ನು ಗುರುತಿಸಿ, 3 ಸಾವಿರ ಜನಸಂಖ್ಯೆ ಇರುವ ಗ್ರಾಪಂಗಳಲ್ಲಿ ಮದ್ಯದ ಅಂಗಡಿಗಳಿಗೆ ಅನುಮತಿ ನೀಡಲು ಸಜ್ಜಾಗಿರುವುದು ಬೇಸರದ ಸಂಗತಿ ಎಂದು ತಿಳಿಸಿದ್ದಾರೆ.

**ಪುರುಷರು ಹಾದಿ ತಪ್ಪುತ್ತಿದ್ದಾರೆ:** ಈಗಾಗಲೇ ಮದ್ಯಪಾನದ ದುಶ್ಚಟದಿಂದಾಗಿ ಲಕ್ಷಾಂತರ ಕುಟುಂಬಗಳು ಬೀದಿಪಾಲಾಗಿವೆ. ಒಂದೆಡೆ ಬೆಲೆ ಏರಿಕೆ, ಬಡತನ, ನಿರುದ್ಯೋಗದಿಂದ ಜೀವನ ತತ್ತರಿಸುತ್ತಿದರೆ ಮತ್ತೊಂದೆಡೆ ನೈತಿಕ ಮೌಲ್ಯ ಕುಸಿಯುತ್ತಿದೆ. ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯಕ್ಕೆ, ಕುಟುಂಬ ಕಲಹಗಳಿಗೆ, ಸಮಾಜ ಘಾತಕ ಕೃತ್ಯಗಳಿಗೆ ಮದ್ಯಪಾನ ಎಡೆ ಮಾಡಿಕೊಡುತ್ತಿದೆ. ಇದು ಕುಡಿತದಿಂದ ಎಷ್ಟೋ ಎಳೆ ಜೀವಗಳು ರಸ್ತೆ ಅಪಘಾತಗಳಲ್ಲಿ ಜೀವ ಕಳೆದುಕೊಳ್ಳುತ್ತಿದ್ದಾರೆ. ಕುಡಿತದ ಚಟಕ್ಕೆ ಬಲಿಯಾಗಿ ಮೌಲ್ಯಯುತ ಜೀವನ ನಡೆಸಬೇಕಾದ ಗಂಡು ಮಕ್ಕಳು ಹಾದಿ ತಪ್ಪಿ ಅನಾರೋಗ್ಯಕ್ಕೆ ಬಲಿಯಾಗುತ್ತಿರುವುದು ಬೇಸರದ ಸಂಗತಿ ಎಂದು ತಿಳಿಸಿದ್ದಾರೆ.

**ಜನಸಾಮಾನ್ಯರ ಸುಲಿಗೆ ಸರಿಯಲ್ಲ:** ಜನರ ಆರ್ಥಿಕತೆಯ ಸಬಲೀಕರಣಕ್ಕೆ ಐದು ಗ್ಯಾರಂಟಿಗಳನ್ನು ಘೋಷಿಸಿರುವ ಸರಕಾರವು, ಸಮಾಜದ ಸ್ವಾಸ್ಥ್ಯದ ಗ್ಯಾರಂಟಿಯನ್ನು ಖಾತ್ರಿಪಡಿಸಲು ಪ್ರತಿ ಹಳ್ಳಿ, ತಾಲೂಕು, ಜಿಲ್ಲೆಗಳಲ್ಲಿ ಕುಡಿಯುವ ನೀರು, ವಿದ್ಯುತ್, ಸಾರಿಗೆ ಸಂಪರ್ಕ, ಶಾಲೆ–ಕಾಲೇಜು ಮತ್ತು ಆಸ್ಪತ್ರೆಗಳ ನಿರ್ಮಾಣ–ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಒತ್ತಾಯಿಸಿದ್ದಾರೆ.

ಸರ್ಕಾರ ಆದಾಯದ ಕೊರತೆ ನೀಗಿಸಲು ಬೇರೆಬೇರೆ ಮಾರ್ಗಗಳನ್ನು ಹುಡಕಬೇಕೇ ವಿನಃ ಜನಸಾಮಾನ್ಯರನ್ನು ಸುಲಿಗೆ ಮಾಡಿ ಇಡೀ ಸಮಾಜವನ್ನು ಅಧಃಪತನಕ್ಕೆ ತಳ್ಳಲು ಹೊರಟಿರುವ ಸರ್ಕಾರದ ಈ ನಿರ್ಧಾರವನ್ನು ನಾಡಿನ ಮಹಿಳಾ ಸಮುದಾಯ, ಸರ್ಕಾರದ ಇಂತಹ ಜನ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಸಂಘಟಿತ ಹೋರಾಟ ಮಾಡಬೇಕಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರ ಈ ನಡೆಯನ್ನು ಕೂಡಲೇ ಕೈಬಿಡಬೇಕೆಂದು ಎಐಎಂಎಸ್‌ಎಸ್ ಅಗ್ರಹಿಸಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತನಹಳ್ಳಿ ಮಾರಮ್ಮ ದೇವಸ್ಥಾನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕೆ.ಆರ್.ನಗರ ಶಾಸಕ ರವಿಶಂಕರ್, ಕಡಕೊಳ ಶಿವಲಿಂಗ, ಇತರರು ಸ್ವಾಗತಿಸಿದರು.

## ಇಂದು 'ಪೋಷಣ ಅಭಿಯಾನ'

ಮಡಿಕೇರಿ, ಸೆ.26– ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಮಕ್ಕಳ ವಿಭಾಗ ವತಿಯಿಂದ 'ಪೌಷ್ಟಿಕ ಮಾಸಾಚರಣೆ' ಪ್ರಯುಕ್ತ ಸೆ.27 ರಂದು ಬೆಳಗ್ಗೆ 11 ಗಂಟೆಗೆ ನಗರದ ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧಕ ಆಸ್ಪತ್ರೆಯ ಮಹಿಳಾ ಮತ್ತು ಮಕ್ಕಳ ವಿಭಾಗದಲ್ಲಿ 'ಪೋಷಣ ಅಭಿಯಾನ' ನಡೆಯಲಿದೆ ಎಂದು ಮಕ್ಕಳ ವಿಭಾಗದ ಮುಖ್ಯಸ್ಥ ಡಾ. ಪುರುಷೋತ್ತಮ ಅವರು ತಿಳಿಸಿದ್ದಾರೆ.

## ಇಂದು ಅನ್ನ ಸಂತರ್ಪಣೆ

ವಿರಾಜಪೇಟೆ, ಸೆ.26– ವರ್ಷಂಪ್ರತಿ ಆಚರಿಸಿಕೊಂಡು ಬರುತ್ತಿರುವ ವಿರಾಜಪೇಟೆ ನಗರದ ಐತಿಹಾಸಿಕ ಗೌರಿ– ಗಣೇಶೋತ್ಸವದ ಅಂಗವಾಗಿ ಶ್ರೀ ವಿಜಯ ವಿನಾಯಕ ಉತ್ಸವ ಸಮಿತಿ ದಖನಿ ಮೊಹಲ್ಲಾ ವತಿಯಿಂದ ಸೆ.27ರಂದು ರಾತ್ರಿ 8 ಗಂಟೆಗೆ ವಿಶೇಷ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ಕೋರಲಾಗಿದೆ.

# ತಲಕಾವೇರಿಯಲ್ಲಿ ಗ್ಲಾಸ್ ಬ್ರಿಡ್ಜ್ ನಿರ್ಮಾಣಕ್ಕೆ ಭಾರಿ ವಿರೋಧ

### ಏಕೀಕರಣ ರಂಗದಿಂದ ಶಾಸಕ ಪೊನ್ನಣ್ಣ, ಡಿಸಿ ವೆಂಕಟ್‌ರಾಜಾ ಅವರಿಗೆ ಮನವಿ ಸಲ್ಲಿಕೆ



ಮಡಿಕೇರಿ, ಸೆ.26– ಭಾಗಮಂಡಲ ಗ್ರಾ.ಪಂ ವ್ಯಾಪ್ತಿಯ ತಲಕಾವೇರಿಯಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಗ್ಲಾಸ್ ಬ್ರಿಡ್ಜ್ ನಿರ್ಮಿಸುವ ಯೋಜನೆಯನ್ನು ರೂಪಿಸಿರುವುದಕ್ಕೆ ಕೊಡಗು ಏಕೀಕರಣ ರಂಗ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಗ್ಲಾಸ್ ಬ್ರಿಡ್ಜ್ ನಿರ್ಮಿಸಲು ನೀಡಿರುವ ಅನುಮತಿಯನ್ನು ರದ್ದುಪಡಿಸುವಂತೆ ಒತ್ತಾಯಿಸಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ, ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಹಾಗೂ ಜಿಲ್ಲಾಧಿಕಾರಿ ವೆಂಕಟರಾಜ ಅವರಿಗೆ ಏಕೀಕರಣ ರಂಗದ ಪ್ರಮುಖ ಎ.ಎ.ಪೂವಯ್ಯ ಮತ್ತಿತರರು ಮನವಿ ಸಲ್ಲಿಸಿದರು.

ಪ್ರವಾಸಿಗರನ್ನು ಸೆಳೆಯುವ ಉದ್ದೇಶದಿಂದ ಭಾಗಮಂಡಲ–ತಲಕಾವೇರಿ ನಡುವೆ ಎರಡು ಗ್ಲಾಸ್ ಬ್ರಿಡ್ಜ್ ನಿರ್ಮಿಸಲು ಉದ್ಯಮಿಗಳಿಗೆ ಅನುಮತಿ ನೀಡಲಾಗಿದೆ. 2020ರ ಆಗಸ್ಟ್ ತಿಂಗಳಿನಲ್ಲಿ ತಲಕಾವೇರಿಯಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಐವರ ಜೀವ ಹಾನಿಯಾಗಿದೆ. ಈ ಬಗ್ಗೆ ಜಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ ನಡೆಸಿದ ಅಧ್ಯಯನದಲ್ಲಿ ಈ ಭೂಕುಸಿತಕ್ಕೆ ತಲಕಾವೇರಿಯ ಪರ್ವತ ಸಾಲುಗಳಲ್ಲಿ ಬೃಹತ್ ಯಂತ್ರಗಳನ್ನು ಬಳಸಿ ನಡೆಸಿದ ಭೂ ಅಭಿವೃದ್ಧಿ ಕಾಮಗಾರಿಯೇ ಕಾರಣ ಎಂಬುದು ದೃಢಪಟ್ಟಿದೆ. ತಲಕಾವೇರಿ ಜಿಲ್ಲೆಯ ಜನರ ಶ್ರದ್ಧಾಭಕ್ತಿಯ ಕ್ಷೇತ್ರವಾಗಿದೆ. ಈ ಕ್ಷೇತ್ರವನ್ನು ಪ್ರವಾಸಿ ಕೇಂದ್ರವಾಗಿ ಪ್ರಚಾರ ಮಾಡಿದ ಪರಿಣಾಮ ಇಲ್ಲಿ ಪ್ರವಾಸಿಗರ ವರ್ತನೆ ನಿಯಮ ಮೀರಿದೆ. ತೀರ್ಥಕ್ಷೇತ್ರದ ಸಮೀಪವೇ ಗ್ಲಾಸ್ ಬ್ರಿಡ್ಜ್ ನಿರ್ಮಾಣವಾದರೆ ಭಕ್ತಾದಿಗಳಿಗಿಂತ ಪ್ರವಾಸಿಗರೇ ಅಧಿಕ ಸಂಖ್ಯೆಯಲ್ಲಿ ಆಗಮಿಸುವ ಅಪಾಯವಿದೆ ಎಂದು ಪೂವಯ್ಯ ಗಮನ ಸೆಳೆದರು.

1986ರ ಪರಿಸರ ಕಾಯ್ದೆ ಪ್ರಕಾರ ತಲಕಾವೇರಿ ವನ್ಯಧಾಮವನ್ನು ಸೂಕ್ಷ್ಮ ಪರಿಸರ ವಲಯ ಎಂದು ಕೇಂದ್ರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಘೋಷಿಸಿದೆ. ಈ ಘೋಷಣೆಯಂತೆ ರಾಜ್ಯ ಸರಕಾರ ಜೋನಲ್ ಪ್ಲಾನ್ ರೂಪಿಸಬೇಕಿದೆ. ಆದರೆ ಈ ಬಗ್ಗೆ ಸರಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಮಡಿಕೇರಿ ಸಮೀಪದ ಉಡೋತ್‌ನಲ್ಲಿ ನಿರ್ಮಾಣಗೊಂಡಿರುವ ಗಾಜಿನ ಸೇತುವೆಯಿಂದ ಸ್ಥಳೀಯರಿಗೆ ಹಾಗೂ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಯ ಬಗ್ಗೆ ಎಲ್ಲರಿಗೂ ಅರಿವಿದೆ. ಸ್ಥಳೀಯ ಗ್ರಾ.ಪಂ, ಪೊಲೀಸ್ ಇಲಾಖೆ ಮತ್ತು ಜಿಲ್ಲಾಡಳಿತ ಯಾವ ಪರಿಹಾರೋಪಾಯವನ್ನೂ ಕೈಗೊಂಡಿಲ್ಲ ಎಂದು ಆರೋಪಿಸಿದರು. ಭಾಗಮಂಡಲ, ತಲಕಾವೇರಿಯಲ್ಲಿ ಗ್ಲಾಸ್ ಬ್ರಿಡ್ಜ್ ನಿರ್ಮಾಣವಾದರೆ ಇದೇ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಗ್ಲಾಸ್ ಬ್ರಿಡ್ಜ್ ನಿರ್ಮಿಸಲು ನೀಡಿರುವ ಅನುಮತಿಯನ್ನು ರದ್ದುಪಡಿಸಬೇಕೆಂದು ಪೂವಯ್ಯ ಒತ್ತಾಯಿಸಿದರು.

## ಶಾಲೆ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ ವಿತರಣೆ



ಮಡಿಕೇರಿ, ಸೆ.26– ಕರ್ಣಂಗೇರಿ ಗ್ರಾಮದ ಮೊಣಕಾಲ್ಮುರಿ ಶಾಲೆಯ ವಿದ್ಯಾರ್ಥಿಗಳಿಗೆ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ ಅವರು ಸಮವಸ್ತ್ರ ಮತ್ತು ಶೂ ವಿತರಿಸಿದರು. ನಂತರ ವಿದ್ಯಾರ್ಥಿಗಳಿಗೆ ಹಾಗೂ ಅಂಗನವಾಡಿಯ ಪುಟಾಣಿಗಳಿಗೆ ಸಿಹಿ ಹಂಚಿ ಮಕ್ಕಳೊಂದಿಗೆ ಸಂಭ್ರಮಿಸಿದರು. ಈ ಸಂದರ್ಭ ಕೆ.ನಿಡುಗಣೆ ಗ್ರಾ.ಪಂ ಸದಸ್ಯರಾದ ಜಾನ್ಸನ್ ಪಿಂಟೋ, ಅನಿತಾ, ಸ್ಥಳೀಯರಾದ ಪ್ರೇಮ್ ಕುಮಾರ್, ಕೃಷ್ಣಪ್ಪ, ಶಾಲೆಯ ಮುಖ್ಯ ಶಿಕ್ಷಕಿ ಶಾಲಿನಿ, ಅಂಗನವಾಡಿ ಸಹಾಯಕಿ ಜಯಂತಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಕೊಡಗಿನ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಲ್ಲಿ ಸಂಸದ ಪ್ರತಾಪ್‌ಸಿಂಹ ವಿಫಲರಾಗಿದ್ದಾರೆ

### ಕೆಪಿಸಿಸಿ ವಕ್ತಾರ ಮೇರಿಯಂಡ ಸಂಕೇತ್ ಪೂವಯ್ಯ ಆರೋಪ



ಮಡಿಕೇರಿ, ಸೆ.26– ಕೊಡಗಿನ ಮೂಲಭೂತ ಸಮಸ್ಯೆಗಳ ಕುರಿತು ಇದುವರೆಗೆ ಕನಿಷ್ಠ ಕಾಳಜಿ ತೋರದ ಕೊಡಗು–ಮೈಸೂರು ಕ್ಷೇತ್ರದ ಸಂಸದ ಪ್ರತಾಪ್ ಸಿಂಹ, ಅತ್ಯಂತ ನಿಷ್ಕ್ರಿಯ ಸಂಸದ ಎಂದು ಕೆಪಿಸಿಸಿ ವಕ್ತಾರ ಮೇರಿಯಂಡ ಸಂಕೇತ್ ಪೂವಯ್ಯ ಟೀಕೆ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ಸಂದರ್ಭಗಳಲ್ಲಷ್ಟೆ ಪ್ರತ್ಯಕ್ಷರಾಗುವ ಪ್ರತಾಪ್ ಸಿಂಹ ಅವರು, ಭಾವನಾತ್ಮಕವಾಗಿ, ಧರ್ಮಾಧಾರಿತವಾಗಿ, ಮೋದಿ ಹೆಸರು ಹೇಳುತ್ತ ಮತ ಪಡೆದು ಸಂಸದರಾಗಿ ಆಯ್ಕೆಯಾಗಿದ್ದಾರೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಅವರು ಪರಾಭವಗೊಳ್ಳುತ್ತಾರೆ ಎಂದು ಸಂಕೇತ್ ಪೂವಯ್ಯ ಹೇಳಿದರು.

ಕೊಡಗು ಮತ್ತು ಮೈಸೂರು ವಿಭಾಗದ ಬೆಳೆಗಾರರ ಮತ್ತು ಜನರ ಮೂಲಭೂತ ಸಮಸ್ಯೆಗಳನ್ನು ಕಳೆದ ಒಂಭತ್ತೂವರೆ ವರ್ಷಗಳ ತಮ್ಮ ಅಧಿಕಾರದ ಅವಧಿಯಲ್ಲಿ ಸಂಸತ್‌ನಲ್ಲಿ ಪ್ರಬಲವಾಗಿ ಮಂಡಿಸಿ, ಕೇಂದ್ರದ ಗಮನ ಸೆಳೆದು ಬಗೆಹರಿಸುವಲ್ಲಿ ಪ್ರತಾಪ ಸಿಂಹ ಅವರು ಸಂಪೂರ್ಣ ವಿಫಲವಾಗಿದ್ದಾರೆ. ಅವರು 2 ಬಾರಿ ಆಯ್ಕೆಯಾದ ಸಂದರ್ಭಗಳಲ್ಲಿ ಕೇಂದ್ರದಲ್ಲಿ ಅವರದೇ ಪಕ್ಷ ಅಧಿಕಾರದಲ್ಲಿ ಇದ್ದರು, ಸ್ಥಳೀಯ ಸಮಸ್ಯೆಗಳಿಗೆ ಕೇಂದ್ರದ ಮೂಲಕ ಪರಿಹಾರವನ್ನು ಒದಗಿಸುವಲ್ಲಿ ವಿಫಲರಾಗಿದ್ದಾರೆ. ಇವರ ಈ ಎಲ್ಲಾ ವೈಫಲ್ಯಗಳ ಬಗ್ಗೆ ಜನರಿಗೆ ಅರಿವಿದೆಯೆಂದು ನುಡಿದರು.

ಕೊಡಗಿನ ಆರ್ಥಿಕತೆಯ ಬೆನ್ನೆಲುಬಾಗಿರುವ ಕಾಫಿ ಕೃಷಿಯ ಸಮಸ್ಯೆಗಳಿಗೆ ಸಂಸದರು ಸ್ಪಂದಿಸುವ ಅಗತ್ಯವಿತ್ತು. ಕಾಫಿ ಕೃಷಿ ಸಂಕಷ್ಟಕ್ಕೆ ಸಿಲುಕಿದಲ್ಲಿ ಅದು ಕೇವಲ ಬೆಳೆಗಾರನ ಮೇಲೆ ಮಾತ್ರ ಪರಿಣಾಮ ಬೀರುವುದಿಲ್ಲ. ಬದಲಾಗಿ, ಅದನ್ನು ಅವಲಂಬಿಸಿದ ಕಾರ್ಮಿಕರು, ವರ್ತಕರು ಸೇರಿದಂತೆ ಎಲ್ಲರೂ ಸಂಕಷ್ಟಕ್ಕೆ ಸಿಲುಕುತ್ತಾರೆ. 2014ರ ಲೋಕಸಭಾ ಚುನಾವಣೆ ಹಂತದಲ್ಲಿ ಪ್ರತಾಪ ಸಿಂಹ ಅವರು ತಮ್ಮ ಪ್ರಣಾಳಿಕೆಯಲ್ಲಿ ಕಾಫಿ ಬೆಳೆಗಾರರ ಸಾಲ ಮನ್ನಾ ಮಾಡುವುದಾಗಿ, ಕೇಂದ್ರ ವಾಣಿಜ್ಯ ಮಂತ್ರಾಲಯದೊಂದಿಗೆ ಚರ್ಚಿಸಿ, ಕಾಫಿ ಬೆಳೆಗಾರರ ಸಂಕಷ್ಟಗಳಿಗೆ ವೈಜ್ಞಾನಿಕ ಪರಿಹಾರಗಳನ್ನು ಕಂಡುಕೊಳ್ಳುವುದಾಗಿ ತಿಳಿಸಿದ್ದರು. ಆದರೆ ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ವಿಫಲರಾಗಿದ್ದಾರೆಂದು ಸಂಕೇತ್ ಪೂವಯ್ಯ ಟೀಕಿಸಿದರು.

## ಗೌರಿ–ಗಣೇಶೋತ್ಸವದ ಅಂಗವಾಗಿ ಸೈಕಲ್ ಜಾಥಾ



ವಿರಾಜಪೇಟೆ, ಸೆ.26– ವಿರಾಜಪೇಟೆ ಶ್ರೀ ಗೌರಿ–ಗಣೇಶೋತ್ಸವದ ಅಂಗವಾಗಿ ಜನೋತ್ಸವ ಸಮಿತಿ ವತಿಯಿಂದ ಇಂಧನ ಉಳಿಸಿ, ರಾಷ್ಟ್ರ ರಕ್ಷಿಸಿ ಘೋಷವಾಕ್ಯದಡಿಯಲ್ಲಿ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿತ್ತು.

ವಿರಾಜಪೇಟೆ ಬಳಿಯ ಕೊಮ್ಮೆತೋಡು ಮುಖ್ಯ ರಸ್ತೆಯಲ್ಲಿ ಸೈಕಲ್ ಜಾಥಾಕ್ಕೆ ಜನೋತ್ಸವ ಸಮಿತಿ ಅಧ್ಯಕ್ಷ ಶಾಸಕ ಎ.ಎಸ್.ಪೊನ್ನಣ್ಣ ಅವರು ರಿಬ್ಬನ್ ಕತ್ತರಿಸಿ ಚಾಲನೆ ನೀಡಿದ ಬಳಿಕ ಮಾತನಾಡಿ, ಪರಿಸರವನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯವು ಆಗಿದೆ ಎಂದರು.

ಸೈಕಲ್ ಜಾಥಾ ಮುಖ್ಯ ರಸ್ತೆಯಲ್ಲಿ ಬಂದು ವಿರಾಜಪೇಟೆಯ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಬಳಿಕ ಪುರಭವನವನ್ನು ತಲುಪಿತು. ಸೈಕಲ್ ಜಾಥಾದಲ್ಲಿ ವಿರಾಜಪೇಟೆ ಹಾಗೂ ಸುತ್ತಮುತ್ತಲಿನ ಜನರು ಪಾಲ್ಗೊಂಡಿದ್ದರು.

ಜಾಥಾ ಉದ್ಘಾಟನೆ ಸಂದರ್ಭ ಜನೋತ್ಸವ ಸಮಿತಿ ಕಾರ್ಯಾಧ್ಯಕ್ಷ ಕೆ.ಸಿ. ಶಬರೀಶ್ ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಜಿ ಪೂಣಚ್ಚ, ಪುರಸಭೆ ಸದಸ್ಯರುಗಳಾದ ರಾಜೇಶ್ ಪದ್ಮನಾಭ, ರಜನಿಕಾಂತ್, ಅಲ್ಪಸಂಖ್ಯಾತ ಜಿಲ್ಲಾ ಘಟಕದ ಅಧ್ಯಕ್ಷ ಹನೀಫ್ ಹಾಗೂ ಕೊಮ್ಮೆತೋಡು ಗ್ರಾಮದ ಪ್ರಮುಖರು ಹಾಜರಿದ್ದರು.

## ಕುಶಾಲನಗರದಲ್ಲಿ ನಾಳೆ ಮಾಜಿ ಸೈನಿಕರ ಸಂಘದ ಬೆಳ್ಳಿಹಬ್ಬ

ಕುಶಾಲನಗರ, ಸೆ.26– ತಾಲೂಕಿನ ಮಾಜಿ ಸೈನಿಕರ ಸಂಘದ ಬೆಳ್ಳಿಹಬ್ಬ ಸಮಾರಂಭ ಸೆ. 28 ರಂದು ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಕ್ಯಾಪ್ಟನ್ ಡಿ.ಕೆ. ಚಿಣ್ಣಪ್ಪ ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.28ರಂದು ಗುರುವಾರ ಬೆಳಗ್ಗೆ 10 ಗಂಟೆಗೆ ಇಲ್ಲಿನ ಗೌಡ ಸಮಾಜದ ಸಭಾಂಗಣದಲ್ಲಿ ನಡೆಯುವ ಸಮಾರಂಭವನ್ನು ಸಂಘದ ಕಟ್ಟಡ ಸ್ಥಳದಾನಿ ನಾಯಕ್ ಕೆದಂಬಾಡಿ ಸಣ್ಣಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದರು.

ಕ್ಯಾಪ್ಟನ್ ಡಿ.ಕೆ. ಚಿಣ್ಣಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕೊಡಗು ಜಿಲ್ಲಾ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಮೇಜರ್ ಜನರಲ್ ಬಿ.ಎ. ಕಾರ್ಯಪ್ಪ, ಮಾಜಿ ಸೈನಿಕರ ಸಂಘದ ಗೌರವಾಧ್ಯಕ್ಷ ಕರ್ನಲ್ ನಾರಾಯಣ ಮೂರ್ತಿ, ಕೊಡಗು ಜಿಲ್ಲಾ ಮಾಜಿ ಸೈನಿಕರ ಸಂಘದ ಕಾರ್ಯದರ್ಶಿ ಮೇಜರ್ ಚಿಂಗಪ್ಪ ಸುಂಟಿಕೊಪ್ಪ ಠಾಣಾಧಿಕಾರಿ ಎಂ.ಸಿ.ಶ್ರೀಧರ್, ಮಡಿಕೇರಿಯ ಗ್ರೂಪ್ ಕ್ಯಾಪ್ಟನ್ ಕೆ.ಎ. ಕಾರ್ಯಪ್ಪ ಪಾಲ್ಗೊಳ್ಳುವರು.

ಸಂಘದ ಕಟ್ಟಡದ ಸ್ಥಳದಾನಿಗಳಿಗೆ ಹಾಗೂ ಸಂಘದ ಸಂಸ್ಥಾಪಕರಿಗೆ ಸನ್ಮಾನಿಸಿ ಗೌರವಿಸಲಾಗುವುದು ಎಂದು ಮಾಹಿತಿ ನೀಡಿದರು. ಸಂಘದ ಉಪಾಧ್ಯಕ್ಷ ಮನು ನಂಜುಂಡ ಮಾತನಾಡಿ, ಬೆಳ್ಳಿಹಬ್ಬದ ಅಂಗವಾಗಿ 24 ರಂದು ಭಾನುವಾರ ಸಂಘದ ಸದಸ್ಯರಿಗೆ ಮತ್ತು ಕುಟುಂಬ ಸದಸ್ಯರಿಗೆ ಕುಶಾಲನಗರ ಮುಳ್ಳುಸೋಗೆ ಸರಕಾರಿ ಪ್ರಾಥಮಿಕ ಶಾಲೆ ಮೈದಾನದಲ್ಲಿ ಆಟೋಟ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು ಎಂದು ತಿಳಿಸಿದರು.

ಬೆಳ್ಳಿ ಹಬ್ಬದ ಆಚರಣೆ ಪ್ರಯುಕ್ತ ಕುಶಾಲನಗರ ಗೌಡ ಸಮಾಜದಲ್ಲಿ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಮತ್ತು ಕುಟುಂಬ ಸದಸ್ಯರಿಗೆ ಹಾಗೂ ಸಂಘದ ಮೃತಪಟ್ಟ ಸದಸ್ಯರ ಪತ್ನಿಯರಿಗೆ ಭೋಜನ ಕೂಟ ಏರ್ಪಡಿಸಲಾಗಿದೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ಮಾಹಿತಿ ನೀಡಿದರು. ಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಎಸ್.ಆರ್. ಮಾದಪ್ಪ, ಖಜಾಂಚಿ ನರೇಶ್ ಕುಮಾರ್ ಇದ್ದರು.

## ನಾಳೆ ಭಾಗಮಂಡಲದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ

ಮಡಿಕೇರಿ, ಸೆ.26– ಭಾಗಮಂಡಲದ ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯದಲ್ಲಿ ಜರುಗಲಿರುವ "ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ 2023" ರ ಜಾತ್ರಾ ಮಹೋತ್ಸವದ ಸಿದ್ಧತೆಗಳ ಬಗ್ಗೆ ಚರ್ಚಿಸಲು ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಅವರ ಅಧ್ಯಕ್ಷತೆಯಲ್ಲಿ ಸೆ.28 ರಂದು ಬೆಳಗ್ಗೆ 10.30 ಗಂಟೆಗೆ ಶ್ರೀ ಭಗಂಡೇಶ್ವರ ದೇವಾಲಯಕ್ಕೆ ಸೇರಿದ "ಮುಡಿ ಕಟ್ಟಡ"ದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ. "ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ–2023" ರ ಜಾತ್ರಾ ಮಹೋತ್ಸವದ ಸಿದ್ಧತೆಗಳ ಬಗ್ಗೆ ಚರ್ಚಿಸಲು ಸಂಘ ಸಂಸ್ಥೆಗಳ ಅಧ್ಯಕ್ಷರು, ಎಲ್ಲಾ ಸಮುದಾಯಗಳ ಮುಖಂಡರು, ಊರಿನ ಹಿರಿಯರು, ನಾಡಿನ ಎಲ್ಲಾ ದೇವಾಲಯಗಳ ತಕ್ಕಮುಖ್ಯಸ್ಥರುಗಳು ಮತ್ತು ಸಾರ್ವಜನಿಕರು ಆಗಮಿಸಿ ತಮ್ಮ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿ ತುಲಾ ಸಂಕ್ರಮಣ ಜಾತ್ರೆಯನ್ನು ಯಶಸ್ವಿಯಾಗಲು ಸಹಕರಿಸುವಂತೆ ದೇವಾಲಯದ ಕಾರ್ಯನಿರ್ವಹಣಾಧಿಕಾರಿ ಅವರು ಕೋರಿದ್ದಾರೆ.

### ಮುಖ್ಯಮಂತ್ರಿ ಆದ ಬಳಿಕ ಪ್ರಥಮ ಬಾರಿಗೆ

## ಇಂದು ಚಾಮರಾಜನಗರಕ್ಕೆ ಸಿಎಂ ಸಿದ್ದರಾಮಯ್ಯ





ಚಾಮರಾಜನಗರ, ಸೆ.26(ಎಸ್‌ಎಸ್)– ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ಬಳಿಕ ಸಿದ್ದರಾಮಯ್ಯ ಅವರು ಚಾಮರಾಜನಗರಕ್ಕೆ ನಾಳೆ (ಸೆ.27) ಪ್ರಥಮ ಬಾರಿಗೆ ಭೇಟಿ ನೀಡಲಿದ್ದಾರೆ.

ಜಿಲ್ಲೆಯ ಪ್ರಸಿದ್ಧ ಯಾತ್ರಾಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಿಂದ ರಸ್ತೆ ಮೂಲಕ ಮಧ್ಯಾಹ್ನ 2.30ಕ್ಕೆ ಚಾಮರಾಜನಗರಕ್ಕೆ ಆಗಮಿಸುವ ಮುಖ್ಯಮಂತ್ರಿಗಳು ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ಕಾಳಿದಾಸ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಚಾಮರಾಜನಗರ ತಾಲೂಕು ಕುರುಬರ ಸಂಘದಿಂದ ನಿರ್ಮಾಣವಾಗಲಿರುವ ಕನಕ ವಾಣಿಜ್ಯ ಸಂಕೀರ್ಣದ ಮೊದಲ ಹಂತದ ಕಟ್ಟಡ ಕಾಮಗಾರಿ ಗುದ್ದಲಿ ಪೂಜೆ ನೆರವೇರಿಸುವರು. ನಂತರ ನಗರದ ಜಿಪಂ ಸಭಾಂಗಣದಲ್ಲಿ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಸಂಜೆ 6 ಗಂಟೆಗೆ ಬೆಂಗಳೂರಿಗೆ ತೆರಳುವರು.

**ಸಿದ್ಧತೆ ಪೂರ್ಣ:** ನಾಳಿನ ಕಾರ್ಯಕ್ರಮಕ್ಕಾಗಿ ತಾಲೂಕು ಕುರುಬರ ಸಂಘ ಹಾಗೂ ಜಿಲ್ಲಾಡಳಿತ ಸಿದ್ಧತೆ ಕೈ ಗೊಂಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕನಕ ವಾಣಿಜ್ಯ ಸಂಕೀರ್ಣದ ಮೊದಲ ಹಂತದ ಕಟ್ಟಡ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸುವ ಹಿನ್ನೆಲೆಯಲ್ಲಿ ಕುರುಬರ ಸಂಘದ ಆವರಣದಲ್ಲಿ ವೇದಿಕೆ ಸಿದ್ಧಪಡಿಸಲಾಗಿದೆ. ಕೆ.ಆರ್.ನಗರ ಶ್ರೀಕ್ಷೇತ್ರದ ಕಾಗಿನೆಲೆ ಕನಕ ಗುರುಮಠದ ಶ್ರೀಶಿವಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಮಾಜಿ ಸಚಿವ ಹೆಚ್. ವಿಶ್ವನಾಥ್ ಸೇರಿದಂತೆ ಜಿಲ್ಲೆಯ ಶಾಸಕರು ಪಾಲ್ಗೊಳ್ಳಲಿದ್ದಾರೆ. ಬಳಿಕ ಸಿದ್ದರಾಮಯ್ಯನವರು ನಗರದಲ್ಲಿ ಕೆಡಿಪಿ ಸಭೆ ನಡೆಸುವುದರಿಂದ ಜಿಲ್ಲಾಡಳಿತ ಶಿಷ್ಟಾಚಾರದಂತೆ ಸಿದ್ಧತೆ ಕೈಗೊಂಡಿದೆ. ಅಲ್ಲದೇ ಸಿದ್ಧತೆಗಳನ್ನು ಜಿಲ್ಲಾಧಿಕಾರಿ ಶಿಲ್ಪಾನಾಗ್ ಪರಿಶೀಲಿಸಿದ್ದು, ಎಸ್ಪಿ ಪದ್ಮಿನಿ ಸಾಹು ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅದ್ದೂರಿಯಾಗಿ ಸ್ವಾಗತಿಸಲು ಎಲ್ಲಾ ರೀತಿಯ ಸಿದ್ಧತೆ ಕೈಗೊಳ್ಳಲಾಗಿದೆ. ಈ ಹಿಂದೆ ಮೊದಲಬಾರಿ ಸಿಎಂ ಆಗಿದ್ದ ವೇಳೆ ಸಿದ್ದರಾಮಯ್ಯ 16 ಬಾರಿ ನಗರಕ್ಕೆ ಭೇಟಿ ನೀಡಿ ದಾಖಲೆ ನಿರ್ಮಿಸಿದ್ದರು. 2ನೇ ಬಾರಿ ಸಿಎಂ ಆದ ಬಳಿಕ ನಗರಕ್ಕೆ ಸಿದ್ದರಾಮಯ್ಯನವರು ಪ್ರಥಮ ಬಾರಿ ಭೇಟಿ ನೀಡುತ್ತಿರುವುದು ಸಂತಸ ತಂದಿದೆ. ನಗರದ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು.
–ಉಮೇಶ್, ತಾಲೂಕು ಕುರುಬರ ಸಂಘದ ಅಧ್ಯಕ್ಷರು.

### ತಮಿಳುನಾಡಿಗೆ ನೀರು ಹರಿಸುವುದನ್ನು ಖಂಡಿಸಿ

## ಕಾವೇರಿ ಹೋರಾಟ ಕ್ರಿಯಾ ಸಮಿತಿಯಿಂದ ಅಂಚೆ ಚಳವಳಿ



ಚಾಮರಾಜನಗರ, ಸೆ.26– ರಾಜ್ಯ ಸರ್ಕಾರ ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಕಾವೇರಿ ಹೋರಾಟ ಕ್ರಿಯಾ ಸಮಿತಿಯಿಂದ ನಗರದಲ್ಲಿ ಅಂಚೆ ಚಳವಳಿ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಎದುರು ಸಮಾವೇಶಗೊಂಡ ಕಾವೇರಿ ಹೋರಾಟ ಕ್ರಿಯಾ ಸಮಿತಿ ಕಾರ್ಯಕರ್ತರು ತಮಿಳುನಾಡು, ಕೇಂದ್ರ, ರಾಜ್ಯ ಸರ್ಕಾರಗಳು ಹಾಗೂ ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಜಿಲ್ಲಾಡಳಿತ ಭವನ ಹಿಂಭಾಗದ ವಿವಿಧೋದ್ದೇಶ ಸಭಾಂಗಣದ ಮುಂಭಾಗ ಇರುವ ಅಂಚೆ ಬಾಕ್ಸ್‌ಗೆ ರಾಷ್ಟ್ರಪತಿಗಳಿಗೆ ಪತ್ರ ರವಾನಿಸಿ, ಕಾವೇರಿ ನೀರಿನ ವಿಚಾರದಲ್ಲಿ ಕರ್ನಾಟಕಕ್ಕೆ ನ್ಯಾಯ ದೊರಕಿಸಿಕೊಡುವಂತೆ ಮನವಿ ಮಾಡಲಾಯಿತು.

ಕಾವೇರಿ ಹೋರಾಟ ಕ್ರಿಯಾ ಸಮಿತಿ ಸಂಚಾಲಕ ಶಾ.ಮುರಳಿ ಮಾತನಾಡಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕನ್ನಡ ಚಳವಳಿಗಾರರ ಬಗ್ಗೆ ಟೀಕೆ ಮಾಡಿರುವುದು ಖಂಡನೀಯ. ಕಾವೇರಿ ಹೋರಾಟದಲ್ಲಿ ಜಿಲ್ಲಾ ತಮಿಳು ಸಂಘ ಭಾಗವಹಿಸಿರುವುದು ಸಂತಸದ ವಿಚಾರ ಎಂದರು.

ಜಿಲ್ಲಾ ತಮಿಳು ಸಂಘದ ಪ್ರಧಾನ ಕಾರ್ಯದರ್ಶಿ ಜಗದೀಶ್ ಮಾತನಾಡಿ, ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಇಂತಹ ಸಂದರ್ಭದಲ್ಲೂ ಸುಪ್ರೀಂಕೋರ್ಟ್ ತಮಿಳುನಾಡಿಗೆ ನೀರು ಹರಿಸುವಂತೆ ಅವೈಜ್ಞಾನಿಕ ತೀರ್ಪು ನೀಡಿದೆ. ಇದನ್ನು ಕರ್ನಾಟಕ ತಮಿಳು ಸಂಘ ತೀವ್ರವಾಗಿ ಖಂಡಿಸುತ್ತದೆ ಎಂದರು.

ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಕಾವೇರಿ ಹೋರಾಟ ರಾಜ್ಯದಲ್ಲಿ ದಿನೇ ದಿನೇ ಹೆಚ್ಚಾಗುತ್ತಿದ್ದು, ಅದರಂತೆ ನಗರದಲ್ಲೂ ಹೋರಾಟ ಮಾಡಲಾಗುತ್ತಿದೆ. ಹೀಗಾಗಿ ರಾಷ್ಟ್ರಪತಿಗಳು ಮಧ್ಯ ಪ್ರವೇಶಿಸಿ ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದರು. ಸಮಿತಿಯ ಸಿ.ಎಂ.ಕೃಷ್ಣಮೂರ್ತಿ ಮಾತನಾಡಿ, ಶುಕ್ರವಾರ ಕರ್ನಾಟಕ ಬಂದ್‌ಗೆ ಕರೆ ಕೊಟ್ಟಿದ್ದಾರೆ. ಅಂದು ಚಾಮರಾಜನಗರದಲ್ಲೂ ಬಂದ್ ಯಶಸ್ವಿಗೊಳಿಸಬೇಕು. ಗೃಹ ಸಚಿವ ಜಿ.ಪರಮೇಶ್ವರ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೆಂಗಳೂರಿನಲ್ಲಿ 144 ಸೆಕ್ಷನ್ ಜಾರಿ ಮಾಡಿ ಇಬ್ಬಗೆಯ ನೀತಿ ಪ್ರದರ್ಶಿಸಿದ್ದಾರೆ. ಕೂಡಲೇ 144 ಜಾರಿ ರದ್ದು ಮಾಡಬೇಕು. ಕಾವೇರಿ ಚಳವಳಿಗಾರರ ಮೇಲೆ ಯಾವುದೇ ಕ್ರಮ ಕೈಗೊಳ್ಳಬಾರದು. ಏನಾದರೂ ತೊಂದರೆ ಕೊಟ್ಟರೇ ಮುಂದಿನ ಲೋಕಸಭಾ ಚುನಾವಣೆಯಲ್ಲಿ ತಕ್ಕಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಬ್ರಾರ್ ಅಹಮದ್, ಡಾ. ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್ ಹಾಗೂ ದಲಿತ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಂಚಾಲಕ ಕೆ.ಎಂ.ನಾಗರಾಜು ಮಾತನಾಡಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ತಮಿಳು ಸಂಘದ ಗೌರವಾಧ್ಯಕ್ಷ ಎಸ್.ಆರ್.ಪೊನ್ನಸ್ವಾಮಿ, ಖಜಾಂಚಿ ಎಸ್.ಆರ್.ರಾಮಸ್ವಾಮಿ, ಎಸ್‌ಡಿಪಿಐ ಜಿಲ್ಲಾ ಕಾರ್ಯದರ್ಶಿ ಇರ್ಷಾನ್, ಖಜಾಂಚಿ ನಯಾಜ್, ನಗರಸಭಾ ಸದಸ್ಯರಾದ ಎಂ. ಮಹೇಶ್, ಮೊಹಮ್ಮದ್ ಅಮೀಕ್, ಖಲೀಲ್‌ಉಲ್ಲಾ, ಮಾಜಿ ಸದಸ್ಯ ಸಿ.ಎಸ್.ಸೈಯದ್‌ಆರೀಫ್, ರಾಜು, ಗು.ಪುರುಷೋತ್ತಮ್, ಚಾ.ಹ.ಶಿವರಾಜ್, ತಾಂಡವಮೂರ್ತಿ, ವೀರಭದ್ರ, ಸುರೇಶ್, ಸಾಗರ್ ರಾವತ್, ಚಾ.ಹ.ಶಿವರಾಜ್, ಮಂಜು ಇತರರಿದ್ದರು.

### ನಗರಕ್ಕೆ ಸಿಎಂ ಭೇಟಿ ಹಿನ್ನೆಲೆ

## ಗುಂಡಿಗಳಿಗೆ ತೇಪೆ, ಮಣ್ಣು ತೆರವು, ಗಿಡಗಂಟಿಗಳು ಮಾಯ

### ಸಾರ್ವಜನಿಕರ ಟೀಕೆಗೆ ಗುರಿಯಾದ ಅಧಿಕಾರಿಗಳ ಕಾರ್ಯವೈಖರಿ



ಚಾಮರಾಜನಗರ, ಸೆ.26– ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ನಗರಕ್ಕೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡಿರುವುದು ಸಾರ್ವಜನಿಕರ ಟೀಕೆಗೆ ಗುರಿಯಾಗಿದೆ.

ಮಲೆ ಮಹದೇಶ್ವರ ಬೆಟ್ಟದಿಂದ ರಸ್ತೆ ಮೂಲಕ ಚಾಮರಾಜನಗರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸುತ್ತಿರುವುದರಿಂದ ಈ ಮಾರ್ಗದಲ್ಲಿ ಅಲ್ಲಲ್ಲಿ ಬಿದ್ದಿದ್ದ ಗುಂಡಿಗಳನ್ನು ಮುಚ್ಚಲಾಗಿದೆ. ಅಲ್ಲದೇ ರಸ್ತೆ ಎರಡೂ ಬದಿಯಲ್ಲಿ ಬೆಳೆದಿದ್ದ ಗಿಡಗಂಟಿಗಳನ್ನು ತೆರವುಗೊಳಿಸಲಾಗಿದೆ.

ನಗರದ ಡಿವಿಯೇಷನ್ ರಸ್ತೆ, ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿನ ಮಣ್ಣು ತೆರವುಗೊಳಿಸಿ, ರಸ್ತೆ ಸ್ವಚ್ಛಗೊಳಿಸಲಾಗಿದೆ. ಅಲ್ಲದೇ ನಗರದ ರೇಷ್ಮೆಗೂಡಿನ ಮುಂಭಾಗದಿಂದ ತಹಸೀಲ್ದಾರ್ ಕಚೇರಿವರೆಗೆ ಹಲವು ವರ್ಷಗಳಿಂದ ಬಿದ್ದಿದ್ದ ಗುಂಡಿಗಳನ್ನು ತರಾತುರಿಯಲ್ಲಿ ಮುಚ್ಚಿರುವುದು ಸಾರ್ವಜನಿಕರ ಚರ್ಚೆಗೆ ಗ್ರಾಸವಾಗಿದೆ.

ರಸ್ತೆಯಲ್ಲಿದ್ದ ಗುಂಡಿಗಳನ್ನು ಮುಚ್ಚಲು, ಮಣ್ಣು ತೆರವು ಮಾಡಲು, ಸ್ವಚ್ಛಗೊಳಿಸಲು, ಗಿಡ–ಗಂಟಿಗಳನ್ನು ತೆರವುಗೊಳಿಸಲು ಮುಖ್ಯಮಂತ್ರಿಗಳೇ ಬರಬೇಕಾಯಿತೇ ಎಂಬ ನಾನಾ ಪ್ರಶ್ನೆಗಳು ನಾಗರಿಕರಲ್ಲಿ ಮೂಡಿದೆ. ಇಲ್ಲಿವರೆಗೆ ಈ ಕೆಲಸಗಳ ಬಗ್ಗೆ ಮೌನ ವಹಿಸಿದ್ದ ಅಧಿಕಾರಿಗಳು ಈಗ ಮುಖ್ಯಮಂತ್ರಿಗಳು ಬರುತ್ತಾರೆ ಎಂಬ ಕಾರಣಕ್ಕೆ ಸ್ವಚ್ಛತೆಗೆ ಮುಂದಾಗಿರುವುದು ಎಷ್ಟು ಸರಿ? ಇದುವರೆಗೂ ಈ ಕೆಲಸ ಮಾಡಲು ಇಲ್ಲದ ಹಣ ಈಗ ಎಲ್ಲಿಂದ ಬಂತು ಎಂಬ ಪ್ರಶ್ನೆ ನಾಗರಿಕರದ್ದಾಗಿದೆ.

ಮುಖ್ಯಮಂತ್ರಿಗಳು ಬರುತ್ತಾರೆ ಎಂಬ ಕಾರಣಕ್ಕೆ ಮಾತ್ರ ಸ್ವಚ್ಛಗೊಳಿಸುವುದಾದರೆ, ಅವರು ಪ್ರತಿ ತಿಂಗಳು ನಗರಕ್ಕೆ ಅಥವಾ ಜಿಲ್ಲೆಗೆ ಭೇಟಿ ನೀಡಲಿ, ಆಗಲಾದರೂ ನಗರ ಸ್ವಚ್ಛಗೊಳ್ಳುತ್ತದೆ ಎಂಬುದು ಪ್ರಜ್ಞಾವಂತ ನಾಗರಿಕರ ಅಭಿಪ್ರಾಯ.

## ಮಹದೇಶ್ವರ ಬೆಟ್ಟಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮನ: ಅದ್ದೂರಿ ಸ್ವಾಗತ



ಚಾಮರಾಜನಗರ, ಸೆ.26– ಶ್ರೀಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದಿಂದ ನಡೆಯುವ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮಂಗಳವಾರ ರಾತ್ರಿ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು.

ರಾತ್ರಿ 9.50ಕ್ಕೆ ಬೆಟ್ಟಕ್ಕೆ ಆಗಮಿಸಿದ ಮುಖ್ಯಮಂತ್ರಿ ಅವರನ್ನು ಗೊರುಕನ ನೃತ್ಯ, ವೀರ ಮಕ್ಕಳ ಕುಣಿತ, ಡೊಳ್ಳು ಕುಣಿತ, ತಮಟೆ ವಾದ್ಯ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ಬರಮಾಡಿಕೊಳ್ಳಲಾಯಿತು.

ನಂತರ ಅವರು ಇಲ್ಲಿನ ರಾಷ್ಟ್ರಪತಿ ಭವನಕ್ಕೆ ತೆರಳಿ ವಾಸ್ತವ್ಯ ಹೂಡಿದರು. ಮುಖ್ಯಮಂತ್ರಿಗಳ ಜೊತೆ ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ ಪ್ರಸಾದ್, ಎಂ.ಆರ್.ಮಂಜುನಾಥ್, ಮಾಜಿ ಶಾಸಕ ಆರ್. ನರೇಂದ್ರ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಐಜಿ ಬೋರಲಿಂಗೇಗೌಡ, ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಎಸ್‌ಪಿ ಪದ್ಮಿನಿ ಸಾಹೋ, ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ಇತರರು ಹಾಜರಿದ್ದರು.

ಇದಕ್ಕೂ ಮುನ್ನಾ ಸಂಜೆ ಮೈಸೂರಿನಿಂದ ಕಾರಿನಲ್ಲಿ ಹೊರಟ ಮುಖ್ಯಮಂತ್ರಿಯವರು ತಿ.ನರಸೀಪುರ ಮಾರ್ಗವಾಗಿ ಮೂಗೂರಿಗೆ ಆಗಮಿಸಿ ಪ್ರತಿಭಟನಾನಿರತ ರೈತರ ಜೊತೆ ಕಾವೇರಿ ನೀರಿನ ಕುರಿತ ವಾಸ್ತವ ಸಂಗತಿ ವಿವರಿಸಿ ಚರ್ಚಿಸಿದರು.

ನಂತರ ಕೊಳ್ಳೇಗಾಲಕ್ಕೆ ಆಗಮಿಸಿ ಮಾಜಿ ಶಾಸಕ ಆರ್.ನರೇಂದ್ರ ಅವರ ಮನೆಗೆ ಭೇಟಿ ನೀಡಿ, ಉಪಾಹಾರ ಸೇವಿಸಿದರು. ಬಳಿಕ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಅಲ್ಲಿಂದ ನೇರವಾಗಿ ಹನೂರಿನ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡಿದ್ದರು. ತದನಂತರ ಮಲೆ ಮಹದೇಶ್ವರ ಬೆಟ್ಟದ ರಾಷ್ಟ್ರಪತಿ ಭವನಕ್ಕೆ ತೆರಳಿ ವಾಸ್ತವ್ಯ ಹೂಡಿದರು.

## ಪತ್ರಿಕಾ ವಿತರಕರ ಮೌನ ಪ್ರತಿಭಟನೆ



ಚಾಮರಾಜನಗರ, ಸೆ.26– ಚಾಮರಾಜನಗರ ಜಿಲ್ಲಾ ಪತ್ರಿಕಾ ವಿತರಕರ ಸಂಘದ ಸದಸ್ಯರು ಮಂಗಳವಾರ ಕಪ್ಪುಪಟ್ಟಿ ಕಟ್ಟಿಕೊಂಡು ಮೌನ ಪ್ರತಿಭಟನೆ ನಡೆಸುವ ಮೂಲಕ ಕಾವೇರಿ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ನಗರದ ಭುವನೇಶ್ವರಿ ವೃತ್ತದ ಬಳಿ ಮಂಗಳವಾರ ಬೆಳಗಿನ ಜಾವ ಜಮಾಯಿಸಿದ ವಿತರಕರು ತೋಳಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಪತ್ರಿಕೆಗಳನ್ನು ವಿತರಣೆ ಮಾಡಿ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಈ ಸಂದರ್ಭ ಸಂಘದ ಅಧ್ಯಕ್ಷ ಪುರುಷೋತ್ತಮ್, ಪ್ರಧಾನ ಕಾರ್ಯದರ್ಶಿ ಅಕ್ಷಯ್, ಪದಾಧಿಕಾರಿಗಳಾದ ಸಿದ್ದಲಿಂಗಸ್ವಾಮಿ, ಎಂ.ಲಿಂಗಪ್ಪ ಎಚ್.ಎಸ್. ಚಂದ್ರಶೇಖರ್, ಎಲ್.ಶಿವಲಿಂಗಮೂರ್ತಿ, ಪ್ರತಾಪ್, ನವೀನ್‌ಕುಮಾರ್, ಶಿವು, ಪವನ್, ಮಹೇಂದ್ರ ಹಿದಾಯಿತ್, ಮಹದೇವಪ್ರಸಾದ್ ಇತರರಿದ್ದರು.

## ವಿಶ್ವ ಹಿರಿಯ ನಾಗರಿಕರ ದಿನಾಚರಣೆ

ಚಾಮರಾಜನಗರ, ಸೆ.26– ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ಹಿರಿಯ ನಾಗರಿಕ ಸಬಲೀಕರಣ ಕ್ಷೇತ್ರದಲ್ಲಿ ಭಾಗಿಯಾಗಿರುವ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ಅ.1ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಮೂರನೇ ಪುಟದಿಂದ

## ತಮಿಳುನಾಡಿನ ಬೆಳೆಗೆ ನೀರು ಬೇಕಂತೆ...

ಪ್ರದೇಶದ ಕೆಆರ್‌ಎಸ್, ಕಬಿನಿ, ಹಾರಂಗಿ ಹಾಗೂ ಹೇಮಾವತಿಯ ನಾಲ್ಕು ಜಲಾಶಯದಲ್ಲಿ ಒಟ್ಟು 50 ಟಿಎಂಸಿ ನೀರು ಶೇಖರಣೆಯಾಗಿದೆ. ಹೀಗಿರುವಾಗ ತಮಿಳುನಾಡು ಕೇಳಿದಷ್ಟು ನೀರು ಬಿಡಲು ಹೇಗೆ ಸಾಧ್ಯ? ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ವಸ್ತು ಸ್ಥಿತಿಯನ್ನು ನಮ್ಮ ವಕೀಲರು ಮನವರಿಕೆ ಮಾಡಿಕೊಟ್ಟಿದ್ದಾರೆ. ನ್ಯಾಯಾಲಯದಲ್ಲಿ ಕೂಡ ಸಮರ್ಥ ವಾದ ಮಂಡಿಸಿದ್ದಾರೆ. ಆದರೂ ತಮಿಳುನಾಡಿಗೆ ಅರ್ಥ ಆಗುತ್ತಿಲ್ಲವಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಮಗೆ ಕುಡಿಯಲು ನೀರಿಲ್ಲದ ಪರಿಸ್ಥಿತಿಯಲ್ಲಿ ತಮಿಳುನಾಡು ಕುರುವೈ ಬೆಳೆಗೆ ನೀರು ಕೇಳುತ್ತಿದೆ. ನಮ್ಮ ಜಲಾಶಯ ಬರಿದಾಗುತ್ತಿರುವ ಕಾರಣ ನೀರು ಬಿಡಲ್ಲ ಎಂದು ಹೇಳುತ್ತಿದ್ದೇವೆ. ಈ ಕಾರಣದಿಂದ ತಮಿಳುನಾಡು ಹಾಗೂ ಕರ್ನಾಟಕದ ನಡುವೆ ಘರ್ಷಣೆ ನಡೆಯುತ್ತಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

**ಕಾವೇರಿ ವಿಷಯದಲ್ಲಿ ರಾಜಕಾರಣ:** ವಸ್ತು ಸ್ಥಿತಿ ತಿಳಿದಿದ್ದರೂ ಬಿಜೆಪಿ ಹಾಗೂ ಜೆಡಿಎಸ್‌ನವರು ಕಾವೇರಿ ವಿಚಾರದಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್ ಸರ್ಕಾರದ ಅವಧಿಯಲ್ಲಿದ್ದ ವಕೀಲರೇ ಈಗಲೂ ಇದ್ದಾರೆ. ಹೀಗಿರುವಾಗ ನಮ್ಮ ವಕೀಲರು ಸಮರ್ಥ ವಾದ ಮಾಡಿಲ್ಲ ಎಂದು ಆರೋಪಿಸಿದರೆ ಇದಕ್ಕೆ ಅರ್ಥವಿದೆಯೇ ಎಂದು ಪ್ರಶ್ನಿಸಿದರು.

ಹಿರಿಯ ವಕೀಲ ಅನಿಲ್ ಧವನ್ ಕರ್ನಾಟಕದ ಪರವಾಗಿ ಸಮರ್ಥ ವಾದ ಮಂಡಿಸಿದ್ದಾರೆ. ವಸ್ತು ಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಇದೆಲ್ಲಾ ತಿಳಿದಿದ್ದರೂ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಏನೋ ಕಳೆದುಕೊಂಡವರಂತೆ ವರ್ತಿಸುತ್ತಿದ್ದಾರೆ ಎಂದು ಸಿದ್ದರಾಮಯ್ಯ ಕಿಡಿಕಾರಿದರು. ಜಾನುವಾರುಗಳಿಗೆ ಎದುರಾಗುವ ರೋಗಗಳನ್ನು ತಕ್ಷಣ ನಿವಾರಣೆ ಮಾಡಬೇಕು. ಜಾನುವಾರು ರಕ್ಷಣೆ ಮಾಡಿದರೆ ಹಾಲಿನ ಉತ್ಪನ್ನದಿಂದ ನಾಡಿನ ಸಂಪತ್ತು ಹೆಚ್ಚಾಗುತ್ತದೆ. ಇದರಿಂದ ಸಹಜವಾಗಿಯೇ ಜಿಡಿಪಿ ಬೆಳವಣಿಗೆ ಸಾಧ್ಯವಾಗುತ್ತದೆ. ಇಡೀ ದೇಶದಲ್ಲಿ ಹೈನುಗಾರಿಕೆಯಲ್ಲಿ ಗುಜರಾತ್ ಬಿಟ್ಟರೆ ಕರ್ನಾಟಕ ಎರಡನೇ ಸ್ಥಾನದಲ್ಲಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಈ ವೇಳೆ ಕಿರಿಯ ವೈದ್ಯಕೀಯ ಪರಿವೀಕ್ಷಕರಿಗೆ ಸಿದ್ದರಾಮಯ್ಯ ನೇಮಕಾತಿ ಪತ್ರ ವಿತರಣೆ ಮಾಡಿದರು. ಮೈಸೂರು, ಮಂಡ್ಯ, ಚಾಮರಾಜನಗರ ಸೇರಿದಂತೆ ಹಲವು ಜಿಲ್ಲೆಗಳಿಂದ ಸಾವಿರಾರು ಪಶು ಸಖಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಡಾ.ತಿಮ್ಮಯ್ಯ, ಕೆ.ಹರೀಶ್‌ಗೌಡ, ಡಿ.ರವಿಶಂಕರ್, ದರ್ಶನ್ ಧ್ರುವ ನಾರಾಯಣ್, ಪಂಚಾಯತ್ ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್, ಕಾರ್ಯದರ್ಶಿ ಸಲ್ಮಾ ಕೆ.ಫಾಹಿಂ, ಕರ್ನಾಟಕ ರಾಜ್ಯ ಗ್ರಾಮೀಣ ಸಂಸ್ಥೆಯ ಅಭಿಯಾನ ನಿರ್ದೇಶಕ ಡಾ.ರಾಗಪ್ರಿಯ, ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯ ಆಯುಕ್ತ ಪ್ರಭುಲಿಂಗ ಕವಳಿಕಟ್ಟಿ, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಸೇರಿದಂತೆ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಕೇಂದ್ರ ಜಲಶಕ್ತಿ ಸಚಿವರ ಸಮ್ಮತಿ

ನದಿ ಪ್ರಾಧಿಕಾರ ಹಾಗೂ ಸುಪ್ರೀಂ ಕೋರ್ಟ್ ಮುಂದೆ ಸರಿಯಾದ ದಾಖಲೆ ಹಾಗೂ ವಾದವನ್ನು ಮಂಡಿಸಲಿಲ್ಲ. ನೀರು ಬಿಟ್ಟ ನಂತರ ಪರಿಸ್ಥಿತಿ ಕೈ ಮೀರಿದ ಮೇಲೆ ದೆಹಲಿಯಲ್ಲಿ ಒಂದು ಸಭೆ ಮಾಡಿದರು. ಆ ಸಂದರ್ಭದಲ್ಲಿ ಕೇಂದ್ರ ಜಲ ಸಂಪನ್ಮೂಲ ಸಚಿವರನ್ನು ಭೇಟಿ ಮಾಡಿ ವಾಸ್ತವ ಸ್ಥಿತಿಯನ್ನು ವಿವರಿಸಿದರು. ಆಮೇಲೆ ಕೇಂದ್ರ ಸಚಿವರು ಕರ್ನಾಟಕ ಹಾಗೂ ತಮಿಳುನಾಡಿಗೆ ತಜ್ಞರ ತಂಡವನ್ನು ಕಳುಹಿಸಿ ಡ್ಯಾಮ್‌ಗಳಲ್ಲಿ ಎಷ್ಟೆಷ್ಟು ನೀರಿದೆ ಎಂಬ ಬಗ್ಗೆ ಪರಿಶೀಲನೆ ನಡೆಸಿ ವರದಿ ತರಿಸಿಕೊಳ್ಳುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಕಾವೇರಿ ನೀರಿನ ವಿಚಾರದಲ್ಲಿ ರೈತರು ನಡೆಸುತ್ತಿರುವ ಹೋರಾಟಕ್ಕೆ ನಮ್ಮ ಬೆಂಬಲ ಇದೆ. ಆದರೆ ಆಸ್ತಿ ಪಾಸ್ತಿಗೆ ಹಾನಿ ಮಾಡಿದರೆ ನಮಗೇ ನಷ್ಟ ಆದ್ದರಿಂದ ಶಾಂತಿಯುತ ಪ್ರತಿಭಟನೆ ಮಾಡಬೇಕು. ರಾಜ್ಯದಲ್ಲಿ ಕಾಂಗ್ರೆಸ್ ನಾಯಕರು ತಮಿಳುನಾಡನ್ನು ಓಲೈಕೆ ಮಾಡುವುದರಲ್ಲಿ ಮುಂದಾಗಿದ್ದಾರೆ. ಇದರಿಂದ ನ್ಯಾಯಾಲಯಕ್ಕೆ ಸರಿಯಾದ ಅಂಕಿ ಅಂಶ ನೀಡಿಲ್ಲ. ಪ್ರಧಾನಿಯನ್ನು ದೂರುವ ಕೆಲಸ ಮಾಡುತ್ತಿದ್ದಾರೆ. ನೀರನ್ನು ಬಿಟ್ಟು ಈಗ ಪ್ರಧಾನಿಯವರ ಮಧ್ಯಸ್ಥಿಕೆಗೆ ಮನವಿ ಮಾಡುತ್ತಿರುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ಕೇಂದ್ರ ಸರ್ಕಾರ ಹಾಗೂ ಬಿಜೆಪಿ ಪಕ್ಷ ಕರ್ನಾಟಕದ ಭಾಷೆ, ನೆಲ, ಜಲದ ವಿಷಯ ಬಂದಾಗ ಕೈ ಜೋಡಿಸಲು ಸಿದ್ಧರಿದ್ದೇವೆ. ಮೊನ್ನೆ ದೆಹಲಿಯ ಸಭೆಯಲ್ಲೂ ರಾಜ್ಯ ಸರ್ಕಾರಕ್ಕೆ ಸಹಕಾರ ಕೊಟ್ಟಿದ್ದೇವೆ. ಮುಂದೆ ನಮಗೆ ಎಷ್ಟು ಪ್ರಮಾಣದ ನೀರು ಬೇಕು ಎಂಬ ಬಗ್ಗೆ ಕಾವೇರಿ ಪ್ರಾಧಿಕಾರ ಹಾಗೂ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಬೇಕೆಂದು ಆಗ್ರಹಿಸಿದರು.

## ಆನ್‌ಲೈನ್‌ನಲ್ಲಿ ತೆರಿಗೆ ಪಾವತಿ

ಅಧಿಕಾರಿ ಅದನ್ನು ಪರಿಶೀಲಿಸಿ ನಿಯಮಾನುಸಾರ ಕಂಪ್ಯೂಟರ್‌ನಲ್ಲಿ ತಿದ್ದುಪಡಿ ಮಾಡುತ್ತಾರೆ. ಒಂದು ವೇಳೆ ಇದರಲ್ಲಿ ಅವ್ಯವಹಾರ ನಡೆಸಿದರೆ ಮುಂದೊಂದು ದಿನ ಆ ಅಧಿಕಾರಿಯೇ ಸಿಕ್ಕಿ ಬೀಳುತ್ತಾನೆ.

ಇದ್ಯಾವುದಕ್ಕೂ ಆಸ್ಪದ ನೀಡದಂತೆ ಈಗ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಸ್ತಿ ತೆರಿಗೆ ಪಾವತಿ ವ್ಯವಸ್ಥೆಯನ್ನು ಡಿಜಿಟಲೀಕರಣಗೊಳಿಸಲಾಗಿದೆ. ಆಸ್ತಿಯ ಪ್ರತಿಯೊಂದು ವಿವರವೂ ಪಕ್ಕಾ ಪಾರದರ್ಶಕವಾಗಿರುತ್ತದೆ. ಈ ಮೊದಲು ಆಸ್ತಿ ತೆರಿಗೆ ಪಾವತಿಸಲು ಜನರು ಗ್ರಾಮ ಪಂಚಾಯಿತಿಗೆ ಹೋಗಬೇಕಿತ್ತು. ಆದರೆ ಈಗ ಮನೆ ಬಾಗಿಲಿಗೆ ಬರುವ ಬಿಲ್ ಕಲೆಕ್ಟರ್‌ಗೆ ತೆರಿಗೆ ಪಾವತಿ ಮಾಡಬಹುದು. ಬಿಲ್ ಕಲೆಕ್ಟರ್ ಡಿಒಎಸ್ ಯಂತ್ರದ ಮೂಲಕ ಸ್ಥಳದಲ್ಲೆ ಪ್ರಿಟೆಂಡ್ ಬಿಲ್ ಕೊಡುತ್ತಾನೆ.

ಮೈಸೂರಿನ 256 ಗ್ರಾಮ ಪಂಚಾಯತ್‌ಗಳಿಗೆ ಈಗ ಪಿಒಎಸ್ ಯಂತ್ರಗಳನ್ನು ನೀಡಲಾಗಿದೆ. ಈ ಯಂತ್ರಗಳ ಬಳಕೆ ಬಗ್ಗೆ ಈಗಾಗಲೇ ಸಿಬ್ಬಂದಿಗೆ ತರಬೇತಿ ಕೂಡ ನೀಡಲಾಗಿದೆ. ಇದರಿಂದ ಎಲ್ಲಾ ಪಂಚಾಯಿತಿಗಳು ಹೈಟೆಕ್ ಆಗಿದೆ.

ಪ್ರಸಕ್ತ ಆರ್ಥಿಕ ವರ್ಷ ಪಾವತಿಯಾಗಿರುವ ತೆರಿಗೆ ಎಷ್ಟು, ಬಾಕಿ ಇರುವ ತೆರಿಗೆ ಎಷ್ಟು ಎಂಬ ಮಾಹಿತಿಗಳು ಖಚಿತವಾಗಿ ತಿಳಿಯುತ್ತದೆ. ಇದರಿಂದ ತೆರಿಗೆ ಬಾಕಿ ವಸೂಲಾತಿ ಕೂಡ ಚುರುಕಿನಿಂದ ಆಗುತ್ತದೆ. ಒಟ್ಟಾರೆ ಆಧುನಿಕತೆಯ ತಂತ್ರಜ್ಞಾನದ ಕ್ರಾಂತಿ ಈಗ ಗ್ರಾಮ ಮಟ್ಟಕ್ಕೂ ತಲುಪಿದೆ.

## ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ

ಚಿತ್ರರಂಗಕ್ಕೆ ನೀಡಿದ ಕೊಡುಗೆಗಾಗಿ ವಹೀದಾ ರೆಹಮಾನ್ ಜಿ ಅವರಿಗೆ ಈ ವರ್ಷ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಗುತ್ತಿದೆ ಎಂದು ಘೋಷಿಸಲು ನನಗೆ ಅಪಾರ ಸಂತೋಷ ಮತ್ತು ಹೆಮ್ಮೆಯಾಗುತ್ತಿದೆ ಎಂದಿದ್ದಾರೆ. 85 ವರ್ಷದ ವಹೀದಾ ರೆಹಮಾನ್ ಅವರು 1955ರ ತೆಲುಗು ಚಿತ್ರಗಳಾದ 'ರೋಜುಲು ಮರಾಯಿ' ಮತ್ತು 'ಜಯಸಿಂಹ'ದಲ್ಲಿ ನಟನೆ ಮೂಲಕ ಬಣ್ಣದ ಬದುಕು ಪ್ರವೇಶಿಸಿದರು. 1956ರ ದೇವ್ ಆನಂದ್ ಅವರೊಂದಿಗೆ 'ಸಿಐಡಿ' ಚಿತ್ರದಲ್ಲಿ ಅಭಿನಯಿಸುವ ಮೂಲಕ ಹಿಂದಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ರೆಹಮಾನ್ ಕೊನೆಯ ಬಾರಿಗೆ 2021ರಲ್ಲಿ 'ಸ್ಕೇಟರ್ ಗರ್ಲ್' ಚಿತ್ರದಲ್ಲಿ ಕಾಣಿಸಿಕೊಂಡಿದ್ದರು. ಐದು ದಶಕಗಳ ಕಾಲದ ವೃತ್ತಿಜೀವನದಲ್ಲಿ, ಪೌರಾಣಿಕ ಚಿತ್ರಗಳು ಸೇರಿದಂತೆ ವಿವಿಧ ಭಾಷೆಗಳಲ್ಲಿ 90 ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. 1971ರಲ್ಲಿ 'ರೇಷ್ಮಾ ಮತ್ತು ಶೇರಾ' ಚಿತ್ರಗಳಲ್ಲಿ ಕುಲದ ಮಹಿಳೆಯ ಪಾತ್ರಕ್ಕಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪಡೆದಿದ್ದ ರೆಹಮಾನ್ ಅವರು, ಈಗಾಗಲೇ ಪದ್ಮಶ್ರೀ ಮತ್ತು ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ.

## 3000 ಕ್ಯುಸೆಕ್ ನೀರು ಬಿಡಿ

ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಇದಕ್ಕೆ ಪ್ರತಿಯಾಗಿ ವಾದ ಮಂಡಿಸಿದ ತಮಿಳುನಾಡು, ಕರ್ನಾಟಕವು ಸಹ ಸಂಕಷ್ಟದ ಅನುಪಾತದ ಆಧಾರದ ಮೇಲೆ ನೀರಾವರಿ ಪ್ರದೇಶ ಕಡಿಮೆ ಮಾಡಬೇಕು. ಆದರೆ, ತಕ್ಷಣವೇ ಕೊರತೆ ಇರುವ ನೀರು ಬಿಡುಗಡೆ ಮಾಡಬೇಕು. ಸಂಕಷ್ಟದ ಅನುಪಾತದ ಆಧಾರದ ಮೇಲೆ ಮತ್ತಷ್ಟು ನೀರು ಬಿಡುಗಡೆ ಮಾಡುವಂತೆ ಅಂದರೆ 16500 ಕ್ಯುಸೆಕ್ ನೀರು ಹರಿಸುವಂತೆ ಸಮಿತಿ ಮುಂದೆ ಮನವಿ ಮಾಡಿತು.

ಎರಡು ರಾಜ್ಯಗಳ ಅಧಿಕಾರಿಗಳು ಮಂಡಿಸಿದ ವಾದ ಮತ್ತು ಮಾಹಿತಿ ಆಧರಿಸಿ ಅಂತಿಮವಾಗಿ ಸಮಿತಿ ಮೂರು ಸಾವಿರ ಕ್ಯುಸೆಕ್ ನೀರನ್ನು ಅಕ್ಟೋಬರ್ 15ರವರೆಗೂ ತಮಿಳುನಾಡಿಗೆ ಬಿಡುವಂತೆ ಕರ್ನಾಟಕಕ್ಕೆ ಆದೇಶ ಮಾಡಿತು.

## 'ಬೆಂಗಳೂರು ಬಂದ್' ಮಿಶ್ರ ಪ್ರತಿಕ್ರಿಯೆ

ತಡೆದ ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದರು. ರೈತ ಸಂಘಟನೆ ಮತ್ತು ಕನ್ನಡಪರ ಸಂಘಟನೆಗಳು ಫ್ರೀಡಂಪಾರ್ಕ್‌ನಲ್ಲಿ ನಡೆಸುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಸರ್ಕಾರದ ಪರವಾಗಿ ತೆರಳಿದ ಸಚಿವ ರಾಮಲಿಂಗಾರೆಡ್ಡಿ ಅವರಿಂದ ಮನವಿ ಪತ್ರ ಪಡೆದು, ಮುಖ್ಯಮಂತ್ರಿಗಳ ಗಮನಕ್ಕೆ ತರುವುದಾಗಿ ತಿಳಿಸಿದರು. ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದರು. ಪ್ರತಿಭಟನಾ ನಿರತ ರಾಜಕೀಯ ಪಕ್ಷಗಳ ಕೆಲವು ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದರು. ಹೀಗಾಗಿ ಯಾವುದೇ ಅಹಿತಕರ ಘಟನೆ ಜರುಗದೆ, ರಾಜಧಾನಿ ಬೆಂಗಳೂರು ಬಂದ್ ಶಾಂತಿಯುತವಾಗಿ ಯಶಸ್ವಿಯಾಯಿತು.

## ಸರ್ಕಾರದ ಕ್ರಮ ನೋಡಿ ಪ್ರತಿಕ್ರಿಯೆ

ಪರಿಶೀಲಿಸಲಿ ಎಂದರು. ಎರಡು ರಾಜ್ಯಗಳ ಜಲಾಶಯಗಳ ಸ್ಥಿತಿಗತಿ ಹಾಗೂ ಬರ ಪರಿಸ್ಥಿತಿಯನ್ನು ಅವಲೋಕಿಸಿ, ತೀರ್ಮಾನ ಕೈಗೊಳ್ಳುವ ಅವಶ್ಯಕತೆ ಇದೆ. ಈ ಸಂಬಂಧ ಒಂದು ತಂಡವನ್ನು ಕಳುಹಿಸಿ ವಾಸ್ತವ ಸ್ಥಿತಿ ಅರಿಯಬೇಕು. ಕಾವೇರಿ ವಿಷಯದಲ್ಲಿ ತಮಿಳುನಾಡಿನಲ್ಲಿ ಇರುವ ಐಕ್ಯತೆ, ನಮ್ಮಲ್ಲಿ ಇಲ್ಲ ಎಂದು ಹಲವಾರು ಬಾರಿ ಹೇಳಿದ್ದೇನೆ ಎಂದರು.

### ತಮಿಳುನಾಡಿಗೆ ಕಾವೇರಿ ನೀರು ಬಿಡುವುದನ್ನು ಖಂಡಿಸಿ

# ಮೈಸೂರಲ್ಲಿ ಸಂಘ–ಸಂಸ್ಥೆಗಳಿಂದ ಮುಂದುವರಿದ ಹೋರಾಟ





ಮೈಸೂರು, ಸೆ. 26(ಆರ್‌ಕೆ)– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಮೈಸೂರಲ್ಲಿ ವಿವಿಧ ಸಂಘಟನೆಗಳು ಪ್ರತಿಭಟನೆ ಮುಂದುವರಿಸಿದ್ದು, ರಾಜ್ಯ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿವೆ.

ಕಾವೇರಿ ಕ್ರಿಯಾ ಸಮಿತಿ, ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ, ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ, ಗಂಧದಗುಡಿ ಫೌಂಡೇಷನ್, ರಾಜ್ಯ ರೈತ ಸಂಘ ಹಾಗೂ ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಪದಾಧಿಕಾರಿಗಳು ಮೈಸೂರಿನ ಪುರಭವನ, ಸೆಂಟ್ರಲ್ ಪೋಸ್ಟ್ ಆಫೀಸ್ ಸರ್ಕಲ್, ಗನ್‌ಹೌಸ್, ಹೊಸ ಡಿಸಿ ಕಚೇರಿ ಹಾಗೂ ಜಿಲ್ಲಾ ಪಂಚಾಯ್ತಿ ಕಚೇರಿ ಬಳಿ ಪ್ರತ್ಯೇಕ ಪ್ರತಿಭಟನೆ ನಡೆಸಿದರು.

**ನೆಹರು ಸರ್ಕಲ್:** ಕಾವೇರಿ ಕ್ರಿಯಾ ಸಮಿತಿ ವತಿಯಿಂದ ತೋಳಿಗೆ ಕಪ್ಪು ಪಟ್ಟಿ ಧರಿಸಿ, ಸೆಂಟ್ರಲ್ ಪೋಸ್ಟ್ ಆಫೀಸ್ (ನೆಹರು ಸರ್ಕಲ್) ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಿದ ಕಾವೇರಿ ಪರ ಹೋರಾಟಗಾರರು, ಕಾವೇರಿ, ಕಪಿಲೆ, ಹೇಮಾವತಿ ನಮ್ಮ ನದಿಗಳಾಗಿದ್ದು, ನಮ್ಮ ಪಾಲಿನ ನೀರನ್ನು ತಮಿಳುನಾಡಿಗೆ ಹರಿಸುವುದನ್ನು ತಕ್ಷಣವೇ ನಿಲ್ಲಿಸಬೇಕೆಂದು ಆಗ್ರಹಿಸಿದರು.

'ಪ್ರಾಣ ಕೊಟ್ಟೇವು, ನೀರು ಬಿಡುವುದಿಲ್ಲ' ಎಂದು ಘೋಷಣೆ ಕೂಗಿದ ಪ್ರತಿಭಟನಾಕಾರರು, ಪ್ರಧಾನಮಂತ್ರಿಗಳನ್ನು ಭೇಟಿಯಾಗಿ ಈ ಜಲ ವಿವಾದ ಸಂಬಂಧ ವಸ್ತುಸ್ಥಿತಿ ವಿವರಿಸಬೇಕು, ಮಧ್ಯ ಪ್ರವೇಶಿಸಿ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವಂತೆ ಮನವಿ ಮಾಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಧರಣಿಯಲ್ಲಿ ಆರ್. ಲಿಂಗಪ್ಪ, ಎಂ.ಜೆಸುರೇಶ್‌ಗೌಡ, ಎಂ. ಮೋಹನ್‌ಕುಮಾರ್ ಗೌಡ, ಮೂಗೂರು ನಂಜುಂಡಸ್ವಾಮಿ, ಬಾಲಕೃಷ್ಣ, ಮೆಲ್ಲಹಳ್ಳಿ ಮಹದೇವಸ್ವಾಮಿ, ನ. ದಿವಾಕರ, ತೇಜಸ್‌ಗೌಡ ಸೇರಿದಂತೆ





ಹಲವರು ಪಾಲ್ಗೊಂಡಿದ್ದರು.

**ಜಿಲ್ಲಾ ಪಂಚಾಯ್ತಿ ಕಚೇರಿ:** ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಶ್ರೀಕಂಠ ಕುಮಾರ್ ನೇತೃತ್ವದಲ್ಲಿ ನೂರಾರು ಮಂದಿ ಇಂದು ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಎದುರು ಭಾರಿ ಪ್ರತಿಭಟನೆ ನಡೆಸಿದರು.

ಶಂಖ, ಜಾಗಟೆ ನಾದದ ಮೂಲಕ ವಿನೂತನ ಪ್ರತಿಭಟನೆ ನಡೆಸಿದ ಅವರು, ಕನ್ನಡ ನೆಲ, ಜಲ, ಭಾಷೆ ವಿಚಾರದಲ್ಲಿ ನ್ಯಾಯಕ್ಕಾಗಿ ಹೋರಾಡುವ ಹಕ್ಕು ಕನ್ನಡಿಗರಿಗಿದೆ. ಜನಪ್ರತಿನಿಧಿಗಳು ರಾಷ್ಟ್ರಪತಿಗಳ ಬಳಿಗೆ ಹೋಗಿ ಕಾವೇರಿ ನೀರಿನ ಸಂಬಂಧ ವಸ್ತುಸ್ಥಿತಿ ತಿಳಿಸಿ ಸಮಸ್ಯೆ ಬಗೆಹರಿಸಬೇಕೆಂದು ಒತ್ತಾಯಿಸಿದರು.

ಹೊಯ್ಸಳ ಕರ್ನಾಟಕ ಸಂಘದ ಕೆ.ಆರ್. ಸತ್ಯನಾರಾಯಣ್, ಅರ್ಚಕರ ಸಂಘದ ಕೃಷ್ಣಮೂರ್ತಿ, ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಎಚ್.ಎನ್. ಶ್ರೀಧರಮೂರ್ತಿ, ವಿಕ್ರಂ ಅಯ್ಯಂಗಾರ್, ಗೋಪಾಲರಾವ್, ಕಡಕೊಳ ಜಗದೀಶ್, ಶ್ರೀನಿವಾಸ, ಮುಳ್ಳೂರು ಸುರೇಶ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಗಂಧದಗುಡಿ ಫೌಂಡೇಷನ್ ಅಧ್ಯಕ್ಷ ಆರ್ಯನ್ ನೇತೃತ್ವದಲ್ಲಿ ಕಾರ್ಯಕರ್ತರು ಜಿಲ್ಲಾ ಪಂಚಾಯ್ತಿ ಕಚೇರಿ ಎದುರು ಪ್ರತಿಭಟನಾ ಧರಣಿ ನಡೆಸಿ, ಕಾವೇರಿ ನೀರನ್ನು ಬಿಡುತ್ತಿರುವ ಸರ್ಕಾರದ ಕ್ರಮಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ತಮಿಳುನಾಡಿಗೆ ಕಾವೇರಿ, ಕಪಿಲದಿಂದ ನೀರು ಹರಿಸುತ್ತಿರುವುದನ್ನು ಖಂಡಿಸಿ ಜಿಲ್ಲಾ ಪಂಚಾಯ್ತಿ ಕಚೇರಿ ಮುಂಭಾಗ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ಪದಾಧಿಕಾರಿಗಳು ಬೃಹತ್ ಪ್ರತಿಭಟನೆ ನಡೆಸಿದರು. ರಾಜ್ಯದ ರೈತರು, ಜನರು ಹಾಗೂ ದನ–ಕರುಗಳನ್ನು ಉಳಿಸಬೇಕು, ಅದಕ್ಕಾಗಿ ತಕ್ಷಣವೇ ನೀರು ನಿಲ್ಲಿಸಬೇಕು ಎಂದು ಅವರು ಒತ್ತಾಯಿಸಿದರು.

ಸೇನೆಯ ಜಿಲ್ಲಾಧ್ಯಕ್ಷ ಎಂ. ಲಿಂಗರಾಜು, ಚರಣ್‌ರಾಜ್, ಭಾಗ್ಯಶ್ರೀ, ನೇತ್ರಾವತಿ, ರಮ್ಯ, ಭಾಗ್ಯಮ್ಮ, ಅಮೃತ, ಅರ್ಪಣ, ಲೋಕೇಶ್, ರಾಜು ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

**ಗನ್‌ಹೌಸ್ ಸರ್ಕಲ್:** ಮೈಸೂರಿನ ಗನ್‌ಹೌಸ್ ಸರ್ಕಲ್‌ನಲ್ಲಿ ರಾಜ್ಯ ರೈತರ ಸಂಘದ ಪದಾಧಿಕಾರಿಗಳು, ಮಾನವ ಸರಪಳಿ ನಿರ್ಮಿಸಿ ಕಾವೇರಿ ನಿರ್ವಹಣಾ ಪ್ರಾಧಿಕಾರ ಮತ್ತು ಸುಪ್ರೀಂಕೋರ್ಟ್ ನೀಡಿರುವ ತೀರ್ಪನ್ನು ಖಂಡಿಸಿ ಪ್ರತಿಭಟನೆ ನಡೆಸಿದರು. ನಂತರ ಸಿದ್ಧಾರ್ಥ ನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಬಳಿಗೂ ತೆರಳಿ ಧರಣಿ ನಡೆಸಿದರು. ಹೊಸೂರು ಕುಮಾರ್, ಹೊಸಕೋಟೆ ಬಸವರಾಜು, ನೇತ್ರಾವತಿ, ಪಿ. ಮರಂಕಯ್ಯ, ಕುಮಾರಸ್ವಾಮಿ, ಆನಂದ ಸೇರಿದಂತೆ ಹಲವು ರೈತರು ಕಾವೇರಿ ನೀರಿನ ಹೋರಾಟದಲ್ಲಿ ಪಾಲ್ಗೊಂಡಿದ್ದರು.

**ಪುರಭವನ:** ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಸರ್ಕಾರದ ಕ್ರಮ ಖಂಡಿಸಿ ಕರ್ನಾಟಕ ನ್ಯಾಯಪರ ವೇದಿಕೆ ಕಾರ್ಯಕರ್ತರು ಇಂದು ಪುರಭವನ ಆವರಣದ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆ ಬಳಿ ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ರಾಜ್ಯದ ಜನತೆ ಪರ ಹೋರಾಟ ಮಾಡಲಾಗದಿದ್ದರೆ ಜನಪ್ರತಿನಿಧಿಗಳು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದ ಪ್ರತಿಭಟನಾಕಾರರು, ನೀರು ಹರಿಸುವುದನ್ನು ನಿಲ್ಲಿಸದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಗಿರೀಶ ಶಿವಾರ್ಚಕ, ಭಜರಂಗಿ, ಸಿ. ಉಮೇಶ್, ಪ್ರಕಾಶ್, ಲೋಕೇಶ್, ಸಂತೋಷ್, ನಾಗೇಶ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.



## ಎನ್‌ಇಪಿ ರದ್ದಿಗೆ ನಿರ್ಧಾರ ಖಂಡಿಸಿ ನಾಳೆ ಶಿಕ್ಷಣ ತಜ್ಞರ ವಿಶೇಷ ಸಭೆ



ಮೈಸೂರು, ಸೆ.26(ಎಂಟಿವೈ)– ರಾಜ್ಯ ಸರ್ಕಾರ ಎನ್‌ಇಪಿ ರದ್ದು ಮಾಡಲು ಮುಂದಾಗಿರುವ ಕ್ರಮ ಖಂಡಿಸಿ, ಸೆ. 28ರಂದು ಬೆಳಗ್ಗೆ 11ಕ್ಕೆ ನಜರ್‌ಬಾದ್‌ನಲ್ಲಿನ ವಿಕೆ ಫಂಕ್ಷನ್ ಹಾಲ್‌ನಲ್ಲಿ ಶಿಕ್ಷಣ ತಜ್ಞರ ವಿಶೇಷ ಸಭೆ ಕರೆಯಲಾಗಿದೆ ಎಂದು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್‌ಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಜಾರಿಗೆ ತರಲು ಮುಂದಾಗಿದ್ದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ದೇಶದ ಬೆಳವಣಿಗೆಗೆ ಪೂರಕವಾಗಿತ್ತು. ಸ್ವತಂತ್ರ ಭಾರತದ ಶಿಕ್ಷಣ ಪದ್ಧತಿಯು ಬ್ರಿಟಿಷ್ ವಸಾಹತುಶಾಹಿ ಶಿಕ್ಷಣ ಪದ್ಧತಿಯ ಮುಂದುವರಿಕೆಯ ಭಾಗವಾಗಿದೆ. ಭಾರತೀಯತೆಯ ಅಂಶವನ್ನು ಕಳೆದುಕೊಂಡು ಬ್ರಿಟಿಷರ ಪಳೆಯುಳಿಕೆಯಂತಿರುವ ಹಳೇ ಶಿಕ್ಷಣ ಪದ್ಧತಿಯನ್ನು ತೊಡೆದು ಹಾಕಿ ನೂತನ ಶಿಕ್ಷಣ ನೀತಿ ಜಾರಿಗೊಳಿಸಲೇಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಕೊರತೆಗಳಿಂದ ಮುಕ್ತವಾದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸಿದೆ. ಆದರೆ ರಾಜ್ಯ ಸರ್ಕಾರ ಈ ನೀತಿ ಜಾರಿಗೊಳ್ಳುವ ಹಂತದಲ್ಲಿಯೇ ರದ್ದುಗೊಳಿಸಲು ಹೊರಟಿರುವುದು ಶಿಕ್ಷಣ ವಿರೋಧಿ ಮತ್ತು ಪೂರ್ವಗ್ರಹ ಪೀಡಿತವಾಗಿದೆ ಎಂದು ಆರೋಪಿಸಿದರು.

ಹೊಸ ನೀತಿ ರದ್ದುಗೊಳಿಸಿರುವುದು ವಿದ್ಯಾರ್ಥಿಗಳ ಹಿತಕ್ಕೆ ಮಾರಕವಾಗಿದ್ದು, ರಾಜ್ಯ ಸರ್ಕಾರದ ನಿಲುವನ್ನು ಖಂಡಿಸಿ ಅಂದು ಶಿಕ್ಷಣ ತಜ್ಞರ ಸಭೆ ಕರೆಯಲಾಗಿದೆ. ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಹಿರಿಯ ಪತ್ರಕರ್ತ ರವೀಂದ್ರ ರೇಷ್ಮೆ, ಬೆಂಗಳೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ವೇಣುಗೋಪಾಲ್, ಸೆಸ್ ನಿರ್ದೇಶಕ ವೇಣುಗೋಪಾಲ್, ಮಾಜಿ ಸಚಿವ ಡಾ.ಸಿ.ಎನ್. ಅಶ್ವಥ್ ನಾರಾಯಣ್ ಸೇರಿದಂತೆ ಇನ್ನಿತರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಹಂಪಿ ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಪ್ರೊ. ಜಿ.ಸಿ.ರಾಜಣ್ಣ, ಪ್ರಜ್ವಲ್, ಗಗನ್ ಕಪ್ಪಣ್ಣ, ಕೆ. ವಸಂತಕುಮಾರ್ ಇದ್ದರು.

## ಕುರುವೈ ಬೆಳೆಗೆ ಸಮರ್ಪಕ ನೀರಿನ ವ್ಯವಸ್ಥೆ

### ತಮಿಳ್ನಾಡು ಜಲ ಸಂಪನ್ಮೂಲ ಸಚಿವ ದುರೈ ಮುರುಗನ್ ಹೇಳಿಕೆ

ಮೈಸೂರು, ಸೆ.26–ಬರುವ ಜನವರಿವರೆಗೆ ಕುರುವೈ ಬೆಳೆಗೆ ಅಗತ್ಯವಿರುವ ನೀರು ನಮ್ಮಲ್ಲಿ ಸಂಗ್ರಹವಾಗಿದೆ ಎಂದು ತಮಿಳುನಾಡು ಜಲ ಸಂಪನ್ಮೂಲ ಸಚಿವ ದುರೈ ಮುರುಗನ್ ತಿಳಿಸಿದ್ದಾರೆ. ಇಂದು ಮಾಧ್ಯಮಗಳೊಂದಿಗೆ ಮಾತನಾಡುತ್ತಿದ್ದ ಅವರು, ಕರ್ನಾಟಕ ಇದುವರೆಗೆ ಬಿಡುಗಡೆ ಮಾಡಿರುವ ನೀರು ನಮ್ಮ ಬೆಳೆಗೆ ಸದ್ಯಕ್ಕೆ ಸಾಕಾಗಲಿದೆ. ಆದರೆ ಅವರು ಇನ್ನೂ 50 ಟಿಎಂಸಿ ನೀರು ಕೊಡಬೇಕಿದೆ. ಅದಕ್ಕಾಗಿ ನಾವು ಬೇಡಿಕೆ ಇಟ್ಟಿದ್ದೇವೆ. ಹೋರಾಟವನ್ನೂ ಮಾಡುತ್ತೇವೆ ಎಂದರು.

ಇಂದಿನಿಂದ ತಮಿಳ್ನಾಡಿನಲ್ಲಿ ಮಾನ್ಸೂನ್ ಮಳೆ ಆರಂಭವಾಗಿದೆ. ಈ ಬಾರಿ ಉತ್ತಮ ಮಳೆ ಆಗುವ ಆಶಾಭಾವನೆ ವ್ಯಕ್ತಪಡಿಸಿದ ಅವರು, ಆದರೆ ಕರ್ನಾಟಕ ಒಪ್ಪಂದದಂತೆ ನೀಡಬೇಕಾಗಿರುವ ನೀರನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ. ಅದರಂತೆ ಇಂದು ನಡೆದ ಕಾವೇರಿ ನೀರು ನಿಯಂತ್ರಣ ಸಮಿತಿ ಸಭೆಯಲ್ಲಿ 12,500 ಕ್ಯುಸೆಕ್ ನೀರಿನ ಬೇಡಿಕೆ ಮಂಡಿಸಿತ್ತು. ಆದರೆ ಕರ್ನಾಟಕದ ವಿರೋಧದ ಹಿನ್ನೆಲೆಯಲ್ಲಿ 3,000 ಕ್ಯುಸೆಕ್‌ಗೆ ಕಡಿತಗೊಳಿಸಿ ಆದೇಶಿಸಲಾಗಿದೆ. ಅಕ್ಟೋಬರ್ 14ರಂದು ಚೆನ್ನೈನಲ್ಲಿ ಡಿಎಂಕೆ ಮಹಿಳಾ ಸಮ್ಮೇಳನ ನಡೆಯುತ್ತಿದ್ದು, ಅದರಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಪಾಲ್ಗೊಳ್ಳುತ್ತಿದ್ದಾರೆ. ಈ ಮಧ್ಯೆ ತಮಿಳ್ನಾಡಿನಲ್ಲಿ ಲೋಕಸಭಾ ಚುನಾವಣೆಗೆ ಡಿಎಂಕೆ, ಕಾಂಗ್ರೆಸ್‌ಗೆ 9 ಕ್ಷೇತ್ರಗಳನ್ನು ಬಿಟ್ಟುಕೊಡಲು ನಿರ್ಧರಿಸಿದೆ.

## ಕೊಡವ ಸಮಾಜದ ವಾರ್ಷಿಕ ಸರ್ವ ಸದಸ್ಯರ ಸಭೆ

ಮೈಸೂರು, ಸೆ. 26– ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಕೊಡವ ಸಮಾಜದ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಕೊಡವ ಸಮಾಜದ ಗುರುಮನೆ ಸಭಾಂಗಣದಲ್ಲಿ ಸೆ. 28 ರಂದು ಬೆಳಗ್ಗೆ 10.30ಕ್ಕೆ ಆಯೋಜಿಸಲಾಗಿದೆ. ಸಂಘದ ಅಧ್ಯಕ್ಷ ಮೇಚಂಡ ಎಂ. ಶಶಿ ಪೊನ್ನಪ್ಪ ಸಭೆಯ ಅಧ್ಯಕ್ಷತೆ ವಹಿಸುವರು ಎಂದು ಸಂಘದ ಕಾರ್ಯದರ್ಶಿ ಮುಕ್ಕಾಟ್ಟೀರ ಬಿ. ಜೀವನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಶೇಷ ಚೇತನರಿಗೆ ಅನುಕಂಪವಲ್ಲ ಅವಕಾಶ ಅಗತ್ಯವಿದೆ





ಮೈಸೂರು, ಸೆ.26(ಜಿಎ)– ಅಂಗವೈಕಲ್ಯತೆ ಇರುವವರಿಗೆ ಅನುಕಂಪ ಅಗತ್ಯವಿಲ್ಲ, ಅವರಿಗೆ ಅವಕಾಶ ಮಾಡಿಕೊಡಬೇಕು ಅಷ್ಟೇ ಎಂದು ಮೇಯರ್ ಶಿವಕುಮಾರ್ ಹೇಳಿದರು.

ರಾಜ್ಯ ಕಿವುಡರ ಕ್ಷೇಮಾಭಿವೃದ್ಧಿ ಸಂಘ ಮತ್ತು ಜಿಲ್ಲಾ ಕಿವುಡರ ಸಂಸ್ಥೆ ವತಿಯಿಂದ ನಗರದ ಕಲಾಮಂದಿರದಲ್ಲಿ ಆಯೋಜಿಸಿದ್ದ ವಿಶ್ವ ಕಿವುಡರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈ ರೀತಿ ಇರಬೇಕೆಂದು ಯಾರೂ ಕೇಳಿಕೊಂಡು ಬರುವುದಿಲ್ಲ. ಒಂದು ಅಂಗ ನ್ಯೂನತೆಗೊಂಡರೆ ಬೇರೆ ಎಲ್ಲವೂ ಅದ್ಭುತವಾಗಿದೆ. ಅಂಗವೈಕಲ್ಯತೆ ಇರುವವರಿಗೆ ಕರುಣೆ ಅಗತ್ಯವಿಲ್ಲ. ಅವರಿಗೆ ಅವಕಾಶ ಮಾಡಿಕೊಡಬೇಕು ಅಷ್ಟೇ. ಪಾಲಿಕೆ ವತಿಯಿಂದ ಈಗಾಗಲೇ ಸಲಕರಣೆಗಳನ್ನು ನೀಡಲಾಗುತ್ತಿದೆ. ಕಳೆದ ಬಜೆಟ್‌ಗಿಂತ ಈ ಬಾರಿ ಎರಡು ಪಟ್ಟು ಹೆಚ್ಚು ಅನುದಾನ ಇಡಲಾಗಿದ್ದು, ಅದರ ಸದುಪಯೋಗಪಡಿಸಿಕೊಳ್ಳಿ. ಇವರ ನ್ಯಾಯಯುತ ಬೇಡಿಕೆಗಳು ಸರ್ಕಾರ ಈಡೇರಿಸಬೇಕು ಎಂದು ಮನವಿ ಮಾಡಿದರು.

ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷರಾದ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಶೋಷಿತ ವರ್ಗದವರಿಗೆ ಸರ್ಕಾರ ಗ್ಯಾರಂಟಿಗಳನ್ನು ಜಾರಿಗೊಳಿಸಿರುವಂತೆ ಮುಂದಿನ ದಿನಗಳಲ್ಲಿ ಅಂಗವೈಕಲ್ಯತೆ ಇರುವವರಿಗೂ ವಿಶೇಷ ಯೋಜನೆ ರೂಪಿಸಲಾಗುವುದು. ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸುತ್ತೇನೆ. ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಈ ರೀತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂಗವೈಕಲ್ಯ ಇರುವವರು ವಿಕಲಚೇತನರಲ್ಲ. ಅವರು ವಿಶೇಷ ಚೇತನರು. ಅವರ ಬಗ್ಗೆ ಕೀಳು ಭಾವನೆ ಇರಬಾರದು. ಅವರಿಗೆ ಅವಕಾಶ ಕಲ್ಪಿಸಬೇಕು ಎಂದರು.

ಅಂಗವೈಕಲ್ಯತೆ ಇರುವವರಿಗೆ ನಮಗಿಂತ ಹೆಚ್ಚು ಚೈತನ್ಯವಿದೆ. ಅದಮ್ಯ ಚೈತನ್ಯದಿಂದ ಜೀವನದ ಉತ್ಸಾಹ ಇರುತ್ತದೆ. ನಿಮ್ಮ ಬದುಕು ನಮಗೆ ಸ್ಫೂರ್ತಿಯಾಗಿದೆ. ಸರ್ಕಾರ ಗ್ಯಾರಂಟಿಗಳನ್ನು ನೀಡಿರುವುದು ಶೋಷಣೆಯಲ್ಲಿರುವವರಿಗೆ ಚೈತನ್ಯ ತುಂಬಲು. ಅದರಂತೆ ಮುಂದಿನ ದಿನಗಳಲ್ಲಿ ನಿಮಗೂ ಅವಕಾಶ ಕಲ್ಪಿಸಲಾಗುತ್ತದೆ. ನಿಮ್ಮ ಎಲ್ಲಾ ಮನವಿಗಳು ನ್ಯಾಯಯುತವಾಗಿದ್ದು, ಮನವಿಯನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಜಾರಿಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತೇನೆ. ಜನಪ್ರತಿನಿಧಿಗಳು ಆಯಾಯ ವ್ಯಾಪ್ತಿಯಲ್ಲಿ ಅಂಗವೈಕಲ್ಯತೆ ಇರುವವರಿಗೆ ಸರ್ಕಾರ ನೀಡುವ ಸವಲತ್ತುಗಳನ್ನು ತಲುಪಿಸುವ ಕೆಲಸ ಮಾಡಬೇಕು ಎಂದು ಅವರು ತಿಳಿಸಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ಇಂದಿನ ಸಮಾರಂಭ ರಾಜ್ಯಕ್ಕೆ ಸಂದೇಶ ಸಾರುತ್ತಿದೆ. ವಿವಿಧ ಅಂಗವೈಕಲ್ಯದಿಂದ ಜೀವನ ನಡೆಸುವುದು ಕಷ್ಟಕರ. ಇವರ ಎಲ್ಲಾ ಬೇಡಿಕೆಗಳು ನ್ಯಾಯಯುತವಾಗಿದ್ದು, ಯಾವುದೇ ಮಿತಿ ಹಾಕದೆ ಎಲ್ಲಾ ಬಸ್‌ಗಳಲ್ಲಿ ಅವರಿಗೆ ಪ್ರಯಾಣ ಮಾಡಲು ಅವಕಾಶ ಕಲ್ಪಿಸಿ ಕೊಡಬೇಕು ಎಂದರು.

ಕಾರ್ಯಕ್ರಮಕ್ಕೂ ಮುನ್ನ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ 1200ಕ್ಕೂ ಅಧಿಕ ಪ್ರತಿನಿಧಿಗಳು ರೈಲ್ವೆ ನಿಲ್ದಾಣದಿಂದ ಕಲಾಮಂದಿರದವರೆಗೆ ಬೃಹತ್ ಜಾಥಾ ನಡೆಸಿದರು. ಈ ವೇಳೆ ದೃಷ್ಟಿಹೀನ ಮಾನವ ಕಂಪ್ಯೂಟರ್ ಬಸವರಾಜು ಉಮ್ರಾಣಿ ಮತ್ತು ಆಭರಣ ತಯಾರಿಕೆಯಲ್ಲಿ ಕಂಚಿನ ಪದಕ ಗಳಿಸಿದ ಕೆಎಸ್.ಅವಿನಾಶ್ ಅವರನ್ನು ಅಭಿನಂದಿಸಲಾಯಿತು. ವಿಶೇಷವಾಗಿ ಇಡೀ ಕಾರ್ಯಕ್ರಮವನ್ನು ದೀಪಿಕಾ, ಕುಶಾಲ್ ಮತ್ತು ಕಂಚನ್ ಅವರು ಸನ್ನೆ ಮೂಲಕ ಅನುವಾದ ಮಾಡಿದರು.

ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ರಾಜ್ಯ ಕಿವುಡರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಮೂರ್ತಿ, ರಾಜ್ಯ ಕಿವುಡರ ಸಂಘದ ಅಧ್ಯಕ್ಷ ಕೆ.ಎಸ್. ಉಮಾ ಶಂಕರ್, ಉಪಾಧ್ಯಕ್ಷ ಗಣೇಶ್ ರಾವ್ ವಿ, ಜಿಲ್ಲಾ ಕಿವುಡರ ಸಂಘದ ಅಧ್ಯಕ್ಷ ಎಸ್.ಟಿ.ಮಹೇಶ್, ಉಪಾಧ್ಯಕ್ಷ ಮಹೇಶ್ ವರ್ಮಾ ಉಪಸ್ಥಿತರಿದ್ದರು.



ಮೈಸೂರಿಗೆ ಆಗಮಿಸಿದ ಕೇಂದ್ರ ಸಚಿವೆ ಶೋಭ ಕರಂದ್ಲಾಜೆ ಅವರು ಮಾಜಿ ಮೇಯರ್ ಸಂದೇಶ್‌ಸ್ವಾಮಿ ಅವರನ್ನು ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಹೂಗುಚ್ಛ ನೀಡಿ, ಅಭಿನಂದಿಸಿದರು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಮಾಜಿ ಶಾಸಕ ಎಲ್.ನಾಗೇಂದ್ರ, ಮುಖಂಡರಾದ ಬಿ.ಪಿ.ಮಂಜುನಾಥ್, ಕವೀಶ್‌ಗೌಡ, ಪಾಲಿಕೆ ಸದಸ್ಯ ಸತೀಶ್, ನರಸಿಂಹರಾಜ ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಡಿ.ಲೋಹಿತ್ ಮತ್ತಿತರರು ಉಪಸ್ಥಿತರಿದ್ದರು.

## ಮೈಮುಲ್‌ನಿಂದ ಹೆಣ್ಣು ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ



ಮೈಸೂರು, ಸೆ. 26– ಮೈಸೂರು ಜಿಲ್ಲಾ ಹಾಲು ಒಕ್ಕೂಟದ ವತಿಯಿಂದ ಮೈಮುಲ್ ಸದಸ್ಯರ ಗ್ರಾಮೀಣ ಭಾಗದ ಹೆಣ್ಣು ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಮೈಮುಲ್ ನಿರ್ದೇಶಕ ಬಿ.ಗುರುಸ್ವಾಮಿ ತಿಳಿಸಿದರು.

ಮೈಸೂರು ತಾಲೂಕು, ಗೋಪಾಲಪುರ ಹಾಲು ಉತ್ಪಾದಕರ ಸಹಕಾರ ಸಂಘದ ಬಿ.ಎಂ.ಸಿ. ಕೇಂದ್ರದ 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಡೈರಿಗೆ ಹೆಚ್ಚು ಹಾಲು ಸರಬರಾಜು ಮಾಡಿದವರಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಮೈಮುಲ್‌ನಲ್ಲಿ ಗ್ರಾಮೀಣ ಭಾಗದಿಂದ ಬಂದು ವಿದ್ಯಾಭ್ಯಾಸ ಮಾಡುವ ಡೈರಿ ಸದಸ್ಯರ 50 ಹೆಣ್ಣು ಮಕ್ಕಳಿಗೆ ಈಗಾಗಲೇ ಹಾಸ್ಟೆಲ್ ವ್ಯವಸ್ಥೆ ಮಾಡಲಾಗಿದ್ದು, ಊಟ, ವಸತಿ ಸೇರಿ ವರ್ಷಕ್ಕೆ 10 ಸಾವಿರ ರೂ. ಕಟ್ಟಬೇಕು. ಇದನ್ನು 250 ಹೆಣ್ಣು ಮಕ್ಕಳಿಗೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ಇನ್ನು ಗೋಪಾಲಪುರಕ್ಕೆ ಪಶುಚಿಕಿತ್ಸಾ ಕೇಂದ್ರ ಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪಶುಸಂಗೋಪನಾ ಸಚಿವರಿಗೂ ಮನವಿ ಸಲ್ಲಿಸಿದ್ದೇವೆ. ಹೊಸದಾಗಿ ಪಶು ಚಿಕಿತ್ಸಾ ಕೇಂದ್ರಗಳನ್ನು ಮಂಜೂರು ಮಾಡುವಾಗ ನಿಮ್ಮ ಊರಿಗೂ ಕೊಡುತ್ತೇವೆ ಎಂದಿದ್ದಾರೆ. ಗೋಪಾಲಪುರ ಡೈರಿಗೆ ಪ್ರತಿದಿನ 2 ಸಾವಿರ ಲೀಟರ್ ಹಾಲು ಬರುತ್ತಿದ್ದು, ಈ ವರ್ಷ ರೈತರಿಂದ 2,32,42,148 ರೂ. ಹಾಲು ಖರೀದಿಸಿದ್ದು, 2,88,544 ರೂ. ಲಾಭ ಬಂದಿದೆ ಎಂದರು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸದಸ್ಯರ ಮಕ್ಕಳಿಗೆ ಪ್ರೋತ್ಸಾಹ ಧನ ನೀಡಲಾಯಿತು.

ಸಭೆಯಲ್ಲಿ ಮೈಮುಲ್ ನಿರ್ದೇಶಕ ಕೆ. ಉಮಾಶಂಕರ್, ಮಾರ್ಗವಿಸ್ತರಣಾಧಿಕಾರಿ ಕೆ.ಎಸ್. ಪ್ರವೀಣ್, ಅಧ್ಯಕ್ಷ ಜಿ.ಎಸ್. ಜಯರಾಮೇಗೌಡ, ಉಪಾಧ್ಯಕ್ಷೆ ಮಾಯಮ್ಮ, ನಿರ್ದೇಶಕರಾದ ರಾಜಹನುಮೇಗೌಡ, ಗೋವಿಂದೇಗೌಡ, ಮಾದೇಗೌಡ, ರಾಜೇಗೌಡ, ಕರೀಗೌಡ, ರವಿಕುಮಾರ್, ಜೆ.ಸಿ. ಮಹೇಶ್, ಹೆಚ್. ಸಿದ್ದರಾಜು, ನಾಗಮ್ಮ, ಸುರೇಶ್, ಕಾರ್ಯನಿರ್ವಾಹಕ ಸುರೇಶ್ ಹಾಗೂ ಗ್ರಾಮಸ್ಥರು ಹಾಜರಿದ್ದರು.



ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸ್ವರಾಲಯ ಸಂಗೀತ ಸಂಸ್ಥೆಯು ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಂದಿಗೆ ಇತ್ತೀಚೆಗೆ ಗಾನಭಾರತಿ (ವೀಣೆಶೇಷಣ್ಣ ಭವನ)ದಲ್ಲಿ 'ಸ್ವರಾಲಯ ಸಾಂಸ್ಕೃತಿಕ ಹಬ್ಬ–2023 (ಭಾಗ–3) ಆಯೋಜಿಸಿತ್ತು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಗರದ ಲಾಸ್ಯ ರಂಜನ ನೃತ್ಯ ಶಾಲೆಯ ಶಿಷ್ಯ ವೃಂದದವರು ವಿದುಷಿ ಶ್ರೀಮತಿ ಜ್ಯೋತಿ ಹೆಗಡೆ ನೇತೃತ್ವದಲ್ಲಿ ನೃತ್ಯ ಪ್ರದರ್ಶನ ನೀಡಿದರು. ಚಿತ್ರದಲ್ಲಿ ಸ್ವರಾಲಯ ಸಂಸ್ಥೆಯ ಅಧ್ಯಕ್ಷೆ ವಿದುಷಿ ಡಾ.ಸುಮ ಹರಿನಾಥ್, ಕಾರ್ಯದರ್ಶಿ ಹೆಚ್.ಎಸ್.ಶ್ರೀಕಾಂತಾಮಣಿ, ಶುಭ ಗಣೇಶ್ ಹಾಗೂ ಮುಂತಾದವರನ್ನು ಕಾಣಬಹುದು.

ಮೂರನೇ ಪುಟದಿಂದ

## ನೀರು ಬಿಡಲು ಹೇಳಿದ್ದಕ್ಕೆ ಧನ್ಯವಾದ...!

ಪರಿಸ್ಥಿತಿಯನ್ನು ಮನವರಿಕೆ ಮಾಡಿದ್ದಾರೆ. ರಾಜ್ಯದ ಪರಿಸ್ಥಿತಿ ಅರ್ಥ ಮಾಡಿಕೊಂಡ ಸಮಿತಿಗೆ ಧನ್ಯವಾದ ಎಂದರು.

ಅಣೆಕಟ್ಟೆ ಕೆಳಗಿನ ಕಾವೇರಿ ಜಲಾನಯನ ಪ್ರದೇಶದಿಂದ ಸಾಮಾನ್ಯವಾಗಿ 2000 ಕ್ಯುಸೆಕ್ ನೀರು ಹರಿದು ಹೋಗುತ್ತಿರುತ್ತದೆ. ಉಳಿದಂತೆ 1000 ಕ್ಯುಸೆಕ್ ಬಿಡಬೇಕಾಗುತ್ತದೆ. ಕನಕಪುರ, ಬೆಂಗಳೂರು ಕಡೆ ಮಳೆ ನೀರು ಹೋಗುತ್ತಾ ಇರುತ್ತದೆ. ಎರಡು ಮೂರು ದಿನದಿಂದ ಒಳಹರಿವು ಚೆನ್ನಾಗಿದೆ. ಇಂತಹ ಸಂಕಷ್ಟದ ಸಮಯದಲ್ಲಿ ಮೇಕೆದಾಟು ಯೋಜನೆಯೇ ಪರಿಹಾರ. ಈ ಯೋಜನೆಯಿಂದ 66 ಟಿಎಂಸಿ ನೀರು ಅವರಿಗೆ ಸೇರುತ್ತದೆ. ಕೆಆರ್‌ಎಸ್, ಕಬಿನಿ, ಹೇಮಾವತಿ ಅಣೆಕಟ್ಟೆಗಳ ಮೇಲಿನ ಒತ್ತಡ ತಗ್ಗುತ್ತದೆ. ಬೆಂಗಳೂರಿನ ಕುಡಿಯುವ ನೀರಿಗೂ ಸಾಕಷ್ಟು ಅನುಕೂಲ ಆಗುತ್ತದೆ. ಕಳೆದ ವಾರ ಸುಪ್ರೀಂಕೋರ್ಟ್ ತೀರ್ಪು ನೀಡುವ ಹೊತ್ತಿನಲ್ಲಿ ಕರ್ನಾಟಕದವರು ಎಷ್ಟು ಬೇಕಾದರೂ ಅಣೆಕಟ್ಟೆ ಕಟ್ಟಿಕೊಳ್ಳಲಿ, ನಿಮಗೆ ತೊಂದರೆ ಏನು? ನಿಮ್ಮ ಪಾಲಿನ ನೀರು 177 ಟಿಎಂಸಿ ನಿಮಗೆ ಸಿಗುತ್ತದೆ ಎಂದು ಸ್ಪಷ್ಟವಾಗಿ ಹೇಳಿದೆ.

ಮೇಕೆದಾಟು ಅಣೆಕಟ್ಟು ನೀರನ್ನು ಕನಕಪುರದವರು ಬಳಸಿಕೊಳ್ಳುತ್ತಾರೆ ಎಂದು ಯಾರೋ ಹೇಳುತ್ತಿದ್ದರು. ಅಣೆಕಟ್ಟು ಇರುವುದೇ ತಮಿಳುನಾಡು ಗಡಿಯಲ್ಲಿ ಎಂದು ಛೇಡಿಸಿದರು. ಕಾವೇರಿ ನೀರಿನ ಎರಡೂ ಸಮಿತಿಗಳಿಗೆ ಮೇಕೆದಾಟು ಯೋಜನೆ ಬಗ್ಗೆ ಮನವರಿಕೆ ಮಾಡಿಕೊಡುತ್ತೇವೆ. ಸುಪ್ರೀಂಕೋರ್ಟಿನ ತೀರ್ಪಿನಿಂದ ಮತ್ತೊಮ್ಮೆ ಭರವಸೆ ಮೂಡಿದೆ. ಆದ ಕಾರಣ ನಮ್ಮ ಸಂಸದರು, ಕೇಂದ್ರದ ಮೇಲೆ ಒತ್ತಡ ಹಾಕಿ ಎಂದು ಮನವಿ ಮಾಡುತ್ತೇನೆ. ರಾಜ್ಯದ ಜನರು ಶಾಂತಿಯುತ ಪ್ರತಿಭಟನೆ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮತ್ತೊಮ್ಮೆ ಬಂದ್ ಮಾಡಲು ನ್ಯಾಯಾಲಯ ಬಿಡುವುದಿಲ್ಲ. ಆದ ಕಾರಣ ಸೆ.29ರ ಬಂದ್‌ಗೆ ಅವಕಾಶವಿಲ್ಲ ಎಂದರು.

ಕಾವೇರಿ ಹೋರಾಟದ ಜೊತೆಗೆ ರಾಜಕೀಯ ಟೀಕೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಟೀಕೆ ಮಾಡಬೇಡಿ ಎಂದು ಹೇಳಲು ಸಾಧ್ಯವಿಲ್ಲ. ಅವರು ತಮ್ಮ ಅಸ್ತಿತ್ವಕ್ಕೆ ಮಾಡುತ್ತಾರೆ. ವಿರೋಧ ಪಕ್ಷಗಳ ಬಾಯಿ ಮುಚ್ಚಿಸಲು ಆಗುವುದಿಲ್ಲ. ಬೇಸರ ಮಾಡಿಕೊಳ್ಳಲೂ ಹೋಗುವುದಿಲ್ಲ. ಪ್ರಜಾಪ್ರಭುತ್ವದ ಹಕ್ಕನ್ನು ನಾವು ಪ್ರಶ್ನಿಸಬಾರದು. ಮಾಧ್ಯಮಗಳು ಸಹ ನಮ್ಮ ಮೇಲೆ ಇಲ್ಲ–ಸಲ್ಲದ ಕಥೆಗಳನ್ನು ಹೇಳುತ್ತಾರೆ, ಇದೆಲ್ಲಾ ರಾಜಕೀಯದ ಒಂದು ಭಾಗ ಎಂದರು. ನಿಮ್ಮ ಆಡಳಿತಾವಧಿಯಲ್ಲಿ ಮೇಕೆದಾಟು ಯೋಜನೆ ಆಗುತ್ತದೆಯೇ ಎನ್ನುವ ಪ್ರಶ್ನೆಗೆ ಕಾಲವೇ ಉತ್ತರ ಕೊಡುತ್ತದೆ ಎಂದು ಉತ್ತರಿಸಿದರು.

ಜಯನಗರದ ಶಾಸಕರ ನೇತೃತ್ವದಲ್ಲಿ ದಾಂಧಲೆ ನಡೆದಿದೆ ಎನ್ನುವ ಪ್ರಶ್ನೆಗೆ ಸಾರ್ವಜನಿಕರ ಆಸ್ತಿ ಹಾನಿ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ನಾನು ಇದನ್ನು ಮಾಡುವುದಿಲ್ಲ, ನ್ಯಾಯಾಲಯ ಮಾಡುತ್ತದೆ. ಬಂದ್ ಮಾಡುವ ಮುಂಚಿತವಾಗಿ ಸೂಚನೆಯನ್ನೂ ನೀಡಿದೆ. ಕಾವೇರಿ ವಿಚಾರವಾಗಿ ಪಕ್ಷಾತೀತವಾಗಿ ಹೋರಾಟ ಮಾಡಿದ ಎಲ್ಲರಿಗೂ ಧನ್ಯವಾದ ತಿಳಿಸುತ್ತೇನೆ. ರಾಜ್ಯದ ಜನರೆಲ್ಲರೂ ಮಳೆಗಾಗಿ ಪ್ರಾರ್ಥನೆ ಮಾಡೋಣ ಎಂದರು. ಇಂದು ದೆಹಲಿಯಲ್ಲಿ ನಡೆದ ಕಾವೇರಿ ನೀರು ನಿಯಂತ್ರಣ ಸಮಿತಿಯ ಸಭೆಯಲ್ಲಿ ತಮಿಳುನಾಡಿಗೆ ಅ.15ರ ತನಕ 3 ಸಾವಿರ ಕ್ಯುಸೆಕ್ ನೀರು ಹರಿಸಬೇಕು ಎಂದು ಶಿಫಾರಸ್ಸು ಮಾಡಿದೆ ಎಂದು ಅವರು ಹೇಳಿದರು.

# ಕಾವೇರಿ ನೀರು ಹರಿಸದಿರಲು ಸರ್ಕಾರಕ್ಕೆ 3 ದಿನ ಗಡುವು

### ಪೊಲೀಸರು ಕೇಸ್ ವಾಪಸ್ ಪಡೆಯಬೇಕು: ಕುರುಬೂರು

**ಬೆಂಗಳೂರು:** ಕಾವೇರಿ ವಿಚಾರವಾಗಿ ಬೆಂಗಳೂರು ಬಂದ್ ಹಿನ್ನಲೆಯಲ್ಲಿ ನಗರದ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮನವಿ ಸ್ವೀಕರಿಸಿದಾಗ ಕಾವೇರಿ ನದಿ ನೀರನ್ನು ತಮಿಳುನಾಡಿಗೆ ಬಿಡುವ ವಿಚಾರದಲ್ಲಿ ಸರ್ಕಾರಕ್ಕೆ ಮೂರು ದಿನಗಳ ಗಡುವನ್ನು ಪ್ರತಿಭಟನಾಕಾರರು ನೀಡಿದ್ದಾರೆ. ತಕ್ಷಣ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು ಹಾಗೂ ರೈತ ಮುಖಂಡರ ಮೇಲೆ ಇರುವ ಕೇಸ್‌ಗಳನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.



ಸ್ಥಳಕ್ಕೆ ಸಿಎಂ ಬರಬೇಕು ಅಂತ ಒತ್ತಾಯ ಮಾಡಿದ್ದೆವು. ನಾಳೆ, ನಾಡಿದ್ದು ಹೋರಾಟಗಾರರನ್ನು ಕರೆಸಿ ಮಾತನಾಡುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಮೂರು ದಿನಗಳಲ್ಲಿ ಸರ್ಕಾರ ಸ್ಪಷ್ಟವಾದ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಪ್ರತಿಭಟನಾ ಸ್ಥಳದಲ್ಲಿ ರೈತ ಮುಖಂಡ ಕುರುಬೂರು ಶಾಂತಕುಮಾರ್ ಹೇಳಿದರು. ನಮ್ಮ ಮನವಿ ಪುರಸ್ಕರಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುವ ಎಚ್ಚರಿಕೆಯನ್ನು ಹೋರಾಟಗಾರರು ನೀಡಿದ್ದಾರೆ. ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಸಚಿವ ರಾಮಲಿಂಗಾರೆಡ್ಡಿ, ನೆಲ ಜಲ ಭಾಷೆ ಗೆ ಅನ್ಯಾಯ ಆದಾಗ ಹೋರಾಟ ಮಾಡುತ್ತಾ ಬಂದಿದ್ದಾರೆ. ಸರ್ಕಾರ 5 ವಿಚಾರಗಳನ್ನು ಹೇಳಿದೆ. ಮೂರು ದಿನಗಳಲ್ಲಿ ಮುಖಂಡರ ಸಭೆಯನ್ನು ಸಿಎಂ ಕರೆಯುವುದಾಗಿ ಹೇಳಿದ್ದಾರೆ. ಪೊಲೀಸರು ಹಾಕಿರುವ ಕೇಸ್ ಗಳನ್ನು ವಾಪಸ್ ತೆಗೆದುಕೊಳ್ಳುವ ವಿಚಾರ ಸೂಕ್ತ ಕ್ರಮ ಆಗುತ್ತದೆ ಎಂದಿದ್ದಾರೆ.

ಮೇಕೆದಾಟು ಅಣೆಕಟ್ಟು ವಿಚಾರದಲ್ಲಿ ಕ್ರಮ ಆಗುತ್ತದೆ. ಮಳೆ ಇಲ್ಲದ ಸಂದರ್ಭದಲ್ಲಿ ಸಂಕಷ್ಟ ಸೂತ್ರಕ್ಕಾಗಿ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು. ಸಂಕಷ್ಟ ಸೂತ್ರ ರಚನೆ ಆಗಲೇಬೇಕು. ಪ್ರತಿಭಟನಾಕಾರರ ಮನವಿಯನ್ನು ಮುಖ್ಯ ಮಂತ್ರಿಗೆ ತಲುಪಿಸುತ್ತೇನೆ ಎಂದರು.

ಮುಖ್ಯಮಂತ್ರಿಗಳ ಪರವಾಗಿ ಮನವಿ ಸ್ವೀಕರಿಸಿದ್ದೇನೆ. ನೀರು ಹರಿಸಬಾರದು ಎಂದು, ಸಂಕಷ್ಟ ಕಾಲದಲ್ಲಿ ಸಮಿತಿ ನಿರ್ಮಿಸಬೇಕು ಎಂದು, ಈ ಹಿಂದೆ ಕನ್ನಡ ಭಾಷೆ,ನೆಲ, ಜಲದ ಬಗ್ಗೆ ಹಾಕಿರುವ ಪ್ರಕರಣ ರದ್ದು ಮಾಡಬೇಕು ಎಂದು ಮನವಿ ಮಾಡಿದ್ದಾರೆ. ನಮ್ಮ ಸರ್ಕಾರ ಕರ್ನಾಟಕದ ರೈತರ ಪರ ಇದೆ. ಸಿಎಂ ಜೊತೆ ಚರ್ಚಿಸುತ್ತೇನೆ ಎಂದರು.

# ನಟ ರಂಗ ರತ್ನಾಕರ ನೆನಪು



ಮೈಸೂರು, ಸೆ. 26– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರತ್ನಾಕರ್ ಕಲಾ ಬಳಗದ ವತಿಯಿಂದ ನಟ, ಸಂಗೀತ ನಿರ್ದೇಶಕ, ಹಾಸ್ಯ ಪಾತ್ರಗಳಿಗೆ ಜೀವ ತುಂಬಿದ ರಂಗ ರತ್ನಾಕರ್ 13ನೇ ವರ್ಷದ ಸವಿನೆನಪಿಗಾಗಿ ರತ್ನಾಕರ್ ನೆನಪು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ಮಹಾನಗರ ಪಾಲಿಕೆಯ ಸದಸ್ಯ ಬಿ.ವಿ.ಮಂಜುನಾಥ್, ರತ್ನಾಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಕಲೆಗಳ ತವರೂರು. ಈ ಕಲೆಗಳನ್ನು ಮುಂದಿನ ತಲೆಮಾರಿಗೂ ಕೊಂಡೊಯ್ಯುವ ಕಲಾವಿದರು ಹೆಚ್ಚಾಗಬೇಕು. ಅಂತಹ ವಿರಳರಲ್ಲಿ ವಿರಳರಾದ ಹಾಸ್ಯ ನಟ ರತ್ನಾಕರ್‌ರವರ ಅಭಿನಯ ಹಾಗೂ ಅವರ ಹಾಸ್ಯಮಿಶ್ರಿತ ಧ್ವನಿಯನ್ನು ಯಾರು ಮರೆಯಲಾಗದು. ಇಂತಹ ಮಹನೀಯರ ಹೆಸರನ್ನು ಉಳಿಸುವ ಸಲುವಾಗಿ ನಗರಪಾಲಿಕೆ ವತಿಯಿಂದ ರಾಮಾನುಜ ರಸ್ತೆಯಲ್ಲಿರುವ ಉದ್ಯಾನವನಕ್ಕೆ ರತ್ನಾಕರ್ ಹೆಸರನ್ನು ಇಡಲು ಆಗ್ರಹಿಸುವುದಾಗಿ ತಿಳಿಸಿದರು.

ಸಮಾಜ ಸೇವಕರಾದ ಡಾ.ರಘುರಾಮ್ ವಾಜಪೇಯಿ ಮಾತನಾಡಿ, ರತ್ನಾಕರ್‌ರವರ ಕುಟುಂಬ ಕಲಾ ಕುಟುಂಬ. ಆ ಕಲೆಗಳನ್ನು ವಂಶಪಾರಂಪರ್ಯವಾಗಿ ಅವರ ಮಗ ರಾಘವೇಂದ್ರ ರತ್ನಾಕರ್ ಉಳಿಸಿಕೊಂಡು ಹೋಗುತ್ತಿರುವುದು ಸಂತೋಷದ ವಿಷಯ ಎಂದರು.

ರಂಗಕರ್ಮಿ ರಾಜಶೇಖರ್ ಕದಂಬ ಮಾತನಾಡಿ, ರತ್ನಾಕರ್ ಅವರ ಜೊತೆ ನಾನು ಒಡನಾಟವನ್ನು ಹೊಂದಿದ್ದೆ, ಅವರ ಜೊತೆ ಪಾತ್ರಗಳನ್ನು ಮಾಡಿದ ಸೌಭಾಗ್ಯ ನನ್ನದಾಗಿದೆ. ರತ್ನಾಕರ್‌ರವರು ಸದಾ ಚುರುಕಾಗಿ ಸಹ ಕಲಾವಿದರಿಗೆ ಪ್ರೋತ್ಸಾಹ, ಸಹಕಾರ ನೀಡುತ್ತಿದ್ದುದ್ದನ್ನು ಸ್ಮರಿಸಿಕೊಂಡರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಮಡ್ಡಿಗೆರೆ ಗೋಪಾಲ್ ಮಾತನಾಡಿ, ಚಲನಚಿತ್ರ ರಂಗದಲ್ಲಿ ರಂಗ ರತ್ನಾಕರ ಎಂದು ಗುರುತಿಸಿಕೊಂಡು ಜೊತೆಗೆ ಸಂಗೀತ, ನಿರ್ದೇಶನಗಳಲ್ಲಿಯೂ ದುಡಿದು ಎಲ್ಲರ ಮನಸ್ಸನ್ನು ಗೆದ್ದವರಾಗಿದ್ದರು. ಅಂದಿನ ದಿನಗಳಲ್ಲಿ ಪಾತ್ರ ಮಾಡುವುದರ ಜೊತೆಗೆ ಹೊಸ ರೀತಿಯ ಕಂಠ (ಮಿಮಿಕ್ರಿ ಧ್ವನಿ) ಪರಿಚಯಿಸಿದ ಕೀರ್ತಿ ಇವರದ್ದಾಗಿದೆ ಎಂದರು. ವೇದಿಕೆಯಲ್ಲಿ ನಗರ ಪಾಲಿಕೆ ಸದಸ್ಯರಾದ ಮಾ.ವಿ.ರಾಮ್ ಪ್ರಸಾದ್, ಇಳೈ ಆಳ್ವಾರ್ ಸ್ವಾಮೀಜಿ, ಗಾಯಕರಾದ ರಾಘವೇಂದ್ರ ರತ್ನಾಕರ್, ಡಾ.ಪ್ರೀತಂ, ಶ್ರೇಷ್ಠ ಉಪಸ್ಥಿತರಿದ್ದರು. ನಂತರ ನಡೆದ ಗಾಯನ ಕಾರ್ಯಕ್ರಮದಲ್ಲಿ ರತ್ನಾಕರ್ ಅವರೇ ರಚಿಸಿ ಸಂಗೀತ ನಿರ್ದೇಶಿಸಿದ ಕೊಲ್ಲೂರು ಮೂಕಾಂಬಿಕದೇವಿ, ಸರ್ವಶಕ್ತಿ ನೀನೇ, ಅಂಬೆ ಜಗದಾಂಬೆ, ಇನ್ನಿತರ ಗೀತೆಗಳನ್ನು ಹಾಡುವುದರ ಮೂಲಕ ಪ್ರೇಕ್ಷಕರನ್ನು ರಂಜಿಸಿದರು.

## ಏಷ್ಯನ್ ಗೇಮ್ಸ್‌ನಲ್ಲಿ ಇತಿಹಾಸ ಬರೆದ 'ಕುದುರೆ ಸವಾರಿ' ತಂಡ; 41 ವರ್ಷದ ಬಳಿಕ ಭಾರತಕ್ಕೆ ಚಿನ್ನ



**ಹ್ಯಾಂಗ್ ಝೌ:** ಏಷ್ಯನ್ ಗೇಮ್ಸ್ 2023 ಕ್ರೀಡಾಕೂಟದಲ್ಲಿ ಮಂಗಳವಾರ ಭಾರತ ಐತಿಹಾಸಿಕ ಸಾಧನೆ ಮಾಡಿದ್ದು ಈಕ್ವೆಸ್ಟ್ರಿಯನ್ (ಕುದುರೆ ಸವಾರಿ)ನಲ್ಲಿ ಬರೋಬ್ಬರಿ 41 ವರ್ಷಗಳ ಬಳಿಕ ಭಾರತ ತಂಡಕ್ಕೆ ಚಿನ್ನದ ಪದಕ ಲಭಿಸಿದೆ.

2023ರ ಏಷ್ಯನ್ ಗೇಮ್ಸ್ ಕ್ರೀಡಾಕೂಟದಲ್ಲಿ ಭಾರತದ ಕುದುರೆ ಸವಾರಿ ತಂಡವು ಇತಿಹಾಸವನ್ನು ನಿರ್ಮಿಸಿದ್ದು, ಟೀಮ್ ಡ್ರೆಸ್ಸೇಜ್ ಈವೆಂಟ್‌ನಲ್ಲಿ, ತಂಡವು ಅಗ್ರ ಸ್ಥಾನಕ್ಕೇರಿ ಚಿನ್ನ ಪದಕವನ್ನು ಗೆದ್ದುಕೊಂಡಿದೆ. ಆ ಮೂಲಕ ಬರೊಬ್ಬರಿ 41 ವರ್ಷಗಳ ಬಳಿಕ ಭಾರತ ಕುದುರೆ ಸವಾರಿ ತಂಡ ಚಿನ್ನದ ಪದಕಕ್ಕೆ ಮುತ್ತಿಟ್ಟಿದೆ. ಈ ಕ್ರೀಡೆಯಲ್ಲಿ 1982 ರ ಬಳಿಕ ಭಾರತಕ್ಕೆ ಸಿಕ್ಕ ಮೊದಲ ಚಿನ್ನದ ಪದಕ ಇದಾಗಿದೆ.

ಟೀಮ್ ಡ್ರೆಸ್ಸೇಜ್ ಈವೆಂಟ್‌ನಲ್ಲಿ ಭಾರತ ತಂಡವು ಒಟ್ಟು 209.205 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದರೆ, ಚೀನಾ 204.882 ರೊಂದಿಗೆ ಬೆಳ್ಳಿಯೊಂದಿಗೆ ಮತ್ತು ಹಾಂಗ್‌ಕಾಂಗ್ ಚೀನಾ 204.852 ರೊಂದಿಗೆ 3ನೇ ಸ್ಥಾನದಲ್ಲಿ ಕಂಚಿನ ಪದಕ ಪಡೆದುಕೊಂಡಿದೆ. ಸುದೀಪ್ತಿ ಹಜೇಲಾ, ಹೃದಯ್ ವಿಪುಲ್ ಛೇಡಾ, ಅನುಷ್ ಗರ್ವಾಲಾ ಮತ್ತು ದಿವ್ಯಕೃತಿ ಸಿಂಗ್ ಅವರ ಭಾರತ ತಂಡವು ಕುದುರೆ ಸವಾರಿಯಲ್ಲಿ ಡ್ರೆಸ್ಸೇಜ್ ಸ್ಪರ್ಧೆಯಲ್ಲಿ ಭಾರತಕ್ಕೆ ಮೊದಲ ಚಿನ್ನದ ಪದಕವನ್ನು ಗೆಲ್ಲುವ ಮೂಲಕ ಇತಿಹಾಸವನ್ನು ಬರೆದಿದೆ.

ಡ್ರೆಸ್ಸೇಜ್ ಟೀಮ್ ಈವೆಂಟ್‌ನಲ್ಲಿ ತಂಡದ ಒಟ್ಟಾರೆ ಸ್ಕೋರ್‌ಗೆ ಅಗ್ರ 3 ತಂಡಗಳ ಸ್ಕೋರ್ ಅನ್ನು ಮಾತ್ರ ಪರಿಗಣಿಸಲಾಗುತ್ತದೆ. ಅಂತೆಯೇ ಇದು ಏಷ್ಯನ್ ಗೇಮ್ಸ್‌ನಲ್ಲಿ ಈಕ್ವೆಸ್ಟ್ರಿಯನ್‌ನಲ್ಲಿ ಭಾರತದ ನಾಲ್ಕನೇ ಚಿನ್ನದ ಪದಕವಾಗಿದ್ದು, ಕ್ರೀಡಾಕೂಟದಲ್ಲಿ ಒಟ್ಟಾರೆ 13ನೇ ಪದಕವಾಗಿದೆ. ಈಕ್ವೆಸ್ಟ್ರಿಯನ್‌ನಲ್ಲಿ ಭಾರತದ ಎಲ್ಲಾ 3 ಚಿನ್ನದ ಪದಕಗಳು 1982 ರಲ್ಲಿ ದೆಹಲಿಯಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಬಂದಿದ್ದವು.

## ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ಹೆಚ್ಚಿಸುವ ಚಿಂತನೆ ಇದೆ

ಮೈಸೂರು, ಸೆ.26(ಬಿಎಲ್‌ಯು)–



ಹಾಲು ಉತ್ಪಾದಕರಿಗೆ ಈಗ ನೀಡುತ್ತಿರುವ 5 ರೂಪಾಯಿ ಪ್ರೋತ್ಸಾಹ ಧನವನ್ನು ಮತ್ತಷ್ಟು ಹೆಚ್ಚು ಮಾಡುವ ಚಿಂತನೆ ಇದೆ ಎಂದು ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್ ತಿಳಿಸಿದರು.

ಮೈಸೂರಿನ ಉತ್ತನಹಳ್ಳಿಯಲ್ಲಿ ಇಂದು ಪಶು ಸಖಿಯರಿಗೆ ಆಯೋಜಿಸಿದ್ದ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈಗಾಗಲೇ ಪ್ರೋತ್ಸಾಹ ಧನ ಹೆಚ್ಚಳ ಮಾಡಬೇಕಿತ್ತು. ಆದರೆ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಕಾರಣ ಆರ್ಥಿಕ ಹೊರೆಯಿಂದಾಗಿ ಇದು ಸಾಧ್ಯವಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಆದರೂ ಪ್ರೋತ್ಸಾಹ ಧನ ಹೆಚ್ಚಳ ಮಾಡುವಂತೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತಿದ್ದೇನೆ ಎಂದು ವೆಂಕಟೇಶ್ ತಿಳಿಸಿದರು.

ಪಶ ಸಂಗೋಪನಾ ಇಲಾಖೆಯಲ್ಲಿ ಅಧಿಕಾರಿಗಳು ಸೇರಿದಂತೆ 18 ಸಾವಿರ ಸಿಬ್ಬಂದಿಗಳಿರಬೇಕು. ಆದರೆ ಈಗ 9 ಸಾವಿರ ಇದ್ದಾರೆ. ಇದರಿಂದ ಸಿಬ್ಬಂದಿ ನೇಮಕಾತಿ ಅನಿವಾರ್ಯತೆ ಇದೆ ಎಂದು ಹೇಳಿದರು. ಕಾಲು ಬಾಯಿ ಜ್ವರಕ್ಕೆ ದೇಶದ ಹಲವು ರಾಜ್ಯಗಳಲ್ಲಿ 2ನೇ ಸುತ್ತಿನ ಲಸಿಕೆ ಮಾತ್ರ ನೀಡಿದ್ದರೆ, ಕರ್ನಾಟಕದಲ್ಲಿ 4 ನೇ ಸುತ್ತಿನ ಲಸಿಕೆ ನೀಡಲಾಗುತ್ತಿದೆ ಎಂದು ವೆಂಕಟೇಶ್ ವಿವರಿಸಿದರು.

# ಮಹಾಜನ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಸಂಸ್ಥಾಪನಾ ದಿನಾಚರಣೆ

ಮೈಸೂರು, ಸೆ. 26– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿಶ್ವವಿದ್ಯಾನಿಲಯ ಮತ್ತು ರಾಷ್ಟ್ರೀಯ ಸೇವಾ ಯೋಜನೆ, ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ಕಾಲೇಜು (ಸ್ವಾಯತ್ತ) ಸಹಯೋಗದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಗ್ರಾಮೀಣ ಪುನರ್ ನಿರ್ಮಾಣದಲ್ಲಿ ಯುವ ಜನತೆಯ ಪಾತ್ರ ವಿಷಯ ಕುರಿತು ವಿಶೇಷ ಉಪನ್ಯಾಸವನ್ನು ಆಯೋಜಿಸಲಾಗಿತ್ತು.



ಪ್ರಸಿದ್ಧ ವಾಗ್ಮಿಗಳಾದ ಪ್ರೊ. ಎಂ. ಕೃಷ್ಣೇಗೌಡ ಉಪನ್ಯಾಸ ನೀಡುತ್ತಾ, ದೇಶದ ಮಹಾನ್ ವ್ಯಕ್ತಿಗಳಾದ ಗಾಂಧೀಜಿ ಹಾಗೂ ವಿವೇಕಾನಂದರು ರಾಷ್ಟ್ರ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ರಾಷ್ಟ್ರೀಯ ಸೇವಾ ಯೋಜನೆ ಎಂದರೆ ಗ್ರಾಮೀಣ ಅಭಿವೃದ್ಧಿ ಸೇವೆ. ಇದನ್ನು ಮಾಡಲು ಯಾವುದೇ ಅಧಿಕಾರದ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿದರು. ಮುಖ್ಯ ಅತಿಥಿಗಳಾದ ಮೈಸೂರು ಕೇಂದ್ರ ಮೀಸಲು ಪಡೆಯ ವಿಶ್ರಾಂತ ಐಜಿಪಿ ಕೆ. ಅರ್ಕೇಶ್ ಮಾತನಾಡಿ, ರಾಷ್ಟ್ರ ನಿರ್ಮಾಣದಲ್ಲಿ ಎನ್‌ಎಸ್‌ಎಸ್ ವಿದ್ಯಾರ್ಥಿಗಳ ಪಾತ್ರ ಪ್ರಮುಖವಾದದ್ದು. ಜೀವನದಲ್ಲಿ ಎನ್‌ಎಸ್‌ಎಸ್‌ನ ಮೌಲ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ. ನಾನು ವೈಯಕ್ತಿಕವಾಗಿ ಎನ್‌ಎಸ್‌ಎಸ್‌ನಲ್ಲಿ ತೊಡಗಿಸಿಕೊಂಡಿದ್ದಕ್ಕೆ ಪೊಲೀಸ್ ವೃತ್ತಿಗೆ ಸಹಕಾರಿಯಾಯಿತು ಎಂದು ಹೇಳಿದರು. ನಾಗಮಂಗಲದ ಸಂಸ್ಕೃತಿ ಚಿಂತಕರಾದ ಮೊಹಮ್ಮದ್ ಕಲೀಂ ಉಲ್ಲಾ ಮಾತನಾಡಿ, ಎನ್‌ಎಸ್‌ಎಸ್‌ನ ಮೂಲಕ ಎಷ್ಟೋ ಶಿಲಾಶಾಸನಗಳು ಬೆಳಕಿಗೆ ಬಂದಿವೆ. ಮರೆಯಾಗಿರುವ ಇಂಥಹ ಶಾಸನಗಳು ಗತಕಾಲದ ಪಳೆಯುಳಿಕೆಯಾಗಿವೆ. ಇವುಗಳನ್ನು ಸಂರಕ್ಷಿಸುವ ಜವಾಬ್ದಾರಿ ಯುವಜನತೆಯ ಮೇಲಿದೆ ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಡಾ ಬಿ. ಆರ್. ಜಯಕುಮಾರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ, ಪ್ರತಿಯೊಬ್ಬ ವಿದ್ಯಾರ್ಥಿಯು ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು, ಆಗ ಮಾತ್ರ ಸಾಮಾಜಿಕ ಜವಾಬ್ದಾರಿಗಳ ಮೂಲಕ ಸದೃಢ ಭಾರತವನ್ನು ಕಟ್ಟಲು ಸಾಧ್ಯ ಎಂದು ಹೇಳಿದರು. ಮಹಾಜನ ವಿದ್ಯಾಸಂಸ್ಥೆಯ ಗೌ. ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್ ಅಧ್ಯಕ್ಷತೆಯನ್ನು ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ. ಹೆಚ್.ಆರ್.ತಿಮ್ಮೇಗೌಡ, ಮೈವಿವಿ ವಿಶ್ರಾಂತ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ. ಬಿ. ಕೆ. ಶಿವಣ್ಣ, ಮೈವಿವಿ ನಿಲಯದ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ಎಂ. ಬಿ. ಸುರೇಶ. ಪ್ರೊ. ಕಾಳಚನ್ನೇಗೌಡ, ವೀರಯ್ಯ. ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ಡಾ.ದೊಡ್ಡರಸಯ್ಯ. ಜಿ. ಸಿದ್ದರಾಜು ಸಿ. ಎಸ್., ಎನ್‌ಎಸ್‌ಎಸ್ ಸ್ವಯಂ ಸೇವಕ–ಸೇವಕಿಯರು ಹಾಜರಿದ್ದರು.


## ಜಶ್ನೆ ಈದ್ ಮೀಲಾದ್–ಉನ್–ನಬಿ

ಮೈಸೂರು, ಸೆ. 26– ಮಿನ್‌ಹಜ್–ಉಲ್–ಖುರಾನ್ ಇಂಟರ್‌ನ್ಯಾಷನಲ್ ಇಂಡಿಯಾ, ಮೈಸೂರು ಶಾಖೆ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಜಶ್ನೆ ಈದ್ ಮೀಲಾದ್–ಉನ್–ನಬಿ (ಎಸ್‌ಡಬ್ಲ್ಯುಎಸ್) ಅನ್ನು ಮೈಸೂರಿನ ಸರ್‌ಖಾಜಿಯವರಾದ ಹಜ಼ರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್ ಅವರ ಅಧ್ಯಕ್ಷತೆಯಲ್ಲಿ ಸೆ.30 ರಂದು ಸಂಜೆ 7ರಿಂದ 10ರವರೆಗೆ, ಐತಿಹಾಸಿಕ ಮೀಲಾದ್ ಬಾಗ್, ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು ಇಲ್ಲಿ ಏರ್ಪಡಿಸಲಾಗಿದೆ.

ಭಾರತದ ಹೆಸರಾಂತ ನಾತ್ ಖಾನ್ ಸೈಯದ್ ಇಮ್ರಾನ್ ಮುಸ್ತಫಾ ಸಾಹೇಬ್ ಮತ್ತು ತಂಡ, ಹೈದರಾಬಾದ್, ಆಂಧ್ರ ಪ್ರದೇಶ ಮತ್ತು ಖಾರಿ ಸಮೀವುಲ್ಲಾ ಖಾದ್ರಿ, ಬಾಗಲಕೋಟೆ ಅವರು ಮೆಹಫಿಲ್ ನಾತ್ ಕಾರ್ಯಕ್ರಮ (ಪ್ರವಾದಿ ಮುಹಮ್ಮದ್ (ಪಿಬಿಹೆಚ್‌ಯು) ರವರ ಶ್ಲೋಕಗಳು) ನಡೆಸಿಕೊಡಲಿದ್ದಾರೆ. ಹೆಚ್ಚಿನ ವಿವರಗಳಿಗಾಗಿ ಸೈಯದ್ ಜುನೇದ್, ಕಾರ್ಯದರ್ಶಿ, ಮೊ.9880526347 ಅಥವಾ ರೆಹಮಾನ್ ಷರೀಫ್, ಮೊಬೈಲ್ 9901894360 ಅನ್ನು ಸಂಪರ್ಕಿಸಬಹುದು.

# ಭಾರತದಲ್ಲಿ ಪ್ರತಿ ವರ್ಷ ಸುಮಾರು 3.5 ಮಿಲಿಯನ್ ಶಿಶುಗಳು ಅವಧಿಗೆ ಮುನ್ನವೇ ಜನನ: ಡಾ.ಜಯರಾಮ್

ಮೈಸೂರು, ಸೆ. 26–ಯುನಿಸ್ ಅಂಕಿ–ಅಂಶಗಳ ಪ್ರಕಾರ ಭಾರತದಲ್ಲಿ 73,787 ನವಜಾತ ಶಿಶುಗಳು (ವರ್ಷಕ್ಕೆ 26.932 ಮಿಲಿಯನ್) ಜನಿಸುತ್ತಿವೆ. ಇದರಲ್ಲಿ ಸುಮಾರು 3.5 ಮಿಲಿಯನ್ ಶಿಶುಗಳು ಅವಧಿಗೂ ಮುನ್ನವೇ ಜನಿಸುತ್ತಿದ್ದು, ಅದರಲ್ಲಿ 7 ಮಿಲಿಯನ್ ಶಿಶುಗಳು ಯಾವುದಾದರೂ ನ್ಯೂನತೆಗೆ ತುತ್ತಾಗುತ್ತಿವೆ. ಪ್ರತಿವರ್ಷ ವಿಶೇಷ ನವಜಾತ ಶಿಶುಗಳ ಆರೈಕೆ ಘಟಕಗಳಿಂದ ಒಂದು ಮಿಲಿಯನ್ ಮಕ್ಕಳು ಬಿಡುಗಡೆಯಾಗುತ್ತಿವೆ ಎಂದು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಮಾಜಿ ನಿರ್ದೇಶಕ ಡಾ.ಎಂ. ಜಯರಾಮ್ ಹೇಳಿದರು.




ನಗರದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಅಕಾಡೆಮಿಕ್ ಬ್ಲ್ಯಾಕ್‌ನ ಸೆಮಿನಾರ್ ಹಾಲ್‌ನಲ್ಲಿ ಸೋಮವಾರ ಮಕ್ಕಳಲ್ಲಿನ ಸಂವಹನ ಅಸ್ವಸ್ಥತೆಗಳ ಆರಂಭಿಕ ಗುರುತಿಸುವಿಕೆ ಮತ್ತು ಮಧ್ಯಸ್ಥಿಕೆ ಕುರಿತು ನಡೆದ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾರತದಲ್ಲಿ ಮಕ್ಕಳ ಶ್ರವಣ ದೋಷಗಳ ತಪಾಸಣೆಯ ಪ್ರಸ್ತುತ ಸ್ಥಿತಿ ಮತ್ತು ಮುಂದಿನ ಹಾದಿ ಎಂಬ ವಿಷಯ ಕುರಿತು ಮುಖ್ಯ ಭಾಷಣ ಮಾಡಿದರು.

ಶಿಶು ಮರಣ ಪ್ರಮಾಣ ಹೆಚ್ಚಿದ್ದರೂ, ಮಕ್ಕಳ ಜನಸಂಖ್ಯೆಗೆ ಪ್ರತಿದಿನದ ಸೇರ್ಪಡೆಯು ಗಣನೀಯವಾಗಿ ಹೆಚ್ಚಾಗುತ್ತಿದೆ. ಮಕ್ಕಳ ಸಂವಹನವನ್ನು ಗುರುತಿಸದೆ ಇರುವುದು, ಸರಿಯಾದ ಸಮಯಕ್ಕೆ ಸೂಕ್ತ ಚಿಕಿತ್ಸೆ ನೀಡದಿರುವುದು ಶಿಶು ಮರಣ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಮಾಹಿತಿ ನೀಡಿದರು.

ನವಜಾತ ಶಿಶು ಜನನವಾದ ನಂತರ ಹಲವಾರು ಬೆಳವಣಿಗೆಯನ್ನು ಪಾಲಕರು ಗಮನಿಸಬೇಕು. ಮಗುವಿಗೆ ಸಂವಹನದ ಅಸ್ವಸ್ಥತೆಗಳಿದ್ದರೆ ಬಹಳ ಬೇಗನೆ ಗುರುತಿಸಬೇಕು.

ಪೋಷಕರು ತಮ್ಮ ವೃತ್ತಿ ಜೀವನಕ್ಕಾಗಿ ಮಕ್ಕಳ ಜೀವವನ್ನು ಬಲಿ ಕೊಡ ಬಾರದು. ಅಂಗವೈಕಲ್ಯ ಹೊಂದಿರುವ ಮಗುವನ್ನು ಸ್ಕ್ರೀನಿಂಗ್ ಮಾಡಬೇಕು. ಬಹುಬೇಗ ಗುರುತಿಸಿದರೆ ಮಗುವಿನ ಚಿಕಿತ್ಸೆಗೆ ತಗುಲುವ ವೆಚ್ಚವೂ ಕಡಿಮೆ ಇರುತ್ತದೆ. ಹಾಗಾಗಿ ಮಕ್ಕಳ ಆಲಿಸುವಿಕೆ ಹಾಗೂ ಕೇಳಿಸುವಿಕೆಯನ್ನು ಗುರುತಿಸುವಿಕೆ ಕೂಡ ತುಂಬಾ ಮುಖ್ಯವಾದ ಹಂತವಾಗಿರುತ್ತದೆ ಎಂದು ಹೇಳಿದರು.

ಸವಾಲು ಹಲವು: ಸಾಮಾನ್ಯವಾಗಿ ಮಕ್ಕಳ ಸಂವಹನ ಗುರುತಿಸುವಿಕೆಯಲ್ಲಿ ತರಬೇತಿ ಪಡೆದ ಸಿಬ್ಬಂದಿ ಲಭ್ಯವಿಲ್ಲದಿರುವುದು ವಿಷಾದನೀಯ. ತಪಾಸಣೆಗೆ ಒಳಪಡುವ ಜನಸಂಖ್ಯೆಯ ಅಗಾಧ ಗಾತ್ರ, ಸಲಕರಣೆಗಳ ಕೊರತೆ, ಜನರಿಗೆ ಅರಿವು–ಶಿಕ್ಷಣದ ಕೊರತೆ, ಆಡಳಿತಾತ್ಮಕ ನಿರಾಸಕ್ತಿಯಿಂದ ಇಂದು ಸಂವಹನ ಸಮಸ್ಯೆಯೂ ಸಂಕೀರ್ಣವಾಗುತ್ತಿದೆ. ಈ ಎಲ್ಲಾ ಅಡೆತಡೆಗಳ ನಡುವೆಯೂ ದಿಟ್ಟ ನಿರ್ಧಾರ ಕೈಗೊಂಡು ಉತ್ತಮ ಕಾರ್ಯಕ್ರಮ ಜಾರಿಗೊಳಿಸಿದವರು ಒಂದಷ್ಟು ಯಶಸ್ಸು ಕಂಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಸಂವಹನ ಅಸ್ವಸ್ಥತೆಗಳನ್ನು ಗುರುತಿಸಲು ನಾವು ಅನುಸರಿಸುತ್ತಿರುವ ವಿಧಾನಗಳು ಆರ್ಥಿಕವಾಗಿ ದುಬಾರಿಯಾಗುತ್ತಿದೆ. ಈ ನಿಟ್ಟಿನಲ್ಲಿ ನಾವು ಪರ್ಯಾಯ ವಿಧಾನಗಳ ಬಗ್ಗೆ ಯೋಚಿಸಬೇಕಾಗಿದೆ. ಇದಕ್ಕೆ ಒಂದಷ್ಟು ಸಮಯ ತೆಗೆದುಕೊಳ್ಳಬಹುದು. ಆದರೆ, ಈ ನಿಟ್ಟಿನಲ್ಲಿ ನಿರಂತರ ಸಂಶೋಧನೆಯ ಅಗತ್ಯವಿದೆ ಎಂದರು.

ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪೀಡಿಯಾಟ್ರಿಕ್ಸ್ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ.ಎಸ್.ಎನ್. ಪ್ರಶಾಂತ್ ಮಾತನಾಡಿ, 'ಸಂವಹನ ಅಸ್ವಸ್ಥತೆಗಳ ಆರಂಭಿಕ ಗುರುತಿಸುವಿಕೆಯಲ್ಲಿ ಮಕ್ಕಳ ವೈದ್ಯರ ಪಾತ್ರ' ವಿಷಯ ಕುರಿತು ಮಾತನಾಡಿದರು. ಆಯಿಷ್‌ನ ಶ್ರವಣಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಎಂ.ಸಂದೀಪ್, 'ಸಂವಹನ ಅಸ್ವಸ್ಥತೆಗಳ ಪ್ರಭುತ್ವ ಮತ್ತು ಆರಂಭಿಕ ಗುರುತಿಸುವಿಕೆ ಮತ್ತು ಮಧ್ಯಸ್ಥಿಕೆಯ ಅಗತ್ಯ' ಕುರಿತು ಉಪನ್ಯಾಸ ನೀಡಿದರು. ಆಯಿಷ್ ಸಂಸ್ಥೆಯ ಪ್ರಭಾರಿ ನಿರ್ದೇಶಕರು, ಡೀನ್ ಪಿ.ಮಂಜುಳಾ ಭಾಗವಹಿಸಿದ್ದರು. ಎರಡು ದಿನದ ಸೆಮಿನಾರ್‌ನಲ್ಲಿ ದೇಶಾದ್ಯಂತ 175ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

# ತಿ.ನರಸೀಪುರದಲ್ಲಿ ಕಾವೇರಿ ಬಂದ್ ಯಶಸ್ವಿ

## ಅಂಗಡಿ-ಮುಂಗಟ್ಟು, ಪೆಟ್ರೋಲ್ ಬಂಕ್, ಬ್ಯಾಂಕುಗಳು ಬಂದ್





ತಿ.ನರಸೀಪುರ, ಸೆ.26– ರಾಜ್ಯದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ, ರಾಜ್ಯದ ರೈತರ ಹಿತರಕ್ಷಣೆ ಮಾಡುವಂತೆ ಸರ್ಕಾರ ವನ್ನು ಆಗ್ರಹಿಸಿ ಹಾಗೂ ಬೆಂಗಳೂರು ಬಂದ್ ಬೆಂಬಲಿಸಿ, ಕಾವೇರಿ, ಕಬಿನಿ ರೈತರ ಹಿತರಕ್ಷಣಾ ಸಮಿತಿಯು ವಿವಿಧ ಸಂಘ ಟನೆಗಳೊಂದಿಗೆ ಕರೆ ನೀಡಿದ್ದ ಟಿ.ನರಸೀಪುರ ಬಂದ್ ಸಂಪೂರ್ಣ ಯಶಸ್ವಿಯಾಗಿದೆ.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಸೇರಿದ ರೈತ ಮುಖಂಡರು, ವಿವಿಧ ಸಂಘಟನೆಗಳ ಪ್ರಮುಖರು ಕಾಲೇಜು ರಸ್ತೆ, ಲಿಂಕ್ ರಸ್ತೆ, ಪುರಸಭಾ ರಸ್ತೆ ಹಾಗೂ ತಾಲೂಕು ಕಚೇರಿ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ನಂತರ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

> ರಾಜ್ಯದ ಜನತೆಗೆ ಅನ್ಯಾಯವಾದಾಗ ಎಲ್ಲರೂ ಪಕ್ಷಭೇದ ಮರೆತು ಹೋರಾಟ ಮಾಡಬೇಕು. ತಮಿಳುನಾಡಿನವರು ನೀರು ಕೇಳುವ ಮೊದಲೇ ರಾಜ್ಯ ಸರ್ಕಾರ ನೀರು ಹರಿಸಿರುವುದು ಅಕ್ಷಮ್ಯ. ಅಧಿಕಾರಿ ಗಳು ಹಿಂದಿನ ಮಾಹಿತಿ, ಮುಂದೆ ಆಗಬಹುದಾದ ಅನಾಹುತಗಳನ್ನು ಕಲೆ ಹಾಕಬೇಕಿತ್ತು. ನಂತರ ನೀರು ಬಿಡುವ ಬಗ್ಗೆ ತೀರ್ಮಾನಕ್ಕೆ ಬರಬೇಕಿತ್ತು. ನೀರನ್ನು ಎಷ್ಟು ಪ್ರಮಾಣದಲ್ಲಿ ಬಿಡಬೇಕು, ಬಿಟ್ಟರೆ ರಾಜ್ಯಕ್ಕಾಗುವ ಅನಾಹುತಗಳೇನು? ಯಾವ ಸಂದರ್ಭದಲ್ಲಿ ನೀರು ಬಿಡಬೇಕಿತ್ತು ಎಂಬ ಸಾಮಾನ್ಯ ಜ್ಞಾನ ಸರ್ಕಾರಕ್ಕಿದ್ದಂತಿಲ್ಲ. ಹಾಗಾಗಿ ಈಗ ನೀರು ಬಿಟ್ಟು ರಾಜ್ಯದ ರೈತರಿಗೆ ಅನ್ಯಾಯ ಮಾಡಲಾಗಿದೆ.
>
> -ಎಂ.ಅಶ್ವಿನ್ ಕುಮಾರ್, ಮಾಜಿ ಶಾಸಕ

ಬಂದ್ ಹಿನ್ನೆಲೆಯಲ್ಲಿ ಬ್ಯಾಂಕುಗಳು ಕಾರ್ಯ ನಿರ್ವಹಿಸಲಿಲ್ಲ. ಸಾರಿಗೆ ಸಂಸ್ಥೆ ಬಸ್‌ಗಳು ಅಲ್ಲೊಂದು ಇಲ್ಲೊಂದು ಸಂಚಾರ ನಡೆಸಿದರೆ, ಖಾಸಗಿ ಬಸ್‌ಗಳು ಸಂಪೂರ್ಣವಾಗಿ ಸಂಚಾರ ಸ್ಥಗಿತಗೊಳಿಸಿದ್ದವು. ಪೆಟ್ರೋಲ್ ಬಂಕ್ ಮಾಲೀಕರು ಸಹ ಬಂದ್‌ಗೆ ಬೆಂಬಲ ವ್ಯಕ್ತ ಪಡಿಸಿ ಬಂಕ್ ಸೇವೆ ಸ್ಥಗಿತಗೊಳಿಸಿದ್ದರು. ಅಂಗಡಿ–ಮುಂಗಟ್ಟುಗಳು, ಹೋಟೆಲ್‌ಗಳು ಮುಚ್ಚಿದ್ದವು. ವಾಹನಗಳ ಸಂಚಾರ, ಜನರ ಓಡಾಟ ವಿರಳವಾಗಿತ್ತು ಸರ್ಕಾರಿ ಕಚೇರಿಗಳು ಎಂದಿನಂತೆ ಕಾರ್ಯ ನಿರ್ವಹಿಸಿದವು. ಲಿಂಕ್ ರಸ್ತೆ, ಕಾಲೇಜು ರಸ್ತೆ ಸೇರಿದಂತೆ ವಿವಿಧ ಪ್ರಮುಖ ರಸ್ತೆಗಳು ಜನರಿಲ್ಲದೇ ಬಿಕೋ ಎನ್ನುತ್ತಿದ್ದ ದೃಶ್ಯ ಕಂಡುಬಂತು.

ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಡಾ.ಎಸ್.ಚಂದ್ರಶೇಖರ್ ಮಾತನಾಡಿ, ರಾಜ್ಯದ ರೈತರ ಹಿತವನ್ನು ಕಾಪಾಡ ಬೇಕಾದ ಸರ್ಕಾರ ನೆರೆಯ ರಾಜ್ಯದ ರೈತರ ಹಿತವನ್ನು ಕಾಪಾಡಲು ಮುಂದಾ ಗಿರುವುದು ವಿಪರ್ಯಾಸ ಎಂದರು.

ಸಮಿತಿ ಸಂಚಾಲಕ ಕಿರಗಸೂರು ಶಂಕರ್ ಮಾತನಾಡಿದರು. ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರ ಸಂಘ, ದಲಿತ ಸಂಘರ್ಷ ಸಮಿತಿಗಳು, ನಯನಜ ಕ್ಷತ್ರಿಯ ಸಂಘ, ಮಡಿವಾಳ ಸಂಘ, ತಾಲೂಕು ಕನ್ನಡ ಸಾಹಿತ್ಯ ಪರಿಷತ್, ವರ್ತಕರ ಸಂಘ, ಟೈಲರ್ ಸಂಘ, .ಆರ್ಯವೈಶ್ಯ ಸಂಘ, ಟಿ ನರಸೀಪುರ ಟೌನ್ ಗಿರಿವಿ ಮಾಲೀಕರ ಸಂಘ, ರಸ್ತೆಬದಿ ವ್ಯಾಪಾರಿಗಳ ಸಂಘ, ಕಾರ್ಮಿಕರ ಸಂಘ ಸೇರಿದಂತೆ ವಿವಿಧ ಸಂಘಟನೆಗಳು ಬಂದ್‌ಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದವು.

ಪ್ರತಿಭಟನೆಯಲ್ಲಿ ರಾಜ್ಯ ಜೆಡಿಎಸ್ ಮಾಧ್ಯಮ ವಕ್ತಾರ ತಾಯೂರು ಪ್ರಕಾಶ್, ಸಾಗರ್, ಯಡದೊರೆ ಮಹದೇವಯ್ಯ, ಕುರುಬೂರು ಸಿದ್ದೇಶ್, ಸೋಸಲೆ ರಾಜ ಶೇಖರ್, ಕೆಂಪಯ್ಯನಹುಂಡಿ ರಾಜು, ತುಂಬಲ ಮಂಜುನಾಥ್, ನಿಂಗರಾಜು, ನಾಗೇಂದ್ರ, ಕಳ್ಳಿಪುರ ಮಹದೇವಸ್ವಾಮಿ, ಪುಟ್ಟಸ್ವಾಮಿ, ಹುಣಸೂರು ಪುಟ್ಟಯ್ಯ, ರುದ್ರ, ಸಿ.ಪುಟ್ಟಮಲ್ಲಯ್ಯ, ಕಿರಗಸೂರು ಪ್ರಸಾದ್ ನಾಯಕ್, ಸ್ವಾಮಿಗೌಡ, ಕ್ರೇಜಿ ಸುರೇಶ್, ಎಲ್.ಸಿದ್ದರಾಜು, ಸಿಸ್ಟರ್ ಬ್ಯಾಂಗಲ್ಸ್ ಅಪ್ಪಣ್ಣ, ವಾಚ್ ಕುಮಾರ್, ತರಕಾರಿ ನಿಂಗರಾಜು, ಕುರುಬೂರು ಪ್ರದೀಪ, ಯಾಕನೂರು ರಾಜೇಶ್, ಆದಿ, ಬೆಟ್ಟಳ್ಳಿ ನಂಜುಂಡ ಸ್ವಾಮಿ, ಮನೋಜ್, ನಾಗರಾಜು, ಕರೋಹಟ್ಟಿ ಮಹಾದೇವಯ್ಯ, ಡಾ.ಮಾದೇಶ್. ಜೆಡಿಎಸ್ ಕ್ಷೇತ್ರಾಧ್ಯಕ್ಷ ಸಿಬಿ ಹುಂಡಿ ಚಿನ್ನಸ್ವಾಮಿ, ಸೋಸಲೆ ರಾಜೇಶ ರಾಜಣ್ಣ, ಶಿವಕುಮಾರ್, ಕರೋಹಟ್ಟಿ ಉಮೇಶ್ ಇದ್ದರು.

## ಸುಪ್ರೀಂಕೋರ್ಟ್‌ನಲ್ಲಿ ಚಾಲೆಂಜ್ ಮಾಡಿ ರೈತರ ಹಿತ ಕಾಪಾಡುತ್ತೇನೆ

ತಿ.ನರಸೀಪುರ, ಸೆ.26–ತಮಿಳುನಾಡಿಗೆ ನೀರು ಬಿಡುವಂತೆ ಸಿಡಬ್ಲ್ಯುಆರ್‌ಸಿ ನೀಡಿರುವ ಆದೇಶದ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಚಾಲೆಂಜ್ ಮಾಡಿ ರೈತರ ಹಿತ ಕಾಪಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಸಿದ್ದರಾಮಯ್ಯನವರು ಚಾಮರಾಜನಗರಕ್ಕೆ ಮೂಗೂರು ಮಾರ್ಗವಾಗಿ ತೆರಳುತ್ತಿದ್ದ ವೇಳೆ ತಿ.ನರಸೀಪುರ ಬಂದ್‌ನಲ್ಲಿ ನಿರತರಾಗಿದ್ದ ಕಬಿನಿ ಕಾವೇರಿ ಹಿತರಕ್ಷಣಾ ಸಮಿತಿ ಪದಾಧಿಕಾರಿಗಳು ಭೇಟಿ ಮಾಡಿ, ಕಾವೇರಿ ಉಳಿಸುವಂತೆ ಮಾಡಿದ ಮನವಿಗೆ ಅವರು ಉತ್ತರಿಸುತ್ತಿದ್ದರು.

ಸಿಡಬ್ಲ್ಯೂಆರ್‌ಸಿ ರಾಜ್ಯದ ಜನರಿಗೆ ವಿಷ ಉಣಿಸುತ್ತಿದೆ. ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡುವ ಮೂಲಕ ರೈತರಿಗೆ ಅನ್ಯಾಯ ಮಾಡುತ್ತಿದೆ ಎಂದು ಪ್ರತಿಭಟನಾಕಾರರು ಆಪಾದಿಸಿದಾಗ, ಸುಪ್ರೀಂಕೋರ್ಟ್ ತೀರ್ಪು ಪಾಲಿಸ ಬೇಕಲ್ಲಪ್ಪಾ ಎಂದರಲ್ಲದೆ, ಮುಂದಿನ ದಿನಗಳಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಚಾಲೆಂಜ್ ಮಾಡಿ ರೈತರ ಹಿತ ಕಾಪಾಡಲಾಗುವುದು ಎಂದರು. ರೈತ ಮುಖಂಡರಾದ ಶಂಕರ್, ಎಡದೊರೆ ಮಹದೇವಯ್ಯ, ತಾಲೂಕು ಅಧ್ಯಕ್ಷ ಸಿದ್ದೇಶ್, ಕೆರಗೋಡು ಪ್ರಸಾದ್, ಪುಟ್ಟಮಲ್ಲಯ್ಯ, ಪರಶಿವಮೂರ್ತಿ, ಅಪ್ಪಣ್ಣ, ವಾಚ್ ಕುಮಾರ್, ಕೆಇಬಿ ಯೋಗೇಶ್, ಸುರೇಶ್, ಬೆಟ್ಟಳ್ಳಿ ಕುಮಾರ್ ಅವರುಗಳು ಈ ವೇಳೆ ಉಪಸ್ಥಿತರಿದ್ದರು.

### ಆದಾಯ ಕ್ರೋಢೀಕರಣಕ್ಕಾಗಿ ಸಹಕಾರ ಸಂಘದಿಂದ

## ಪೆಟ್ರೋಲ್ ಬಂಕ್, ಮೆಡಿಕಲ್ ಸ್ಟೋರ್, ಎಲ್‌ಪಿಜಿ ಘಟಕ ಆರಂಭ




ತಿ.ನರಸೀಪುರ.ಸೆ.26 –ಸಹಕಾರ ಸಂಘದ ಆದಾಯ ಕ್ರೋಡೀಕರಣಕ್ಕಾಗಿ ಪೆಟ್ರೋಲ್ ಬಂಕ್,ಮೆಡಿಕಲ್ ಸ್ಟೋರ್ ಹಾಗೂ ಎಲ್‌ಪಿಜಿ ಘಟಕ ನಿರ್ಮಿಸಲು ಯೋಜನೆ ರೂಪಿಸಲಾಗುತ್ತಿದೆ ಎಂದು ಸೋಸಲೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಪರಶಿವಮೂರ್ತಿ ಹೇಳಿದರು.

ತಾಲೂಕಿನ ಸೋಸಲೆ ಗ್ರಾಮದ ಸಹಕಾರ ಸಂಘದ ಆವರಣದಲ್ಲಿ ಏರ್ಪಡಿಸಲಾಗಿದ್ದ 2022–23 ನೇ ಸಾಲಿನ ಸರ್ವ ಸದಸ್ಯರ ಸಂಘದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಘವು ಸರ್ವ ಸದಸ್ಯರ ಸಹಕಾರದಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಉತ್ತಮ ಲಾಭಾಂಶ ಗಳಿಸಿ ಯಶಸ್ವಿಯಾಗಿ ನಡೆದುಕೊಂಡು ಹೋಗುತ್ತಿದ್ದು,ಸಂಘವು ಮತ್ತಷ್ಟು ಆರ್ಥಿಕ ಪ್ರಗತಿ ಸಾಧಿಸಲು ಸರ್ಕಾರವು ಸಹಕಾರ ಸಂಘಗಳ ವ್ಯಾಪ್ತಿಗೆ ಪೆಟ್ರೋಲ್ ಬಂಕ್, ಎಲ್‌ಪಿಜಿ ಘಟಕ ಹಾಗೂ ಮೆಡಿಕಲ್ ಸ್ಟೋರ್‌ಗಳನ್ನು ತೆರೆಯಲು ಅನುದಾನ ನೀಡಲಿದ್ದು, ಸರ್ಕಾರದ ಅನುದಾನ ವನ್ನು ಸದ್ಬಳಕೆ ಮಾಡಿಕೊಂಡು ಮುಂದಿನ ವರ್ಷದೊಳಗಾಗಿ ಸಹಕಾರ ಸಂಘಕ್ಕೆ ಆದಾಯ ತಂದು ಕೊಡುವ ಯೋಜನೆಗಳನ್ನು ಜಾರಿಗೊಳಿಸಲು ಚಿಂತನೆ ನಡೆಸಲಾಗಿದೆ ಎಂದರು.

ಸಂಘದ ಉಪಾಧ್ಯಕ್ಷ ಎಂ.ಸೋಮಣ್ಣ, ನಿರ್ದೇಶಕರಾದ ಬಿ.ಎನ್.ಪ್ರಭುಸ್ವಾಮಿ, ಎಸ್.ಎನ್.ಧರ್ಮ ರತ್ನಾಕರ ಕುಮಾರ್, ಬಿ.ಎಸ್.ಬಸಪ್ಪ, ಸೈಯದ್ ಮುಸ್ತಾಕ್, ಎಸ್.ಕುಮಾರ್, ಎಂ.ನಾಗರಾಜು, ಹೊನ್ನ ನಾಯಕ, ಜಯಮ್ಮ, ನೀಲಮ್ಮ, ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಎಸ್. ಜಗದೀಶ್, ಸಹಾಯಕ ಎಸ್.ಸಿದ್ದಮಲ್ಲಯ್ಯ, ಶಿವಕುಮಾರ್, ಆಶಾ ಹಾಜರಿದ್ದರು.

## ಹೋರಾಟಗಾರ ಕೆ.ಆರ್.ಲಕ್ಕೇಗೌಡರು ವಿಧಿವಶ



ಕೆ.ಆರ್.ನಗರ,ಸೆ.26– ಸಮಾಜ ಸೇವಕರು, ಜನಪರ ಹೋರಾಟ ಗಾರರೂ ಆದ ಪಟ್ಟಣದ 3ನೇ ವಾರ್ಡಿನ ಬನ್ನಿಮಂಟಪ ಬಡಾವಣೆ ನಿವಾಸಿ, ನಿವೃತ್ತ ಕನ್ನಡ ಉಪನ್ಯಾಸಕ ಕೆ.ಆರ್.ಲಕ್ಕೇಗೌಡ (90) ಮಂಗಳವಾರ ನಿಧನರಾದರು.

ಮೃತರು ಪತ್ನಿ ಜಯಲಕ್ಷ್ಮಮ್ಮ, ಪುತ್ರರಾದ ಸಮಾಜ ಸೇವಕ ಕೆ.ಎಲ್. ಹೇಮಂತಕುಮಾರ್, ಅತಿಥಿ ಉಪನ್ಯಾಸಕ ಕೆ.ಎಲ್.ರಮೇಶ್, ಪುರಸಭಾ ಸದಸ್ಯ ಕೆ.ಎಲ್.ಜಗದೀಶ್, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಸೆ.27ರ ಬುಧವಾರ ಬೆಳಗ್ಗೆ 12 ಗಂಟೆಯವರೆಗೆ ಪಟ್ಟಣದ ಮೃತರ ನಿವಾಸದ ಆವರಣದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ನಂತರ ಪಟ್ಟಣದ ಹೊರವಲಯದಲ್ಲಿರುವ ಕಂಠೇನಹಳ್ಳಿಯ ಸಾರ್ವಜನಿಕ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಆರ್.ಲಕ್ಕೇಗೌಡರ ಇಡೀ ಕುಟುಂಬವೇ ಸಮಾಜ ಸೇವೆಯಲ್ಲಿ ನಿರತವಾಗುವ ಮೂಲಕ ಮಾದರಿಯಾಗಿದೆ. ಜನಪರ ಹೋರಾಟ, ಪರೋಪಕಾರ ಎಂಬುದು ಲಕ್ಕೇಗೌಡರಿಗೆ ರಕ್ತಗತವಾಗಿ ಬಂದಂತಿತ್ತು. ಜನಪರ ಹೋರಾಟ, ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದ ಇವರು, ವೃದ್ಧರು, ವಿಕಲಚೇತನರು, ಅಶಕ್ತರು, ರೋಗಿಗಳಿಗೆ ಸಹಾಯಹಸ್ತ ಚಾಚುವ ಸದ್ಗುಣ ಹೊಂದಿದ್ದರು.

ಸರ್ಕಾರಿ ಭೂಮಿ ಒತ್ತುವರಿ ವಿರುದ್ಧ ಹಾಗೂ ಜನಪರ ಹೋರಾಟದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದ ಇವರು, ತಮ್ಮ ಅನೇಕ ಹೋರಾಟದಲ್ಲಿ ಯಶಸ್ಸು ಸಾಧಿಸಿದ್ದರು. ಮೂಲತಃ ಸಾಲಿಗ್ರಾಮ ತಾಲೂಕಿನ ಕಾಟ್ನಾಳು ಗ್ರಾಮದ ಲಕ್ಕೇಗೌಡರು ತಮ್ಮ ವಿದ್ಯಾಭ್ಯಾಸ ಪೂರ್ಣಗೊಳಿಸಿ, ನೌಕರಿ ಪಡೆದು, ಉಪನ್ಯಾಸಕರಾಗಿ ಕೆ.ಆರ್. ನಗರ ಪಟ್ಟಣದಲ್ಲಿ ನೆಲೆ ನಿಂತರು. ನಿವೃತ್ತಿ ನಂತರ ಪುರಸಭಾ ಸದಸ್ಯರಾಗಿ ಸೇವೆ ಸಲ್ಲಿಸಿ, ಬಳಿಕ ಭ್ರಷ್ಟಾಚಾರ ವಿರೋಧಿ ಸಂಘ ಸ್ಥಾಪಿಸಿ, ಅದರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಇವರ ಕುರಿತು ಡಾ.ದೀಪು ರಚಿಸಿದ 'ಕೆ.ಆರ್.ಲಕ್ಕೇಗೌಡರ ಜೀವನ ಕಥನ ವನಸುಮ' ಕೃತಿಯನ್ನು 2023ರ ಏ.11ರಂದು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳೂ ಆದ ನಿವೃತ್ತ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ ಲೋಕಾರ್ಪಣೆ ಮಾಡಿದ್ದರು. ಉತ್ಸಾಹದಿಂದ ಜೀವನ ನಡೆಸುತ್ತಿದ್ದ ಲಕ್ಕೇಗೌಡರು ಕಳೆದ 15 ದಿನಗಳಿಂದ ಕಾಲು ನೋವಿನಿಂದ ಬಳಲಿ ಚಿಕಿತ್ಸೆ ಪಡೆದಿದ್ದರು. ಅವರು ಇಂದು ಕೊನೆಯುಸಿರೆಳೆದಿದ್ದು, ಅವರ ಕುಟುಂಬ, ಅಪಾರ ಶಿಷ್ಯವೃಂದ, ಅಭಿಮಾನಿಗಳು, ಸ್ನೇಹಿತರು ದುಃಖತಪ್ತರಾಗಿದ್ದಾರೆ.

# ನಂಜನಗೂಡು ಬಸವ ಭವನ ಕಾಮಗಾರಿಗೆ 4 ಕೋಟಿ ರೂ.

### ವೀರಶೈವ ಮಹಾಸಭಾಕ್ಕೆ ಉಸ್ತುವಾರಿ ಸಚಿವರ ಭರವಸೆ



ನಂಜನಗೂಡು, ಸೆ.26– ನಂಜನಗೂಡಿನ ಬಸವಭವನ ಕಾಮಗಾರಿಯನ್ನು ಪೂರ್ಣಗೊಳಿಸಲು 4 ಕೋಟಿ ರೂ. ಅನುದಾನ ನೀಡಿ ಕಾಮಗಾರಿಯನ್ನು ಮುಕ್ತಾಯ ಗೊಳಿಸುವುದು ನನ್ನ ಜವಾಬ್ದಾರಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಭರವಸೆ ನೀಡಿದರು.

ಮೈಸೂರಿನ ನಿವಾಸದಲ್ಲಿ ತಾಲೂಕು ಅಖಿಲ ಭಾರತ ವೀರಶೈವ ಮಹಾಸಭಾದ ವತಿಯಿಂದ ಬಸವ ಭವನ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಲು ಅನುದಾನ ನೀಡುವಂತೆ ಒತ್ತಾಯಿಸಿ ಸಲ್ಲಿಸಿದ ಮನವಿ ಪತ್ರವನ್ನು ಸ್ವೀಕರಿಸಿ ಮಾತನಾಡಿದರು.

ನಾನು ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದ ವೇಳೆಯಲ್ಲಿ ತಾಲೂಕಿನಲ್ಲಿ ವೀರಶೈವ ಜನಾಂಗ ಹೆಚ್ಚಾಗಿರುವ ಕಾರಣ ಬಸವ ಕಲ್ಯಾಣದ ಮಾದರಿಯಲ್ಲಿ ಸುಸಜ್ಜಿತವಾದ ಬಸವ ಭವನವನ್ನು ನಿರ್ಮಿಸಬೇಕೆಂಬ ಸಂಕಲ್ಪದೊಂದಿಗೆ ಸಿಎ ನಿವೇಶನವನ್ನು ಹುಡುಕಿ ನಿವೇಶನ ಮಂಜೂರು ಮಾಡಿ ಅನುದಾನವನ್ನೂ ನೀಡಿದ್ದೆ. ಬಸವ ಭವನದ ಪೂರ್ಣ ಜವಾಬ್ದಾರಿ ನನ್ನ ಕೆಲಸವಾಗಿರುವುದರಿಂದ ಯಾರೂ ಸಹ ನನಗೆ ಮನವಿ ಪತ್ರ ಸಲ್ಲಿಸಬೇಕಿಲ್ಲ. ಕಾಮಗಾರಿಗೆ ಅವಶ್ಯವಿರುವ ಅನುದಾನವನ್ನು ಬಿಡುಗಡೆಗೊಳಿಸಿ ಕಾಮಗಾರಿಯನ್ನು ಪೂರ್ಣಗೊಳಿಸುವುದು ನನ್ನ ಜವಾಬ್ದಾರಿ ಎಂದು ಭರವಸೆ ನೀಡಿದರು.

ತಾಲೂಕು ವೀರಶೈವ ಮಹಾಸಭಾದ ಅಧ್ಯಕ್ಷ ಬುಲೆಟ್ ಮಹದೇವಪ್ಪ ಮಾತನಾಡಿ, ಬಸವ ಭವನ ಕಾಮಗಾರಿ 8.5 ಕೋಟಿ ವೆಚ್ಚದಲ್ಲಿ ನಿರ್ಮಾಣ ವಾಗುತ್ತಿದ್ದು, ಹೆಚ್.ಸಿ.ಮಹದೇವಪ್ಪರವರು ನಿವೇಶನ ಮಂಜೂರು ಮಾಡಿ 2 ಕೋಟಿ ಅನುದಾನವನ್ನೂ ನೀಡಿದ್ದಾರೆ. ಮುಂದುವರೆದ ಕಾಮಗಾರಿಗಾಗಿ ಹಿಂದಿನ ಶಾಸಕರಾದ ಬಿ.ಹರ್ಷವರ್ಧನ್ 2.5 ಕೋಟಿ ಅನುದಾನ ನೀಡಿದ್ದಾರೆ. ಕಾಮಗಾರಿ ಪೂರ್ಣಗೊಳ್ಳಲು ಇನ್ನೂ 4 ಕೋಟಿ ಅನುದಾನದ ಅವಶ್ಯಕತೆಯಿದ್ದು ಅದನ್ನೂ ಈ ಸರ್ಕಾರದಲ್ಲಿ ಬಿಡುಗಡೆಗೊಳಿಸಿ ಬಸವಭವನದ ಲೋಕಾರ್ಪಣೆಗೊಳಿಸುವ ಮೂಲಕ ಸಮುದಾಯಕ್ಕೆ ಕೊಡುಗೆ ನೀಡಬೇಕು ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಖಜಾಂಚಿ ಮಾಧು, ನಿರ್ದೇಶಕರಾದ ಪ್ರಕಾಶ್, ಶಿವಬಸಪ್ಪ ಅಣ್ಣಿ ಬಸವಣ್ಣ, ಮಂಜುಳಾ ಮಧು, ಮಂಜುಳ ರಾಜೇಶ, ನಂಜಮಣ್ಣಿ ಗುರುಮಲ್ಲಪ್ಪ, ಚಿಕ್ಕ ಮಾದಪ್ಪ ಗೌಡಿಕೆ ಗುರುಸಿದ್ದಪ್ಪ, ತರಗನಹಳ್ಳಿ ನಂಜುಂಡಸ್ವಾಮಿ, ಮಣಿ, ಶಿವಮೂರ್ತಿ, ಗುರುಸಿದ್ದಪ್ಪ, ಸಿಂಧುವಳ್ಳಿ ಮಲ್ಲೇಶ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

## ಮೈಮುಲ್ ಅಧ್ಯಕ್ಷರಿಗೆ ಸನ್ಮಾನ



ಪಿರಿಯಾಪಟ್ಟಣ, ಸೆ.26– ತಾಲೂಕಿನ ಮುತ್ತಿನ ಮುಳ್ಳುಸೋಗೆ ಗ್ರಾಮದಲ್ಲಿ ಹಾಲು ಉತ್ಪಾದಕರ ಸಂಘಕ್ಕೆ ಬಿಎಂಸಿ ಕೇಂದ್ರವನ್ನು ಮಂಜೂರು ಮಾಡಿದ ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಚಂದ್ರಶೇಖರ್, ಮೈಮುಲ್ ನಿರ್ದೇಶಕ ರಾಜೇಂದ್ರಪ್ಪ, ಡಾ.ಸತೀಶ್, ವಿಸ್ತರಣಾಧಿಕಾರಿ ಆಕಾಶ್, ನಿರ್ದೇಶಕರು, ನೌಕರರು ಹಾಗೂ ಉತ್ಪಾದಕರು ಗ್ರಾಮಸ್ಥರು ಹಾಜರಿದ್ದರು.

# ಕೂಸಿನ ಮನೆ ಕೇರ್‌ಟೇಕರ್‌ಗಳಿಗೆ 3 ದಿನಗಳ ತರಬೇತಿ

### ಕೂಸಿನ ಮನೆಯಿಂದ ಕೂಲಿಕಾರ್ಮಿಕರಿಗೆ ಅನುಕೂಲ



ಹೆಚ್.ಡಿ.ಕೋಟೆ, ಸೆ.26– ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ಕೂಸಿನ ಮನೆ (ಶಿಶು ಪಾಲನ ಕೇಂದ್ರ) ತೆರೆಯುತ್ತಿರುವುದು ಕೂಲಿ ಕಾರ್ಮಿಕರ ಮಕ್ಕಳ ಲಾಲನೆಪಾಲನೆಗೆ ನೆರವಾಗಲಿದೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಪಿ.ಧರಣೇಶ್ ತಿಳಿಸಿದರು.

ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಲಾಗಿರುವ ಕೂಸಿನ ಮನೆ ಕೇರ್ ಟೇಕರ್‌ಗಳ ಮೂರು ದಿನಗಳ ತರಬೇತಿಯ ಎರಡನೇ ದಿನವಾದ ಮಂಗಳವಾರ ಮೊದಲ ಅಧಿವೇಶನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಎಷ್ಟೋ ಮಂದಿಗೆ ಕೆಲಸ ಅವಶ್ಯಕತೆ ಇದ್ದರು ಮಕ್ಕಳನ್ನು ನೋಡಿಕೊಳ್ಳಲು ಯಾರೂ ಇಲ್ಲ ಎಂದು ಮಕ್ಕಳಿಗಾಗಿ ದುಡಿಯಲು ಹೋಗುವುದಿಲ್ಲ. ಆದರೆ ಶಿಶುಪಾಲನ ಕೇಂದ್ರ ಸ್ಥಾಪನೆಯಿಂದ ಅಂತಹ ಪೋಷಕರಿಗೆ ಅನುಕೂಲವಾಗಿದೆ ಎಂದು ತಿಳಿಸಿದರು.

ತಾಲೂಕಿನಲ್ಲಿ ಮೊದಲ ಹಂತದಲ್ಲಿ 11 ಗ್ರಾಮ ಪಂಚಾಯಿತಿಗಳಲ್ಲಿ ಕೂಸಿನ ಮನೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. 6 ತಿಂಗಳಿಂದ 3 ವರ್ಷದ ಮಕ್ಕಳು ದಾಖಲಾಗಬಹುದು. ಆದ್ದರಿಂದ ಕೇರ್ ಟೇಕರ್ಸ್ ಕೆಲಸ ಜವಾಬ್ದಾರಿಯುತವಾದದ್ದು, ಇದನ್ನು ಅರಿತು ಕೂಲಿ ಕಾರ್ಮಿಕರ ಮಕ್ಕಳನ್ನು ತಮ್ಮ ಮಕ್ಕಳ ರೀತಿಯಲ್ಲಿ ನೋಡಿಕೊಂಡು ಆರೈಕೆ ಮಾಡುವಂತೆ ಕೇರ್ ಟೇಕರ್ಸ್‌ಗಳಿಗೆ ಸಲಹೆ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಿರಿಯ ಮೇಲ್ವಿಚಾರಕರಾದ ರೇಖಾ, ಹುಣಸೂರು ತಾಲೂಕು ಐಇಸಿ ಸಂಯೋಜಕರಾದ ಪುಷ್ಪವತಿ ಅವರು ಕೇರ್‌ಟೇಕರ್ಸ್‌ಗಳಿಗೆ ಮಕ್ಕಳ ಪಾಲನೆ, ಪೋಷಣೆ ಹಾಗೂ ಆಟೋಟಗಳ ಬಗ್ಗೆ ಮಾಹಿತಿ ನೀಡಿ, ನಂತರ ಕೇರ್ ಟೇಕರ್ಸ್‌ಗಳಿಂದಲೇ ಕೆಲವು ಆಟಗಳು ಹಾಗೂ ಹಾಡುಗಳನ್ನು ಆಡಿಸಿದರು.

ಈ ವೇಳೆ ಗ್ರಾಮೀಣ ಉದ್ಯೋಗ ಖಾತ್ರಿ ಸಹಾಯಕ ನಿರ್ದೇಶಕರಾದ ಕೆ.ಎಂ.ರಘುನಾಥ್, ತಾಲೂಕು ತಾಂತ್ರಿಕ ಸಂಯೋಜಕ ಶರತ್, ಟಿಎಂಐಎಸ್ ರವಿ, ತಾಲೂಕು ಐಇಸಿ ಸಂಯೋಜಕ ನಿಂಗರಾಜು, ಗ್ರಾಮ ಕಾಯಕ ಮಿತ್ರರು ಹಾಗೂ ತಾಲೂಕು ಪಂಚಾಯಿತಿ ಸಿಬ್ಬಂದಿ ಉಪಸ್ಥಿತರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ



**ಪದ್ಮ ಚಿತ್ರಮಂದಿರ** (ದೂ: 2521923)
ಹನಿಮೂನ್ ಬ್ಯಾಂಕಾಕ್ (ಕ) 2 ಪ್ರದರ್ಶನಗಳು — ದಂದ್ವ (ಕ) 2 ಪ್ರದರ್ಶನಗಳು

**ವುಡ್‌ಲ್ಯಾಂಡ್ಸ್ ಚಿತ್ರಮಂದಿರ** (ದೂ: 2422871)
ತತ್ಸಮ ತದ್ಭವ(ಕ) 2 ಪ್ರದರ್ಶನಗಳು — ಎಕ್ಸ್‌ಪೆಂಡಬ್(ಇ) 2 ಪ್ರದರ್ಶನಗಳು

**ಬಾಲಾಜಿ ಚಿತ್ರಮಂದಿರ** (ದೂ: 2497199)
ಜವಾನ್ (ಹಿ) 4 ಪ್ರದರ್ಶನಗಳು

**ಮಹದೇಶ್ವರ ಚಿತ್ರಮಂದಿರ** (ಮೊ:9900820093)
ಟೋಬಿ (ಕ) 4 ಪ್ರದರ್ಶನಗಳು

**ಗಾಯಿತ್ರಿ**
ಸಪ್ತಸಾಗರದಾಚೆ ಎಲ್ಲೋ (ಕ) 4 ಪ್ರದರ್ಶನಗಳು

**ರಾಜ್‌ಕಮಲ್**
ಮಾರ್ಕ್ ಆಂಟೋನಿ (ತ) 4 ಪ್ರದರ್ಶನಗಳು

**ಸಂಗಂ**
ಜವಾನ್ (ಹಿ) 4 ಪ್ರದರ್ಶನಗಳು

**ಲಿಡೋ**
ಒಲವೇ ಮಂದಾರ–2 (ಕ) 4 ಪ್ರದರ್ಶನಗಳು

**ತಿಬ್ಬಾದೇವಿ**
ಜೈಲರ್ (ತ) 4 ಪ್ರದರ್ಶನಗಳು

**ಪ್ರಭಾ**
13 ಪಾರ್ಟ್–1(ಕ) 2 ಪ್ರದರ್ಶನಗಳು — ಪರಿಶುದ್ಧಂ(ಕ) 2 ಪ್ರದರ್ಶನಗಳು

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ. |
| ಸ್ಕ್ರೀನ್ 2 | ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ. |
| ಸ್ಕ್ರೀನ್ 3 | ಎಕ್ಸ್‌ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ. |
| ಸ್ಕ್ರೀನ್ 4 | ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ. |
| ಸ್ಕ್ರೀನ್ 2 | ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ. |
| ಸ್ಕ್ರೀನ್ 3 | ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್‌ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ. |
| ಸ್ಕ್ರೀನ್ 4 | ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ. |
| ಸ್ಕ್ರೀನ್ 2 | ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ. |
| ಸ್ಕ್ರೀನ್ 3 | ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ. |
| ಸ್ಕ್ರೀನ್ 4 | ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ. |

### ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

**ಜೈಲರ್** (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್** (ಕ): ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2** (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2** (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ** (ಕ): ರಾ.9.45ಕ್ಕೆ, **ಆಚಾರ್ & ಕೋ** (ಕ): ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ** (ಕ): ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ** (ಕ): ಬೆ.11.55ಕ್ಕೆ, **ರಾಖಿ ಔರ್ ರಾಣಿ** (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್** (ಇಂ): ಸಂ.6.35ಕ್ಕೆ, **ಭೋಳಾ ಶಂಕರ್** (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2** (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಮೈಸೂರು ರೇಸುಗಳು

7ನೇ ದಿನ, ಬುಧವಾರ 27-9-2023

**ಇಂದಿನ ರೇಸಿಗೆ ನಮ್ಮ ಆಯ್ಕೆ**

(ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ)

I. ಪೆನಂಬೂರ್ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಗೇಮ್ ಬಾಯ್ 2. ಮೆಗಾ ಸಕ್ಸಸ್ 3. ದಿ ಇನ್‌ಟ್ರೂಡರ್

II. ಶಿಂಷಾ ಪ್ಲೇಟ್ –1100 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬ್ರೆಡ್ ಹಾರ್ಸ್). ಮ.3.00ಕ್ಕೆ
1 ಐಕ್ಯಾನ್ 2. ಇನ್ ಎಫ್‌ಬಲ್ 3. ಒಕರೆ

III. ರಂಗ ಫ್ಯಾಮಿಲಿ ಕಪ್–1200 ಮೀ. ರೇಟೆಡ್ 40 ರಿಂದ 65. (ಮೈಸೂರ್ ಬ್ರೆಡ್ ಹಾರ್ಸ್). ಮ.3.30ಕ್ಕೆ
1 ತೆನಾಲಿ 2. ಸ್ಪಿರಿಚಿಯಲ್ ಫೋರ್ಸ್ 3. ಎಡ್ಡಿ ದಿ ಈಗಲ್

IV. ಸಿವಿಲ್ ಸರ್ವೀಸ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಅಂಬ್ರೆಲಿ 2. ಕೆನ್‌ಸಿಂಗ್‌ಸ್ಟನ್ ಕೋರ್ಟ್ 3. ಎಟರ್‌ನಲ್ ಪ್ರಿನ್ಸಸ್

V. ಇಂದ್ರ ಧನುಷ್ ಪ್ಲೇಟ್ ಡಿ2–1400 ಮೀ. ರೇಟೆಡ್ 20 ರಿಂದ 45. (ನೋ ವಿಪ್) ಸಂ.4.30ಕ್ಕೆ
1. ಮಲ್ಟಿ ಸ್ಪೈಡೆಡ್ 2. ಪೋಲಾರ್ ಕ್ವೀನ್ 3. ಏಂಜಲೀಸ್

VI. ಇಂದ್ರ ಧನುಷ್ ಪ್ಲೇಟ್ ಡಿ1–1400 ಮೀ. ರೇಟೆಡ್ 20 ರಿಂದ 45.(ನೋ ವಿಪ್) ಸಂ.5.00ಕ್ಕೆ
1 ಸೆವೆಂತ್ ಸಮುರಾಯ್ 2 ಹೆವ್ ಬ್ರಾಂಟ್ 3. ಮ್ಯಾಜಿಕ್ ಸರ್ಕಲ್

| | |
|---|---|
| ದಿನದ ಅತ್ಯುತ್ತಮ | ಮಲ್ಟಿ ಸ್ಪೈಡೆಡ್ |
| ಡಬ್ಬಲ್ | ತೆನಾಲಿ, ಅಂಬ್ರೆಲಿ |
| ಜಾಕ್‌ಪಾಟ್ | 2, 3, 4, 5 ಮತ್ತು 6 |
| ಮಿನಿ ಜಾಕ್‌ಪಾಟ್ | 3, 4, 5 ಮತ್ತು 6 |
| I ಟ್ರಿಬಲ್ | 1, 2, ಮತ್ತು 3 |
| II ಟ್ರಿಬಲ್ | 4, 5, ಮತ್ತು 6 |
| ಎಕ್ಸ್‌ಆಕ್ಟ್ | 1 ರಿಂದ 6 |

ಟಿಪ್‌ಸ್ಟರ್ ಪಿಜಿಸಿ


## ಮಲ್ಲಮ್ಮ ನಿಧನ



ಹುಣಸೂರು, ಸೆ.26– ತಾಲೂಕು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ನೇರಳಕುಪ್ಪೆ ಮಹದೇವ ಅವರ ತಾಯಿ ಹಾಗೂ ಲೇಟ್ ಕೆಂಪೇಗೌಡರ ಧರ್ಮಪತ್ನಿ ಮಲ್ಲಮ್ಮ (80)ರವರು ಇಂದು ಸಂಜೆ ನಿಧನರಾದರು. ಮೃತರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 12ಕ್ಕೆ ನೇರಳಕುಪ್ಪೆ ಗ್ರಾಮದ ಜಮೀನಿನಲ್ಲಿ ನಡೆಯಲಿದೆ.

# ಕಾವೇರಿ ವಿವಾದಕ್ಕೆ ಮೇಕೆದಾಟು ಯೋಜನೆಯೊಂದೇ ಪರಿಹಾರ

● ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ ● ಇದರಿಂದ ತಮಿಳುನಾಡಿಗೂ ಅನುಕೂಲವಾಗುತ್ತೆ



ಮೈಸೂರು,ಸೆ.26(ಎಂಟಿವೈ)– ಕಾವೇರಿ ನೀರು ಹಂಚಿಕೆ ಸಮಸ್ಯೆಗೆ ಮೇಕೆದಾಟು ಜಲಾಶಯ ಯೋಜನೆ ಅನುಷ್ಠಾನದಿಂದ ಪರಿಹಾರ ದೊರಕಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಿಸಿದರು.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಮೇಕೆದಾಟು ಜಲಾಶಯವಾಗಿದ್ದರೆ ಕರ್ನಾಟಕ ಮಾತ್ರವಲ್ಲದೆ ತಮಿಳುನಾಡಿಗೂ ಸಹಕಾರಿಯಾಗುತ್ತಿತ್ತು. ಈ ಯೋಜನೆ ಅನುಷ್ಠಾನಗೊಳಿಸುವುದರಿಂದ ನೀರು ಹಂಚಿಕೆ ಸಮಸ್ಯೆ ಶಾಶ್ವತವಾಗಿ ಬಗೆಹರಿಯಲಿದೆ. ಸಮರ್ಪಕ ಮಳೆಯಾದಾಗ ಮೇಕೆದಾಟು ಜಲಾಶಯದಲ್ಲಿ 67 ಟಿಎಂಸಿ ನೀರು ಸಂಗ್ರಹಿಸಬಹುದು. ಅದರಿಂದ ತಮಿಳುನಾಡಿಗೆ ನೀರು ಬಿಡಲು ಸಹಕಾರಿಯಾಗುತ್ತಿತ್ತು ಎಂದು ತಿಳಿಸಿದರು.

ರಾಜ್ಯ ಸರ್ಕಾರ ಸಮರ್ಥವಾಗಿ ವಾದ ಮಂಡಿಸಿ ವಾಸ್ತವ ಸ್ಥಿತಿಯನ್ನು ತಿಳಿಸಿದ್ದರೂ ತಮಿಳುನಾಡಿಗೆ ನೀರು ಬಿಡುವಂತೆ ಕಾವೇರಿ ನೀರು ನಿಯಂತ್ರಣಾ ಸಮಿತಿ ಆದೇಶ ನೀಡಿದೆ. ಮಳೆ ಕೈಕೊಟ್ಟ ಸಂದರ್ಭದಲ್ಲಿ ಎರಡೂ ರಾಜ್ಯಗಳಲ್ಲಿ ಸಂಕಷ್ಟ ಆರಂಭವಾಗುತ್ತದೆ. ಇಂತಹ ಸಂದರ್ಭದಲ್ಲಿ ನಾವು ಸಂಕಷ್ಟ ಪರಿಹರಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸಮಸ್ಯೆ ಬಗೆಹರಿಸಲು ಸಂಕಷ್ಟ ಪರಿಹಾರ ಸೂತ್ರ ರೂಪಿಸಲು ಕಾವೇರಿ ನೀರು ನಿಯಂತ್ರಣ ಮಂಡಳಿ ಹಾಗೂ ಸರ್ವೋಚ್ಚ ನ್ಯಾಯಾಲಯಕ್ಕೆ ನಾವು ಒತ್ತಡ ಹೇರುತ್ತಿದ್ದೇವೆ ಎಂದರು.

**ಬರ ಪರಿಹಾರಕ್ಕಾಗಿ ಕೇಂದ್ರಕ್ಕೆ ಮನವಿ:** ರಾಜ್ಯದಲ್ಲಿ ಬರದ ಪರಿಸ್ಥಿತಿ ತೀವ್ರಗೊಂಡಿದೆ. ಬರಪೀಡಿತ ಪ್ರದೇಶದಲ್ಲಿ ಪರಿಹಾರ ಕಾರ್ಯ ಕೈಗೊಳ್ಳಲು ಕೇಂದ್ರದಿಂದ ಬರ ಪರಿಹಾರದ ನಿರೀಕ್ಷೆಯಲ್ಲಿದ್ದೇವೆ. ಈ ಸಂಬಂಧ ಈಗಾಗಲೇ ಪತ್ರ ಬರೆಯಲಾಗಿದ್ದು, ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ. ಈ ಹಿನ್ನೆಲೆಯಲ್ಲಿ ಕೃಷಿ ಸಚಿವ ಕೃಷ್ಣಭೈರೇಗೌಡ ಅವರನ್ನು ಕೇಂದ್ರದ ಸಚಿವರನ್ನು ಭೇಟಿಯಾಗಲು ದೆಹಲಿಗೆ ಕಳುಹಿಸಲು ನಿರ್ಧರಿಸಲಾಗಿದೆ ಎಂದರು.

**ಬಿಜೆಪಿ ಸಂಸದರು ಧ್ವನಿ ಎತ್ತಬೇಕು:** ಕಾವೇರಿ ನೀರಿನ ವಿಚಾರದಲ್ಲಿ ಬಿಜೆಪಿ ನಾಯಕರು ರಾಜಕೀಯ ಮಾಡಲು ಮುಂದಾಗಿದ್ದಾರೆ. ಚಡ್ಡಿ ಚಳುವಳಿ ಮಾಡುವ ಮೂಲಕ ನಾವು ಚಡ್ಡಿಗಳೆಂದು ಬಿಜೆಪಿಗರು ತೋರಿಸಿದ್ದಾರೆ. ರಾಜಕೀಯಕ್ಕಾಗಿ ಕಾವೇರಿ ನೀರಿನ ವಿಷಯ ಮುಂದಿಟ್ಟುಕೊಳ್ಳದೆ ರಾಜ್ಯ ಹಿತಕಾಯುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಿ. ಇಲ್ಲಿನ 25 ಸಂಸದರು ರಾಜ್ಯದ ಪರ ಧ್ವನಿ ಎತ್ತಬೇಕು ಎಂದು ಸಿದ್ದರಾಮಯ್ಯ ಆಗ್ರಹಿಸಿದರು.

**ದೇವೇಗೌಡರ ಪತ್ರಕ್ಕೆ ಸ್ವಾಗತ:** ಕಾವೇರಿ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಮಧ್ಯ ಪ್ರವೇಶಿಸಲು ಕೋರಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇಗೌಡರು ಪತ್ರ ಬರೆದಿರುವುದು ಸ್ವಾಗತಾರ್ಹ. ಆದರೆ, ಈ ವಿಚಾರದಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿರುವುದು ರಾಜಕೀಯ ಪ್ರೇರಿತ. ರಾಜ್ಯದ ಮುಖ್ಯಮಂತ್ರಿಯಾಗಿ ನಾನು ಕೇಂದ್ರಕ್ಕೆ ಪತ್ರ ಬರೆದಿದ್ದು, ಇದುವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಹೆಚ್.ಡಿ.ದೇವೇಗೌಡರು ಬಿಜೆಪಿಯೊಂದಿಗಿನ ಹೊಸ ಸ್ನೇಹದಿಂದಲಾದರೂ ಪರಿಹಾರ ಸಿಗಬಹುದೇ ನೋಡೋಣ ಎಂದರು.

**ಪ್ರಧಾನಿ ಮಧ್ಯಸ್ಥಿಕೆ ಅಗತ್ಯ:** ಮಳೆ ಪ್ರಮಾಣ ಹೆಚ್ಚಾದಾಗ ಅಥವಾ ಸಾಮಾನ್ಯ ವರ್ಷಗಳಲ್ಲಿ ತಮಿಳುನಾಡಿಗೆ ನೀರು ಬಿಡಬೇಕಾದ ಪ್ರಮಾಣದ ಬಗ್ಗೆ ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಆದರೆ ಸಂಕಷ್ಟದ ಸಮಯದಲ್ಲಿ ನೀರು ಬಿಡುವ ಪ್ರಮಾಣ ತಿಳಿಸುವ ಸಂಕಷ್ಟ ಸೂತ್ರ ಇನ್ನೂ ನಿರ್ಧಾರವಾಗಿಲ್ಲ. ಇಂತಹ ಸಂದರ್ಭದಲ್ಲಿ ಒಂದು ಸೌಹಾರ್ದ ಇತ್ಯರ್ಥಕ್ಕೆ ಬರುವುದೇ ಉತ್ತಮ. ಆದ್ದರಿಂದ ಕಾವೇರಿ ವಿವಾದ ಇತ್ಯರ್ಥಕ್ಕೆ ಪ್ರಧಾನಮಂತ್ರಿಗಳು ಮಧ್ಯಸ್ಥಿಕೆ ವಹಿಸಬೇಕು ಎಂದರು.

**ನೀರಿನ ವಿಚಾರದಲ್ಲಿ ರಾಜಕೀಯ ಸಲ್ಲ:** ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಕಾವೇರಿ ವಿಷಯವನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿರುವುದು ಖಂಡನೀಯ. ರಾಜಕೀಯ ಲಾಭಕ್ಕಾಗಿ ಈ ಎರಡೂ ಪಕ್ಷಗಳು ಕಾವೇರಿ ನೀರಿನ ಬಗ್ಗೆ ಮಾತನಾಡುತ್ತಿದ್ದಾರೆ ಹೊರತು ಜನರ ಹಾಗೂ ನಾಡಿನ ಹಿತದೃಷ್ಟಿಯಿಂದ ಮಾಡುತ್ತಿಲ್ಲ. ನಮಗೆ ಅಧಿಕಾರ ಮುಖ್ಯವಲ್ಲ. ರಾಜ್ಯದ ಜನ ಹಾಗೂ ರೈತರ ಹಿತಕಾಯಲು ನಮ್ಮ ಸರ್ಕಾರ ಸದಾ ಬದ್ಧ ಎಂದು ಪ್ರತಿಪಾದಿಸಿದರು.

**ಹಕ್ಕು ಮೊಟಕುಗೊಳ್ಳಬಾರದು:** ಬಂದ್ ಮಾಡಲು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಅವಕಾಶವಿದೆ. ಆದರೆ ನ್ಯಾಯಾಲಯ ಯಾವುದೇ ಸಭೆ, ಮೆರವಣಿಗೆ ನಡೆಸಬಾರದು, ಪ್ರತಿಭಟನೆ ಮಾಡಬಾರದು ಎಂದು ಹೇಳಿದೆ. ನಾವು ನಮ್ಮ ಮೂಲ ಹಕ್ಕುಗಳನ್ನು ಚಲಾಯಿಸುವಾಗ ಇತರರ ಮೂಲ ಹಕ್ಕುಗಳನ್ನೂ ಗಮನದಲ್ಲಿರಿಸಿಕೊಳ್ಳಬೇಕು. ಯಾರೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು ಎಂಬ ಕಾರಣದಿಂದ ಬೆಂಗಳೂರಲ್ಲಿ 144 ಸೆಕ್ಷನ್ ಜಾರಿಗೊಳಿಸಲಾಗಿದೆ. ಜನರಿಗೆ ತೊಂದರೆ ಯಾಗಬಾರದೆಂಬ ಕಾರಣದಿಂದ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದರು.




ಸೋಮನಾಥಪುರದ ಚೆನ್ನಕೇಶವ ದೇವಸ್ಥಾನದ ಆವರಣದಲ್ಲಿ ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿನ ಪ್ರವಾಸೋದ್ಯಮ ಮತ್ತು ಆತಿಥ್ಯ ವಿಭಾಗ ಮತ್ತು ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದ ಬೆಂಗಳೂರು ಕಚೇರಿ ಜಂಟಿ ಆಶ್ರಯದಲ್ಲಿ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಪ್ರಯುಕ್ತ ಮಂಗಳವಾರ ಸ್ವಚ್ಛತಾ ಶ್ರಮದಾನ ನಡೆಯಿತು.

## ಇಂದು ಕಾನೂನು ಅರಿವು ಕಾರ್ಯಕ್ರಮ

ಮೈಸೂರು,ಸೆ.26– ಸೆ.27ರಂದು ಬೆಳಗ್ಗೆ 11.30ಕ್ಕೆ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನ ಸೊಸೈಟಿ ವತಿಯಿಂದ ಬಾಲಕಾರ್ಮಿಕ ಕಿಶೋರ ಕಾರ್ಮಿಕತೆ ನಿಷೇಧ ಹಾಗೂ ನಿಯಂತ್ರಣ, ಮಾನವ ಕಳ್ಳ ಸಾಗಾಣೆ, ಭಿಕ್ಷಾಟನೆ ಕುರಿತು ಕಾನೂನು ಅರಿವು ಕಾರ್ಯಕ್ರಮ ಹಾಗೂ ಸ್ವಯಂ ರಕ್ಷಣಾ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಅಧ್ಯಕ್ಷ ಡಾ.ಕೆ.ವಿ.ರಾಜೇಂದ್ರ ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಉಪ ಪೊಲೀಸ್ ಆಯುಕ್ತ ಮುತ್ತುರಾಜು ಎಂ., ಕೇಂದ್ರಸ್ಥಾನ ಅಪರಾಧ ಮತ್ತು ಸಂಚಾರ ವಿಭಾಗದ ಉಪ ಪೊಲೀಸ್ ಆಯುಕ್ತರಾದ ಎಸ್.ಜಾಹ್ನವಿ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ನಾಜಿಯ ಸುಲ್ತಾನ ಭಾಗವಹಿಸುವರು. ವಿಶೇಷ ಆಹ್ವಾನಿತರಾಗಿ ಜಿಲ್ಲಾ ಮಕ್ಕಳ ರಕ್ಷಣೆ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಯೋಗೇಶ್, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಪ್ರಾಂಶುಪಾಲ ಸೋಮಣ್ಣ ಭಾಗವಹಿಸುವರು. ಯೋಧ ಮಾರ್ಷಲ್ ಆರ್ಟ್ಸ್ ಅಕಾಡೆಮಿಯಿಂದ ಮಹಿಳೆಯರ ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಯುವ ನಿಟ್ಟಿನಲ್ಲಿ ತಾವು ಸ್ವಯಂ ರಕ್ಷಣೆ ಮಾಡಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಉಚಿತ ತರಬೇತಿ ಕಾರ್ಯಾಗಾರವನ್ನು ನಡೆಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

## ಎನ್.ಎಸ್.ನಾರಾಯಣ ನಿಧನ



ಮೈಸೂರು,ಸೆ.26–ವಿದ್ಯಾರಣ್ಯಪುರಂ ನಿವಾಸಿ, ವಿದ್ಯುತ್ ಗುತ್ತಿಗೆದಾರ ಎನ್.ಎಸ್.ನಾರಾಯಣ (60) ಅನಾರೋಗ್ಯ ಕಾರಣ ಮಂಗಳವಾರ ನಿಧನರಾದರು. ಮೃತರು ಪತ್ನಿ ಅಂಜನಾ, ಪುತ್ರಿ ನಯನ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಬುಧವಾರ (ಸೆ.27) ಬೆಳಗ್ಗೆ 9ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರಘಾಟ್‌ನ ಸುಡುವ ಸ್ಮಶಾನದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಅಯೋಧ್ಯೆ ಶ್ರೀರಾಮ ಮಂದಿರ: ಜ.22ರಂದು ಮೂರ್ತಿ ಪ್ರತಿಷ್ಠಾಪನೆ ನಿರೀಕ್ಷೆ



**ನವದೆಹಲಿ:** ಅಯೋಧ್ಯೆ ಶ್ರೀರಾಮಮಂದಿರದಲ್ಲಿ ಜ.22ರಂದು ಮೂರ್ತಿ ಪ್ರತಿಷ್ಠಾಪನ ಕಾರ್ಯಕ್ರಮ ನಡೆಯುವ ನಿರೀಕ್ಷೆಯಿದೆ ಎಂದು ದೇವಾಲಯ ನಿರ್ಮಾಣ ಸಮಿತಿ ಮುಖ್ಯಸ್ಥ ನೃಪೇಂದ್ರ ಮಿಶ್ರಾ ತಿಳಿಸಿದ್ದಾರೆ.

ನೆಲಮಹಡಿಯ ನಿರ್ಮಾಣ ಕಾಮಗಾರಿ ಡಿಸೆಂಬರ್ ಅಂತ್ಯಕ್ಕೆ ಮುಕ್ತಾಯವಾಗಲಿದ್ದು 2024ರ ಜನವರಿ ತಿಂಗಳ 4ನೇ ವಾರದಲ್ಲಿ ಮೂರ್ತಿ ಪ್ರತಿಷ್ಠಾಪನೆ ನಡೆಯುವ ನಿರೀಕ್ಷೆಯಿದೆ ಎಂದರು.

ಜನವರಿ 20ರಿಂದ 24ರ ನಡುವೆ ನಡೆಯುವ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗಿಯಾಗಲಿದ್ದಾರೆ. ಪ್ರತಿಷ್ಠಾಪನೆಯ ಅಂತಿಮ ದಿನಾಂಕವನ್ನು ಮೋದಿ ಅವರಿಗೆ ಇನ್ನೂ ತಿಳಿಸಬೇಕಿದೆ ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ.

ದೇಗುಲದ ಗೋಪುರದಲ್ಲಿ ಅಳವಡಿಸಬೇಕಿರುವ ವಿಶಿಷ್ಟ ಉಪಕರಣದ ವಿನ್ಯಾಸ ಕಾರ್ಯ ಬೆಂಗಳೂರಿನಲ್ಲಿ ನಡೆಯುತ್ತಿದೆ. ಪ್ರತಿ ವರ್ಷ ರಾಮನವಮಿ ದಿನದಂದು ಶ್ರೀರಾಮನ ಹಣೆಗೆ ಸೂರ್ಯನ ಕಿರಣಗಳು ನೇರವಾಗಿ ಬೀಳುವಂತೆ ಮಾಡಲು ಈ ಉಪಕರಣ ಸಹಕಾರಿಯಾಗಿದೆ. ರೂರ್ಕಿಯ ಸೆಂಟ್ರಲ್ ಬಿಲ್ಡಿಂಗ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಮತ್ತು ಪುಣೆಯ ಸಂಸ್ಥೆ ಗಣಕೀಕೃತ ಕಾರ್ಯ ರಚಿಸಿದೆ ಎಂದರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಪಿ.ರಾಜಶೇಖರ

ಜನನ: 12.01.1971 ಮರಣ:17.09.2023

ಇವರು ದಿನಾಂಕ: 17.09.2023 ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 27.09.2023 ಬುಧವಾರ 11.30 ಗಂಟೆಗೆ ಮೃತರ ಸ್ವಗೃಹ ತಾಂಡವಪುರ ಗ್ರಾಮದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಪತ್ನಿ ಶ್ರೀಮತಿ ಉಮಾದೇವಿ, ಮಕ್ಕಳು ಹಾಗೂ ಕುಟುಂಬವರ್ಗದವರು, ತಾಂಡವಪುರ ಗ್ರಾಮ.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

### ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಜೆ.ಎಲ್.ಬಿ.ರಸ್ತೆ, ಮೈಸೂರು

ಸಂಖ್ಯೆ : ಮೈನಪ್ರಾ/ವಿ.ತ–2/2023–24 ದಿನಾಂಕ: 12–09–2023

**ಪತ್ರಿಕಾ ಪ್ರಕಟಣೆ**

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಅಂದಿನ ಸಿ.ಐ.ಟಿ.ಬಿ. ವತಿಯಿಂದ ಸರಸ್ವತಿಪುರಂ ಟಿ.ಕೊಪ್ಪಲ್ ಬಡಾವಣೆಯಲ್ಲಿನ ನಿವೇಶನ ಸಂಖ್ಯೆ –363/ಎ, ಅಳತೆ (50+50)*/2 (40+45)/2 ಅಡಿ ನಿವೇಶನವು ಶ್ರೀ ನೀಲಕಂಠ ರವರಿಗೆ ದಿನಾಂಕ: 30–11–1974ರಂದು ಮಂಜೂರು ಮಾಡಲಾಗಿದ್ದು, ನಂತರ ದಿನಾಂಕ: 12–12–1984 ರಂದು ಸ್ವಾಧೀನ ಪತ್ರವನ್ನು ನೀಡಲಾಗಿರುತ್ತದೆ.

ಮಂಜೂರಾತಿದಾರರಾದ ಶ್ರೀ ನೀಲಕಂಠ ರವರು ಸದರಿ ನಿವೇಶನವನ್ನು ದಿನಾಂಕ: 24–10–1985ರಂದು ಶ್ರೀಮತಿ ಎಂ.ಡಿ. ಭೋಜಮ್ಮ ರವರಿಗೆ ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ನಂತರ ಸದರಿ ಶ್ರೀಮತಿ ಎಂ.ಡಿ. ಭೋಜಮ್ಮರವರು ದಿನಾಂಕ: 15–12–2016ರಂದು ಮರಣ ಹೊಂದಿದ್ದು, ಮೃತರ ವಾರಸುದಾರರ ಮಕ್ಕಳಾದ ಶ್ರೀ ಎಂ.ಡಿ.ಲೋಕನಾಥ್, ಶ್ರೀ ಎಂ.ಡಿ.ಸುಂದರ್, ಶ್ರೀ ಎಂ.ಡಿ.ಮೋಹನ್, ಶ್ರೀಮತಿ ಕಾವೇರಿ, ಶ್ರೀಮತಿ ವಸಂತ ಬಿ.ಡಿ, ಶ್ರೀ ಎಂ.ಡಿ. ವೇಣುಗೋಪಾಲ್, ಶ್ರೀ ಎಂ.ಡಿ.ರಾಧಾಕೃಷ್ಣ, ಮತ್ತು ಶ್ರೀ ಎಂ.ಡಿ.ಶ್ರೀನಿವಾಸರವರು ವಿಭಾಗ ಪತ್ರ ನೋಂದಾಯಿಸಿಕೊಂಡಿದ್ದು, ಸದರಿ ಪತ್ರವು 1ನೇ ಪುಸ್ತಕದ ದಸ್ತಾವೇಜು ನಂಬರ ಎಂವೈಎಸ್ 1–09936–2017–18 ಆಗಿ ಸಿ.ಡಿ.ನಂಬರ್ ಎಂವೈಎಸ್‌ಡಿ 339ನೇ ದ್ದರಲ್ಲಿ ದಿನಾಂಕ: 14–03–2018ರಂದು ನೋಂದಾಯಿಸಲಾಗಿದೆ. ಸದರಿ ಪತ್ರದ 'ಎ' ಷೆಡ್ಯೂಲ್‌ನಂತೆ ಸದರಿ ನಿವೇಶನವು ಶ್ರೀ ಎಂ.ಡಿ.ವೇಣುಗೋಪಾಲ್ ರವರಿಗೆ ಸೇರಿರುತ್ತದೆ.

ಅದರಂತೆ ಅರ್ಜಿದಾರರಾದ ಶ್ರೀ ಎಂ.ಡಿ.ವೇಣುಗೋಪಾಲ್ ರವರು ಸದರಿ ನಿವೇಶನದ ವರ್ಗಾವಣೆ ಮತ್ತು ಕ್ರಯಪತ್ರ ಕೋರಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದು, ಸದರಿಯವರ ಹೆಸರಿಗೆ ಸರಸ್ವತಿಪುರಂ ಟಿ.ಕೊಪ್ಪಲ್ ಬಡಾವಣೆಯಲ್ಲಿನ ನಿವೇಶನ ಸಂಖ್ಯೆ–363/ಎ, ಅಳತೆ (50+50)/2*(40+45)/2 ಅಡಿ ನಿವೇಶನಕ್ಕೆ ವರ್ಗಾವಣೆ ಮಾಡಿ ಕ್ರಯಪತ್ರ ನೀಡುವ ವಿಚಾರದಲ್ಲಿ ಸಂಬಂಧಪಟ್ಟ ಯಾರಿಂದಾದರೂ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 07 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ದೂರು ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಮುಂದಿನ ಕ್ರಮಗೈಗೊಳ್ಳಲಾಗುವುದು.

ಸಹಿ/– ವಿಶೇಷ ತಹಶೀಲ್ದಾರ್
ವಲಯ ಕಛೇರಿ–2
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು







ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476, ಇ–ಮೇಲ್ : purmymul@gmail.com

IFT No: KMF/2023-24/SE0744 ದಿನಾಂಕ: 26.09.2023

**ಟೆಂಡರ್ ಪ್ರಕಟಣೆ – (ಇ–ಟೆಂಡರ್ ಮುಖಾಂತರ ಮಾತ್ರ)**

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟದಿಂದ ಮೈಸೂರು ವಸ್ತು ಪ್ರದರ್ಶನ ಆವರಣದಲ್ಲಿ ವಂದಿನಿ ವಸ್ತು ಪ್ರದರ್ಶನ ಹಾಗೂ ಮಾರಾಟ ಮಳಿಗೆಯನ್ನು 60"X40" ಅಳತೆಯಲ್ಲಿ ಬಾಡಿಗೆ ಆಧಾರದಲ್ಲಿ ನಿರ್ಮಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ದಿನಾಂಕ:03.10.2023, 3ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (6366430803) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು,
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.

ಜೆಎಸ್‌ಎಸ್ ಮಹಾವಿದ್ಯಾಪೀಠ

### ಜೆಎಸ್‌ಎಸ್ ಆರ್‌ಐಎಸ್‌ಡಿಸಿ ಸಂಸ್ಥೆ

ಮರಿಯಾಲ, ಚಾಮರಾಜನಗರ – 571 313

**ಟೆಂಡರ್ ಪ್ರಕಟಣೆ**

ಜೆಎಸ್‌ಎಸ್ ಆರ್‌ಐಎಸ್‌ಡಿಸಿ ಮರಿಯಾಲದ ಆವರಣದಲ್ಲಿರುವ ಬಿದಿರಿನ **ಬಂಬುಗಳನ್ನು ಕತ್ತರಿಸುವ, ವಿಂಗಡಿಸುವ ಹಾಗೂ ಅಗರಬತ್ತಿ ಕಡ್ಡಿಗಳನ್ನು ತಯಾರಿಸುವ 10 ಯಂತ್ರಗಳು ಮತ್ತು 1 ಬಿದಿರಿನ ಕಡ್ಡಿಗಳನ್ನು ಒಣಗಿಸುವ ಯಂತ್ರವನ್ನು** ಟೆಂಡರ್ ಮೂಲಕ ವಿಲೇವಾರಿ ಮಾಡಲು ಉದ್ದೇಶಿಸಿದೆ. ಸದರಿ ಯಂತ್ರೋಪಕರಣಗಳನ್ನು ಜೆಎಸ್‌ಎಸ್ ಆರ್‌ಐಎಸ್‌ಡಿಸಿ ಆವರಣದಲ್ಲಿ ಪ್ರದರ್ಶನಕ್ಕೆ (ಕಛೇರಿ ಸಮಯ ಬೆಳಗ್ಗೆ 10.30 ರಿಂದ 5.30 ರವರೆಗೆ) ಇಡಲಾಗಿದೆ. ಈ ಯಂತ್ರಗಳನ್ನು ಖರೀದಿಸಲು ಆಸಕ್ತಿಯುಳ್ಳವರು ಸ್ಪರ್ಧಾತ್ಮಕ ದರವನ್ನು ನಮೂದಿಸಿ (ನಿಯಮಾನುಸಾರ ಜಿ.ಎಸ್.ಟಿ ಅನ್ವಯಿಸುತ್ತದೆ) **ಸಂಯೋಜಕರು, ಜೆಎಸ್‌ಎಸ್ ಆರ್‌ಐಎಸ್‌ಡಿಸಿ, ಮರಿಯಾಲ** ರವರಿಗೆ ದಿನಾಂಕ **27.09.2023** ರಿಂದ **16.10.2023** ರೊಳಗೆ ಮೊಹರು ಕವರ್ ಮೂಲಕ ಸಲ್ಲಿಸುವುದು. ವಿಲೇವಾರಿ ವಿಷಯದಲ್ಲಿ ಆಡಳಿತ ಮಂಡಳಿಯ ನಿರ್ಧಾರವೇ ಅಂತಿಮವಾಗಿರುತ್ತದೆ. ಟೆಂಡರ್‌ನ್ನು ದಿನಾಂಕ: **17.10.2023** ರಂದು ತೆರೆಯಲಾಗುವುದು.

ಸಂಯೋಜಕರು
ಜೆಎಸ್‌ಎಸ್ ಆರ್‌ಐಎಸ್‌ಡಿಸಿ ಸಂಸ್ಥೆ
ಮರಿಯಾಲ, ಚಾಮರಾಜನಗರ
ಮೊ: 96637 47266, 99016 28639